ಶ್ರೀ ಕೆ. ಚಂದ್ರಶೇಖರ್ : ಎರಡು ವರ್ಷದಲ್ಲಿ ನಾನು ಇದೇ ಮೊದಲನೇ ಸಲ ಅವಕಾಶ ಕೇಳಿರುವುದು. ಎರಡು ವರ್ಷದಲ್ಲಿ ಮೊದಲನೇ ಸಾರಿ ಮಾತನಾಡುತ್ತೇನೆ ಎಂದು ನಾನು ನಿನ್ನೆಯಿಂದ ಕೇಳುತ್ತಿದ್ದೇನೆ. ನಿಮಗೆ ನಮ್ಮ ಮೇಲೆ ಒಂದು ಸ್ವಲ್ಪ ಪ್ರೀತಿ, ಅನುಕಂಪ ಇಲ್ಲವೇ ಅಧ್ಯಕ್ಷರೇ?

ಅಧ್ಯಕ್ಷರು : ಕುಳಿತುಕೊಳ್ಳಿ ಅಂದರೆ ಮತ್ತೆ ಮತ್ತೆ ನಿಂತು ಮಾತನಾಡುತ್ತೀರಿ. No. No. No.

ಶ್ರೀ ಕೆ. ಚಂದ್ರಶೇಖರ್ : ಎರಡು ವರ್ಷಗಳಲ್ಲಿ ಮೊದಲನೇ ಬಾರಿ ಕೇಳುತ್ತಿದ್ದೇನೆ.

ಅಧ್ಯಕ್ಷರು : ಈ ರೀತಿ ಹೇಳುವುದು ಸರಿಯಲ್ಲ. ರೆಸ್ಪೆಕ್ಟೀವ್ ಪಾರ್ಟೀಸ್ ಯಾರ ಪಟ್ಟಿಯನ್ನು ಕೊಡುತ್ತಾರೆ, ನಾವು ಅವರಿಗೆ ಅವಕಾಶ ಕೊಡುತ್ತಾ ಹೋಗುತ್ತೇವೆ. ಏನು ಮಾಡುವುದು ಹೇಳಿ?

7. ಘನತೆವೆತ್ತ ರಾಷ್ಟ್ರಪತಿಯವರ ಭಾಷಣದ ಮೇಲೆ ಚರ್ಚೆ ಮತ್ತು ಸರ್ಕಾರದ ಪ್ರತಿಕ್ರಿಯೆ(ಮುಂದು).

ಶ್ರೀ ಎಂ. ಪಿ. ಪ್ರಕಾಶ್ (ಹೂವಿನ ಹಡಗಲಿ) : ಮಾನ್ಯ ಅಧ್ಯಕ್ಷರೇ, ಬಹಳ ಮಹತ್ವವಾಗಿರತಕ್ಕಂಥ ವಿಷಯದಲ್ಲಿ ನಮ್ಮ ಸದನ ಒಂದು ಒಳ್ಳೆಯ ನಿರ್ಧಾರವನ್ನು ತೆಗೆದುಕೊಂಡಿದೆ ಮಾನ್ಯ ರಾಷ್ಟ್ರಪತಿಗಳು ಈ ಜಂಟಿ ಅಧಿವೇಶನದಲ್ಲಿ ದಯಪಾಲಿಸಿದಂಥ ಅವರ ಹನ್ನೊಂದು ಸೂತ್ರಗಳ ಬಗ್ಗೆ ಚರ್ಚೆಮಾಡಬೇಕು ಎನ್ನುವ ನಿರ್ಣಯವೇ ಒಂದು ಮಹತ್ತರವಾಗಿರತಕ್ಕಂಥ, ಶಾಸಕಾಂಗದ ವಿಧಿವಿಧಾನಗಳಲ್ಲಿ, ಒಂದು ಉತ್ತಮವಾದಂಥ ಹೆಜ್ಜೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಅವರು ಇಲ್ಲಿ ಮಾತನಾಡಿದ ವಿಚಾರದಲ್ಲಿ ಚರ್ಚೆ ಅಗತ್ಯವಿದೆಯೇ, ಎನ್ನುವ ವಿಚಾರದಲ್ಲಿ ತಮ್ಮ ವಿವೇಚನೆಗೆ ಮಾನ್ಯ ಮಾಧುಸ್ವಾಮಿಯವರು ಬಿಟ್ಟಿದ್ದರು. ಈಗಾಗಲೇ ನಾವೆಲ್ಲರೂ ಚರ್ಚೆಯಲ್ಲಿ ಪಾಲ್ಗೊಳ್ಳಬೇಕು, ಈ ವಿಷಯವನ್ನು ಮಾತನಾಡಬೇಕು ಎಂದು ಪ್ರತಿಯೊಬ್ಬರೂ ಹೇಳಿದಂಥ ಸಂದರ್ಭದಲ್ಲಿ, ಇಂಥ ಒಂದು ಉತ್ತಮವಾದಂಥ ಸಲಹೆ ಬಂದಾಗ ಇಡೀ ಸದನ ಕರ್ನಾಟಕವನ್ನು ಒಂದು ಸಫಲವಾದ, ಸಮೃದ್ಧಿಯಾದ, ಸ್ವಾಭಿಮಾನದ ಒಂದು ರಾಜ್ಯವನ್ನಾಗಿ ಕಟ್ಟಬೇಕು ಎನ್ನುವ ಕಾರಣಕ್ಕಾಗಿಯೇ ಈ ಎಲ್ಲಾ ಸದಸ್ಯರೂ ಕೂಡ ಸುಮಾರು 5 ಕೋಟಿ 27 ಲಕ್ಷ ಜನತೆಯ ಭಾವನೆಯನ್ನು ಅಭಿವ್ಯಕ್ತಿಗೊಳಿಸಿದ್ದಾರೆ. ಅನೇಕರು ಉತ್ತಮವಾಗಿರತಕ್ಕಂಥ ಸಲಹೆಗಳನ್ನೂ ಕೂಡ ಮಾಡಿದ್ದಾರೆ. ಆದರೆ ಇಲ್ಲಿ ನಾವು ಪರಿಗಣಿಸಬೇಕಾದಂಥ ಅತ್ಯಂತ ಮುಖ್ಯವಾದ ಒಂದು ವಿಷಯ ಎಂದರೆ, ಅಭಿವೃದ್ಧಿಯ ಬಗ್ಗೆ ನಾವು ಒಂದು ಹೊಸ ವ್ಯಾಖ್ಯಾನವನ್ನು ಬರೆಯಬೇಕಾಗುತ್ತದೆ. ಈ ಅಭಿವೃದ್ಧಿ ಎನ್ನುವಂಥಾದ್ದು ಜನರಿಗೆ ಆಹಾರವಾಗಿ, ಆರೋಗ್ಯವಾಗಿ, ಆಶ್ರಯವಾಗಿ, ಅಕ್ಷರವಾಗಿ ಕರ್ನಾಟಕದ 5 ಕೋಟಿ 27 ಲಕ್ಷ ಜನರನ್ನು ಒಳಗೊಂಡಿದೆಯೇ, ಇಲ್ಲವೇ ಎನ್ನುವಂಥಾದ್ದನ್ನು ನಾವು ನೋಡಬೇಕಾಗುತ್ತದೆ. ಅದು ಮೊದಲು ಆಹಾರವಾಗಬೇಕು, ಆಶ್ರಯವಾಗಬೇಕು, ಆರೋಗ್ಯವಾಗಬೇಕು, ಅಕ್ಷರವಾಗಬೇಕು. ಇಷ್ಟು ಆದಾಗ ಮಾತ್ರ ಅಭಿವೃದ್ಧಿಎನ್ನುವಂಥಾದ್ದರ ಒಂದು ವ್ಯಾಖ್ಯಾನ ನಿಜವಾದಂಥ ಅರ್ಥದಲ್ಲಿ ನಮಗೆ ತಿಳಿಯಲಿಕ್ಕೆ ಸಾಧ್ಯತೆಯಾಗುತ್ತದೆ. ಅಭಿವೃದ್ಧಿ ಎನ್ನುವಂಥಾದ್ದು ಕೇವಲ ಒಂದು ಸೇವಾ ಕ್ಷೇತ್ರದಲ್ಲಿ ಸೀಮಿತವಾಗಿದ್ದು, ಅದರ ಮೂಲಕವಾಗಿ ನಗರೀಕರಣಕ್ಕೆ ಒಳಗಾಗಿರತಕ್ಕಂಥ ಕೆಲವು ಪ್ರದೇಶಗಳಿಗೆ ಅದರ ಲಾಭವನ್ನು ಪಡೆಯುವಂಥಾದ್ದು ಆಗಿದ್ದರೆ, 100ಕ್ಕೆ 40ಕ್ಕಿಂತಲೂ ಹೆಚ್ಚು ಜನ, ಅಂದರೆ ಸುಮಾರು 320 ದಶಲಕ್ಷ ಜನಗಳ ವಿಚಾರಗಳ

ಬಗ್ಗೆ ನಾವು ವಿವೇಚನೆಯನ್ನು ಮಾಡಬೇಕಾಗುತ್ತದೆ. ಸಂಯುಕ್ತ ರಾಷ್ಟ್ರ ಸಂಸ್ಥೆಯವರು ಇತ್ತೀಚೆಗೆ ಹೊರಡಿಸಿರತಕ್ಕಂಥ ಒಂದು ಪ್ರಕಟಣೆಯಲ್ಲಿ, ಈ ವಿಶ್ವದಲ್ಲಿ ಪ್ರತಿರಾತ್ರಿ 800 ದಶಲಕ್ಷ ಜನ ಉಪವಾಸದಿಂದ ಮಲಗುತ್ತಿದ್ದಾರೆ ಎಂದು ಹೇಳಿದ್ದಾರೆ. ಹೀಗೆ ಮಲಗುತ್ತಿರತಕ್ಕಂಥ 800 ದಶಲಕ್ಷ ಜನರಲ್ಲಿ 320 ದಶಲಕ್ಷ ಜನ ಭಾರತೀಯರಾಗಿದ್ದಾರೆ. ಅನ್ನುವಂಥ ಮಾತನ್ನು ಅವರು ಹೇಳುತ್ತಾರೆ. ಈ ರೀತಿಯಾಗಿರತಕ್ಕಂಥ ಅಭಿವೃದ್ಧಿ ಎನ್ನುವಂಥಾದ್ದು ನಮಗೆ ಅಸಮಾನತೆಯನ್ನು, ಅಸಮಾನತೆಯ ಕ್ಷೋಭೆಯನ್ನು ತರುತ್ತದೆ. ಈ ಎಲ್ಲಾ ವಿಚಾರಗಳೂ ಕೂಡ ಅದು ಭೋಗ ಸಂಸ್ಕೃತಿಗೆ ಎಡೆಮಾಡಿಕೊಡತಕ್ಕಂಥಾದನ್ನೂ ಕೂಡ ನಾವು ಕಾಣುತ್ತೇವೆ. ಈ ವಿಚಾರದ ಬಗ್ಗೆ ಇಲ್ಲಿ ಅನೇಕ ವಿಷಯಗಳ ಬಗ್ಗೆ, ತಮ್ಮದೇ ಆಗಿರತಕ್ಕಂಥ ನಮ್ಮ ಸಂಪ್ರದಾಯ, ನಮ್ಮ ಸಂಸ್ಕೃತಿ ನಮ್ಮ ಸಾಂಸ್ಕೃತಿಕ ವ್ಯವಸ್ಥೆ, ಆಚಾರ ವಿಚಾರಗಳ ಕುರಿತಾಗಿಯೂ ಕೂಡ ಮಾತನಾಡಿದ್ದಾರೆ. ಅನೇಕ ಕಡೆಗಳಲ್ಲಿ ನಮ್ಮ ತಪ್ಪು ಅಭಿಪ್ರಾಯಗಳು ಹೇಗೆ ಬರುತ್ತವೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇವೆ. ಗೌತಮ ಬುದ್ಧ ಮುಪ್ಪನ್ನು ನೋಡಿ, ಸಾವನ್ನು ನೋಡಿ ಅಥವಾ ಅಗಲಿದವರನ್ನು ನೋಡಿ, ದುಃಖಿತನಾಗಿ ಆತ ರಾತ್ರೋರಾತ್ರಿ ಮನೆಬಿಟ್ಟು ಹೋದ ಎನ್ನತಕ್ಕಂಥ ಒಂದು ಸುಳ್ಳು ಕಥೆಯನ್ನು ನಮಗೆ ಪೋಣಿಸಿದ್ದಾರೆ. ಆದರೆ, ನಿಜವಾಗಿ ಬುದ್ಧ ಹೋಗಿರತಕ್ಕಂಥಾದ್ದು ಆ ಕಾರಣಕ್ಕಾಗಿ ಅಲ್ಲ. ನಿಮಗೆಲ್ಲಾ ಗೊತ್ತಿದ್ದಂತಹ ಬುದ್ಧನ ಊರು ಶಾಕ್ಯಮುನಿಗಳ ಬುಡಕಟ್ಟಿಗೆ ಸೇರಿರತಕ್ಕಂಥ ಒಂದು ಗಣರಾಜ್ಯ. ಆ ಗಣರಾಜ್ಯದಲ್ಲಿದಂಥ ಜನಗಳಿಗೆ ಬೇರೆಬೇರೆ ಜನಗಳ ಜೊತೆಗೆ ಜಗಳ ಆಗುವಂಥಾದ್ದು ಆಗುತ್ತದೆ. ಪೋಲ್ಯರು ಅನ್ನತಕ್ಕಂಥ ಒಂದು ಬುಡಕಟ್ಟು ಇತ್ತು. ಶಾಕ್ಯರು ಮತ್ತು ಪೋಲ್ಯರಲ್ಲಿ, ಆ ಗಣರಾಜ್ಯದ ನಡುವೆ ನೀರಿನ ಹಂಚಿಕೆ ವಿಚಾರದಲ್ಲಿ ಭಿನ್ನಾಭಿಪ್ರಾಯ ಬರುತ್ತದೆ. ಆ ನೀರಿನ ಹಂಚಿಕೆ ವಿಚಾರ ಬಂದಾಗ ಶಾಕ್ಯರು, ಅವರ ಮೇಲೆ ದಂಡೆತ್ತಿ ಹೋಗಿ ಯುದ್ಧದ ಮೂಲಕವಾಗಿ ಉತ್ತರವನ್ನು ಕಂಡುಕೊಳ್ಳಬೇಕು ಎಂದು ತೀರ್ಮಾನ ಮಾಡುತ್ತಾರೆ. ನಮಗೆ ಹೇಗೆ ಈಗ ಕೃಷ್ಣಾ ನದಿ ವಿವಾದ, ಕಾವೇರಿ ನದಿಯ ವಿವಾದ ಶುರುವಾಗುತ್ತದೆ ಅದೇ ರೀತಿ ಆಗಿತ್ತು. ಆ ಸಂದರ್ಭದಲ್ಲಿ ಗೌತಮ ಬುದ್ಧ ಹೇಳುತ್ತಾನೆ, ಇಲ್ಲ, ಈ ತರಹದ ಯುದ್ಧವನ್ನು ಮಾಡತಕ್ಕಂಥಾದ್ದು ನಮಗೆ ಪರಿಹಾರವಲ್ಲ, ದ್ವೇಷದಿಂದ ದ್ವೇಷವನ್ನು ನಾವು ಅಳಿಸಿ ಹಾಕುವುದಕ್ಕಾಗುವುದಿಲ್ಲ. ಆ ಕಾರಣಕ್ಕಾಗಿ, ನಾವು ಅವರ ಜೊತೆಗೆ ಮಾತುಕತೆಯನ್ನು ಮಾಡಿ, ನೀರಿನ ಹಂಚಿಕೆಯ ವಿಷಯದಲ್ಲಿ ಒಂದು ಸಮತೋಲನವನ್ನು ಕಾಪಾಡಿಕೊಳ್ಳೋಣ ಎಂದು ಹೇಳಿದಾಗ, ಅಲ್ಲಿಯ ಗಣರಾಜ್ಯ ಪರಿಷತ್ತು ಈತನಿಗೆ ಮೂರು ಶಿಕ್ಷೆಗಳಲ್ಲಿ ಒಂದನ್ನು ನೀನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಇದೆ ಎಂದು ಹೇಳುತ್ತದೆ. ಒಂದನೆಯದು, ನಿನ್ನ ತಂದೆ–ತಾಯಿಗಳ ಸಂಪತ್ತನ್ನು ರಾಜ್ಯ ಮುಟ್ಟುಗೋಲು ಹಾಕಿಕೊಳ್ಳುತ್ತದೆ, ಎರಡನೆಯದು, ನಿನಗೆ ಮರಣ ದಂಡನೆಯನ್ನು ಕೊಡುತ್ತೇವೆ, ಮೂರನೆಯದು, ನೀನು ದೇಶಭ್ರಷ್ಟನಾಗಿ ಹೋಗಬೇಕು ಎಂದು ಹೇಳುತ್ತದೆ ಹಾಗೆ, ದೇಶಭ್ರಷ್ಟನಾಗಿ ಹೋದಂಥ ಸಂದರ್ಭದಲ್ಲಿ ಆತ ಹೊರಗಡೆಗೆ ಹೋದಂಥ ಉರವೇಲು ಎನ್ನತಕ್ಕಂಥ ಊರಿನಲ್ಲಿ ಆತ ನನ್ನ ಬುದ್ಧ ಪ್ರತಿಮೆಯನ್ನು ಪಡೆದಿರತಕ್ಕಂಥಾದ್ದನ್ನು ಕಾಣುತ್ತೇವೆ. ಇದರ ಅರ್ಥ ಏನನ್ನಿಸಿತು ಎಂದರೆ, ಇದರಲ್ಲಿರತಕ್ಕಂಥಾದ್ದು ಏನೆಂದರೆ, ಇಂದ್ರಿಯ ನಿಗ್ರಹವನ್ನು ಮಾಡಿಕೊಳ್ಳಲಿಕ್ಕೆ ಬೇಕಾಗಿದ್ದಾಗ ಓದು, ಚಿಂತನೆ, ಕರುಣೆ, ಸಮಾನತೆ ಇವೆಲ್ಲವುಗಳೂ ಇದ್ದಾಗ ಮಾತ್ರ, ಸಮಾನವಾಗಿರತಕ್ಕಂಥ ಒಂದು ಸಮಾಜವನ್ನು ಸಮಾಧಾನದ ಸ್ಥಿತಿಯಲ್ಲಿ

ತೆಗೆದುಕೊಂಡು ಹೋಗಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿ, ಪ್ರಥಮ ಪ್ರವಚನವನ್ನು ಸಾರನಾಥದಲ್ಲಿ ಮಾಡಿದಂಥ ಸಂದರ್ಭದಲ್ಲಿ ಆತ 'ಹಸಿದವರಿಗೆ ನಾನು ಉಪದೇಶವನ್ನು ಕೊಡುವುದಿಲ್ಲ' ಎಂದು ಹೇಳುತ್ತಾನೆ. ಯಾರು ಹಸಿದುಕೊಂಡಿರುತ್ತಾರೆ, ಅವರಿಗೆ ನೀವು ಮೌಲ್ಯದ ಮಾತುಗಳನ್ನಾಗಲೀ, ಸತ್ಯದ, ಶಿವನ, ಸೌಂದರ್ಯದ ಸ್ವರೂಪದ ಮಾತುಗಳನ್ನಾಗಲೀ ಮಾತನಾಡಿದರೆ ಅದು ಆತನಿಗೆ ಹಿಡಿಸುವುದಿಲ್ಲ. ಗ್ರಾಹ್ಯವಾಗುವುದಿಲ್ಲ. ಆ ಕಾರಣಕ್ಕಾಗಿಯೇ ನಾವು ಮೊದಲು ಆಹಾರದ ಚಿಂತನೆಯನ್ನು ತೆಗೆದುಹಾಕತಕ್ಕಂಥ ಕೆಲಸವನ್ನು ಮಾಡಬೇಕು. ಆಹಾರ ಎಂದರೆ ಹಸಿವನ್ನು ತೆಗೆದು ಹಾಕತಕ್ಕಂಥಾದ್ದು. ಈ ಹಸಿವಿನಲ್ಲಿ ಎರಡು ತರಹದ ಹಸಿವು ಇದೆ. ಒಂದು start naked hunger ----- ಇನ್ನೊಂದು hidden hunger ----- ನಮಗೆ ಕಣ್ಣಿಗೆ ಕಾಣುವಂಥ, ಕಸಿದು ತಿನ್ನುವಂಥ ಒಂದು ದೊಡ್ಡ ಹಸಿವಿರತಕ್ಕಂಥಾದ್ದು ಒಂದು ಕಡೆಗಿದ್ದರೆ, ಮತ್ತೊಂದು ಕಡೆಗೆ ನಮಗೆ ಗೊತ್ತಿಲ್ಲದೇ ಇರತಕ್ಕಂಥ ಹಸಿವು ಕೂಡ ಇದೆ. ಆ ಗೊತ್ತಿಲ್ಲದ ಹಸಿವನ್ನು ತುಂಬಿಸಲಿಕ್ಕೆ ಅನೇಕ ಕಡೆಗಳಲ್ಲಿ ಈ ವಿಚಾರಗಳು ಚರ್ಚೆಯಾಗುತ್ತಿವೆ. ನಾವು ಎತ್ತಿರತಕ್ಕಂಥ ಅನೇಕ ಪ್ರಶ್ನೆಗಳಲ್ಲಿ, ಇವತ್ತು ನಿಮಗೆಲ್ಲಾ ಗೊತ್ತಾಗಿರಬಹುದು. 30 ದಶಲಕ್ಷ ಟನ್ ಆಹಾರ ಧಾನ್ಯ ಪ್ರತಿ ಸಂದರ್ಭಗಳಲ್ಲಿಯೂ ಕೂಡ ಇರತಕ್ಕಂಥಾದ್ದು ಇದೆ ನಮ್ಮಲ್ಲಿ. ಅದು ನಮ್ಮ ಅಕ್ಕಿ ಮತ್ತು ಗೋಧಿ. ನಾವು ಮಾಡಿರತಕ್ಕಂಥ ಹಸಿರು ಕ್ರಾಂತಿಯ ಕಾರಣಕ್ಕಾಗಿ ಒಂದು ಬಾರಿ 60 ಮಿಲಿಯ ಟನ್ ಇದ್ದಿರತಕ್ಕಂಥಾದ್ದನ್ನು ಕೂಡ ಕಂಡಿದ್ದೇವೆ. ಇವು ನಿಮಗೆ ಗೊತ್ತಿದ್ದ ಹಾಗೆ ಈ ಜೈವಿಕ ವಿಚಾರಗಳ ಬಗ್ಗೆ bio techನ ಮೂಲಕವಾಗಿ ಬದಲಾವಣೆ ಮಾಡಿರತಕ್ಕಂಥಾದ್ದೇನಲ್ಲ. Genetic modification ಎನ್ನತಕ್ಕಂಥ ಒಂದು ಅಪಾಯಕಾರಿಯಾಗಿರತಕ್ಕಂಥ ವ್ಯವಸ್ಥೆಯನ್ನು bio tech ನಲ್ಲಿ ಮಾಡತಕ್ಕಂಥದ್ದನ್ನು ನಾವು ಕಾಣುತ್ತಿದೇವೆ. ಇವತ್ತು bio tech ವಿಚಾರದಲ್ಲಿ ಬಹಳ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಆಗಿರತಕ್ಕಂಥ ಅನ್ಯಾಯಗಳೇನು ಎನ್ನುವುದು ನಾವು ನೋಡಬೇಕಾಗಿದೆ. ಅದಕ್ಕಿಂತ ಪೂರ್ವದಲ್ಲಿ ನಾವು ಯೋಚನೆ ಮಾಡಬೇಕಾಗಿರತಕ್ಕಂಥ ಏನೆಂದರೆ ಈ ಪ್ರಪಂಚದಲ್ಲಿ ಪ್ರತಿಯೊಬ್ಬರಿಗೂ ಕೂಡ ಅವನು ಬದುಕಲಿಕ್ಕೆ ಬೇಕಾಗಿರತಕ್ಕಂಥದ್ದು ಎಲ್ಲಾ ಅನುಕೂಲಗಳೂ ಕೂಡ ಇವೆ. ಆದರೆ, ನಾವು ಹೆಚ್ಚಾಗಿ ದುರಾಸೆಗಳ ಮೂಲಕವಾಗಿ ಮಾಡತಕ್ಕಂಥದ್ದೇನಿದೆ ಅದು ಅಪಾಯಕಾರಿ ಎಂದು ಗಾಂಧಿ ಹೇಳುತ್ತಾರೆ. "There is enough in the World for everybody's need. But, there cannot be enough in the World for everybody's greed" ಎಂದು ಹೇಳುತ್ತಾರೆ. ನಮ್ಮ ಪ್ರತಿಯೊಬ್ಬರ ದುರಾಸೆಗಳೇನಿವೆ, ಈ ದುರಾಸೆಗೆ ಇಲ್ಲಿ ಸಿಗಲಿಕ್ಕೆ ಅಂಥದ್ದೇನಿಲ್ಲ. "There is enough in the World for everybody's need. But, there cannot be enough in the World for everybody's greed" ಅನ್ನತಕ್ಕಂಥಾದ್ದು ಇದೆ. ಈ greedಗೆ ಒಳಗಾಗಿರತಕ್ಕಂಥಾದ್ದು ನಮ್ಮ ಗುಲಾಮಗಿರಿಯ ಕಾನೂನು ಕೂಡ ಆಗಿದೆ. ಸನ್ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರಬಹುದು. 17ನೇ ಶತಮಾನದಲ್ಲಿ ನಮಗೆ ಇಡೀ ದೇಶದಲ್ಲಿ ಮಾನವ ಸಂಪನ್ಮೂಲದ ಸೂಚ್ಯಂಕದಲ್ಲಿ ಭಾರತ ಬಹಳ ಮುಖ್ಯವಾದಂಥ ಸ್ಥಾನವನ್ನು ಪಡೆದಂಥಾದ್ದು ಇದೆ. ನಾನು ಇದನ್ನು ಹೇಳತಕ್ಕಂಥ ಮಾತಲ್ಲ. ಈ ಪ್ರಪಂಚದ ಆರ್ಥಿಕ ವಿಚಾರಗಳ ಬಗ್ಗೆ Angus Maddison ಎನ್ನತಕ್ಕಂಥವರು ಹೇಳುತ್ತಾರೆ – ಅವತ್ತು ಇಡೀ ಪ್ರಪಂಚದ ಆದಾಯದಲ್ಲಿ 17ನೇ

ಶತಮಾನದಲ್ಲಿ ನಮ್ಮ ಪಾಲು 22.6 ಪರ್ಸೆಂಟ್ ಇತ್ತು 17ನೇ ಶತಮಾನದಲ್ಲಿ ನಮ್ಮ ಇಡೀ ಪ್ರಪಂಚದ ಒಟ್ಟು ಉತ್ಪನ್ನದಲ್ಲಿ ಭಾರತ ದೇಶದ ಪಾಲು 22.6 ಪರ್ಸೆಂಟ್ ಇತ್ತು ಇಡೀ ಯೂರೋಪ್‌ನಲ್ಲಿರತಕ್ಕಂಥ ಎಲ್ಲಾ ರಾಷ್ಟ್ರಗಳ ಪಾಲು ಕೂಡ 23.3 ಪರ್ಸೆಂಟ್ ಇತ್ತು. ಆದರೆ ಇವತ್ತು it has been flung to 3.8% in 1952. ಅಂದರೆ 3.8 ಪರ್ಸೆಂಟ್‌ಗೆ ಇಡೀ ಪ್ರಪಂಚದ ಆದಾಯದಲ್ಲಿ ನಾವು ಕೊಡತಕ್ಕಂಥವರಾಗಿದ್ದೇವೆಂದರೆ ಸುಮಾರು ೨೫೦ ವರ್ಷಗಳ ಕಾಲ ಗುಲಾಮಗಿರಿಯಲ್ಲಿ ತೊಡಗಿರತಕ್ಕಂಥ ನಮ್ಮ ದೇಶದ ಮೇಲೆ ಆದಂಥ ಒಂದು ದುರಾಕ್ರಮಣ, ಅದರ ಮೇಲೆ ಆಗಿರತಕ್ಕಂಥ ದಬ್ಬಾಳಿಕೆ, ನಮ್ಮ ಆರ್ಥಿಕ ಚಿಂತನೆಗಳಿಗೆ ಕೊಟ್ಟಿರತಕ್ಕಂಥ ಎಡೆಬಿಡಂಗಿತನದ ಕಾರಣಕ್ಕಾಗಿಯೇ ನಾವು ಇಷ್ಟು ಅಪಾಯದ ಸ್ಥಿತಿಯಲ್ಲಿ ಸೇರಿಕೊಂಡಿದ್ದೇವೆ. ಆದರೆ ಇವತ್ತು ಭಾರತದ ಪರಿಸ್ಥಿತಿ ಏನಿದೆಯೆಂದರೆ, ಪ್ರಪಂಚದ ೧೭೭ ದೇಶಗಳಲ್ಲಿ ನಮ್ಮ ಸ್ಥಾನ ೧೨೭ ರಲ್ಲಿದೆ. ಚೈನಾ 85 ನೇ ಸ್ಥಾನದಲ್ಲಿದೆ. ಅಂದರೆ ಅಷ್ಟು ಬಡತನಕ್ಕೆ ಒಳಗಾಗಿರತಕ್ಕಂಥವರು ನಾವಾಗಿದ್ದೇವೆ. ಇದಕ್ಕೆ ನಾವು ಏನನ್ನಬೇಕು ? ನಾವು ಅನೇಕ ಸಂದರ್ಭಗಳಲ್ಲಿ ಸಮಾಜವಾದದ ಬಗ್ಗೆ ಮಾತನಾಡುತ್ತೇವೆ. ಅನೇಕ ಸಂದರ್ಭಗಳಲ್ಲಿ ಉದಾರೀಕರಣದ ಬಗ್ಗೆ ಮಾತನಾಡುತ್ತೇವೆ, ಜಾಗತೀಕರಣದ ಬಗ್ಗೆ ಮಾತನಾಡುತ್ತೇವೆ. ಆದರೆ ಇರತಕ್ಕಂಥ ಪ್ರಶ್ನೆ ಇಷ್ಟೆ Socialism without substance, liberalization without understanding, both are most dangerous things to a developing Country ಎನ್ನತಕ್ಕಂಥ ಮಾತೂ ಕೂಡ ಇದೆ. ನಾವು ಈ ಸಮಾಜವಾದದ ಬಗ್ಗೆ ಮಾತನಾಡುತ್ತಾ ಅದಕ್ಕೆ ಯಾವುದೇ ತರವಾಗಿರತಕ್ಕಂಥ ರಕ್ತ ಮಾಂಸಗಳನ್ನು ತುಂಬದೆ, ಅದಕ್ಕೊಂದು ಗೊತ್ತುಗುರಿಯನ್ನು ಕೂಡ ಕೊಡದೆ, ಆ ಸಮಾಜವಾದದ ಮಾತುಗಳನ್ನೇ ಮಾತನಾಡಿದರೆ ಇವತ್ತು ಎಲ್ಲರಿಗೆ ಕೂಡ ಟೀಕೆ ಟಿಪ್ಪಣಿಗಳಿಗೆ ಒಳಗಾಗಿರುವಂಥ ಮಜಾವಾದಿಗಳ ಶಬ್ದವೇ ಸಮಾಜವಾದ ಅನ್ನತಕ್ಕಂಥ ಮಾತಾಗಿದೆ. ಅದೇ ರೀತಿಯಾಗಿ ನಮಗೆ ಈಗ ಇರತಕ್ಕಂಥ ಈ liberalization ನಾವು ಉದಾರೀಕರಣದ ವ್ಯವಸ್ಥೆಯಲ್ಲಿ ಹೋದಾಗ ಆ ಉದಾರೀಕರಣ ಹೇಗಿರಬೇಕು? ಯಾರ ಪರವಾಗಿರಬೇಕು ಎನ್ನತಕ್ಕಂಥದ್ದು ಬಹಳ ಮುಖ್ಯ. ಈ ಮುಖ್ಯವಾದುದಕ್ಕೆ ಜ್ಞಾನ ಬಹಳ ಮುಖ್ಯವಾಗಿರತಕ್ಕಂಥಾದ್ದು ಇದೆ. ಆದ್ದರಿಂದ, ಅಭಿವೃದ್ಧಿ ಎನ್ನತಕ್ಕಂಥಾದ್ದು ಏನಿದೆ, ಅದು ಅಕ್ಷರಕ್ಕೆ ಸಂಬಂಧಿಸಿದ್ದು. ಅಭಿವೃದ್ಧಿ ಎನ್ನತಕ್ಕಂಥಾದ್ದು ಆಹಾರಕ್ಕೆ ಸಂಬಂಧಿಸಿದ್ದು. ಅಕ್ಷರ, ಆಹಾರ ಇದ್ದವನಿಗೆ ಸಂಬಂಧಿಸಿದ್ದು ಯಾರು ಪೌಷ್ಠಿಕ ಆಹಾರವನ್ನು ತೆಗೆದುಕೊಂಡಿರುತ್ತಾರೆ, ಯಾರ ಮಕ್ಕಳು ಸದೃಢರಾಗಿ ತಮ್ಮ ಬಾಲ್ಯವನ್ನು ಕಳೆಯಲಿಕ್ಕೆ ಸಾಯತೆ ಆಗುತ್ತದೆ ಅವರು ಮಾತ್ರ ಉತ್ತಮವಾದಂಥ ಶಿಕ್ಷಣವನ್ನು ಪಡೆಯುತ್ತಾರೆ ಮತ್ತು ಬುದ್ಧಿವಂತರಾಗುತ್ತಾರೆ ಹಾಗೂ ಪ್ರತಿಭಾಸಂಪನ್ನರಾಗುತ್ತಾರೆ. ಆದರೆ, ನಮಗೆ ಈ ತರಹದ ಯಾವುದೇ ಅನುಕೂಲಗಳನ್ನು ಕಲ್ಪಿಸಿಕೊಡದೇ ಇದ್ದಂಥ ಸಂದರ್ಭದಲ್ಲಿ ನಾವು ಅವರನ್ನು, ಅವರ ಪ್ರತಿಭೆಯನ್ನು ನಿರೀಕ್ಷೆ ಮಾಡಲಿಕ್ಕೆ ಸಾಧ್ಯ ಆಗುವುದಿಲ್ಲ. ಈ ಸಂಪತ್ತಿನ ವಿಚಾರದಲ್ಲಿ ಬಂದಾಗ ನಮ್ಮದೇ ಆಗಿರತಕ್ಕಂಥ ಭಾರತೀಯ ಸಂಸ್ಕೃತಿಯಲ್ಲಿ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಒಂದು ವಿಚಾರದ ಪ್ರಶ್ನೆ ಬರುತ್ತದೆ. ತಮಗೆ ಗೊತ್ತಿರುವ ಹಾಗೆ ಗಾರ್ಗೇಯಿ, ಮೈತ್ರೇಯಿ ಇವರೆಲ್ಲರೂ ಕೂಡ ಮಹಿಳೆಯರಲ್ಲಿ ಅತ್ಯಂತ ಪ್ರತಿಭಾವಂತರಾಗಿರತಕ್ಕಂಥ ವೇದಾಂತಿಗಳಾಗಿದ್ದರು. ಅವರು ಚರಾಚಾರ ಜಗತ್ತಿನ ರಹಸ್ಯಗಳನ್ನು ಕಂಡುಹಿಡಿದಂಥವರೂ ಕೂಡ ಆಗಿದ್ದರು. ಅದರಲ್ಲಿ ಯಾಜ್ಞವಲ್ಕನ ಹೆಂಡತಿಯಾದ ಮೈತ್ರೇಯಿ –"ಇಡೀ ಪ್ರಪಂಚದ ಸಂಪತ್ತೇ ನನಗೆ ಸೇರಿದರೆ ನಾನು

ಅಮರಳಲಾಗಬಲ್ಲನೇ " ಎಂಬ ಒಂದು ಮಾತನ್ನು ಕೇಳುತ್ತಾಳೆ. ಆಗ ಯಾಜ್ಞವಲ್ಕ-"ಸಂಪತ್ತನ್ನು ನೀನು ಪಡೆದಿದ್ದರೆ ಒಬ್ಬ ಶ್ರೀಮಂತನ ಬದುಕಿನಂತೆ ನಿನ್ನ ಬದುಕಾಗುತ್ತದೆಯೇ ವಿನಃ ಅದರಿಂದ ಅಮರತ್ವವನ್ನು ಪಡೆಯಲಿಕ್ಕೆ ಸಾಧ್ಯವಿಲ್ಲ" ಎಂದು ಹೇಳುತ್ತಾನೆ. "ಹಾಗಾದರೆ ಅಮರತ್ವವನ್ನೇ ಪಡೆಯದಿದ್ದರೆ ಈ ಸಂಪತ್ತನ್ನು ಪಡೆದು ನಾನೇನು ಪಡೆಯಬೇಕಾಗುತ್ತದೆ ? ಆದ್ದರಿಂದ ಈ ಸಂಪತ್ತಿನಿಂದ ನನಗೇನೂ ಉಪಯೋಗವಿಲ್ಲ" ಎನ್ನತಕ್ಕಂಥ ಮಾತನ್ನು ಆಕೆ ಹೇಳುತ್ತಾಳೆ. ಹಾಗೆಯೇ, ಇವತ್ತು ಏನು ನಾವು ಸಂಪತ್ತನ್ನು ಸೃಷ್ಟಿ ಮಾಡುತ್ತೇವೆಂದು ಭಾವಿಸಿಕೊಂಡಿದ್ದೇವೆ, ಈ ಸೃಷ್ಟಿಸಿದಂಥ ಸಂಪತ್ತು ಕಟ್ಟಕಡೆಯ, ಕೊನೆಯ ಮನುಷ್ಯನಿಗೆ ದಕ್ಕದೇ ಹೋಗಿದ್ದರೆ ಅದು ಯಾರಿಗೂ ಕೂಡ ಒಂದು ಒಳ್ಳೆಯ, ಸಫಲತೆಯ, ಒಂದು ಧನ್ಯತೆಯ ಮನೋಭಾವನೆಯನ್ನು ಸಮಾಜದಲ್ಲಿ ಕೊಡದೇ ಇದ್ದರೆ, ಶೋಭೆಗೆ ಎಡೆ ಮಾಡಿಕೊಡದೇ ಇದ್ದರೆ, ಆ ಸಂಪತ್ತನ್ನು ತೆಗೆದುಕೊಂಡೂ ಕೂಡ ಪ್ರಯೋಜನ ಇಲ್ಲ. ಇದನ್ನು ಇನ್ನೊಂದು ಅರ್ಥದಲ್ಲಿಯೂ ಕೂಡ ಯೋಚನೆ ಮಾಡಬೇಕಾಗಿದ್ದರೆ, ನಮ್ಮ ಆದಾಯ, ನಮ್ಮ ಸಾಧನೆ, ಇದರ ಜೊತೆಗೆ ಮೌಲ್ಯೀಕರಣವನ್ನು ಮಾಡಬೇಕಾಗುತ್ತದೆ. ಆದಾಯ ನಮಗೆ ಬಂದಿದೆ. ಆದರೆ, ಅದರಿಂದ ಆಗಿರತಕ್ಕಂಥ ಸಾಧನೆ ಏನು ? ಇವತ್ತು ನಮ್ಮ IT, BT ವಿಚಾರಗಳ ಬಗ್ಗೆ ಮಾತನಾಡುತ್ತೇವೆ. ಬೇರೆ ಬೇರೆ ವಿಷಯದಲ್ಲಿ ಬಂದಿರತಕ್ಕಂಥ ಆದಾಯದ ಬಗ್ಗೆ ಮಾತನಾಡುತ್ತೇವೆ. ಆ ಆದಾಯದಿಂದ ಆಗಿರುವಂಥ ಸಾಧನೆ ಏನು ? ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಭೌತಿಕ ವಸ್ತುಗಳನ್ನು ನಾವು ಸೃಷ್ಟಿ ಮಾಡುತ್ತೇವೆ. Material comforts ಅಥವಾ material ಆಗಿರತಕ್ಕಂಥ ಭೌತಕ ವಸ್ತುಗಳು ಏನಿವೆ, ಅವುಗಳ ಧಾರಣಾಶಕ್ತಿ ಸಮಾಜದಲ್ಲಿ ಎಷ್ಟಿದೆ ? ಈ ಭೌತಿಕ ವಸ್ತುಗಳನ್ನು ಸೃಷ್ಟಿ ಮಾಡಿದಾಗ ಅದನ್ನು ಜೀರ್ಣಿಸಿಕೊಳ್ಳುವಂಥ ಶಕ್ತಿ ಸಮಾಜಕ್ಕೆ ಇದೆಯೇ ? ಇರುವುದಾಗಿದ್ದರೆ ಯಾವ ವರ್ಗದ ಜನರಿಗೆ ಆ ಧಾರಣಾಶಕ್ತಿ ಇದೆ ? ಯಾವ ವರ್ಗದ ಜನ ಇದರಿಂದ ವಂಚಿತರಾಗಿದ್ದಾರೆ ? ಸಂಪತ್ತು ಇರುವುದಾಗಿದ್ದರೆ ಆ ಸಂಪತ್ತನ್ನು ಅನುಭವಿಸುವಂಥ ವಿಧಾನ ಯಾವುದು ಎನ್ನುವುದನ್ನು ನಮ್ಮ ಸಂಸ್ಕೃತಿ, ನಮ್ಮ ವಿದ್ಯೆ, ನಮ್ಮ ಸಂಪ್ರದಾಯ, ನಮ್ಮ ಧರ್ಮ, ಈ ನಮ್ಮ ನೀತಿಗಳು ಇದನ್ನು ಕಲಿಸಿಕೊಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನಮ್ಮ ಕರ್ನಾಟಕವನ್ನು ಯೋಚನೆ ಮಾಡಿದರೆ, ಮಧ್ಯಮ ಗತಿಯ ಸಮಾಜ ಎಂದು ನಾವು ಹೇಳಬಹುದು. ಇದು ವೇಗವನ್ನು ಪಡೆದುಕೊಂಡಿದೆ. ಹಸಿರು ಕ್ರಾಂತಿಯ ಸಂದರ್ಭದಲ್ಲಿ ಸ್ವಲ್ಪದರದಲ್ಲಿಯೇ ನಾವು ತಪ್ಪಿಸಿಕೊಂಡೆವು. ಆಂಧ್ರದಲ್ಲಿಯೋ, ಪಂಜಾಬ್‌ನಲ್ಲಿಯೋ, ಹರ್ಯಾಣದಲ್ಲಿಯೋ, ತಮಿಳುನಾಡಿನಲ್ಲಿಯೋ, ಆದಂಥ ರೀತಿಯ ಹಸಿರು ಕ್ರಾಂತಿ ಕರ್ನಾಟಕದಲ್ಲಿ ಆ ತೀವ್ರಗತಿಯಲ್ಲಿ ಆಗಲಿಲ್ಲ. ಆದರೆ, ರಾಜಸ್ಥಾನವೋ ಅಥವಾ cow belt ಎಂದೇನು ಕರೆಯುತ್ತೇವೆ, ರಾಜಸ್ಥಾನವೋ, ಉತ್ತರಪ್ರದೇಶವೋ, ಬಿಹಾರಗಳಿಗೆ ಹೋಲಿಸಿದರೆ ನಾವು ಉತ್ತಮ ಸ್ಥಿತಿಯಲ್ಲಿದ್ದೇವೆ ಆದ್ದರಿಂದ ಇದು ಮಧ್ಯಮ ಗತಿಯ ಸಮಾಜವನ್ನು ನಿರ್ಮಾಣ ಮಾಡುವಂಥ ರೀತಿಯಲ್ಲಿ ನಾವು ಹೇಳಿದ್ದೇವೆ. ಈ ಮಾತನ್ನು ನಮ್ಮ ದೊಡ್ಡ ಆರ್ಥಿಕ ತಜ್ಞರಾದಂಥ ಎಂ.ಎನ್. ಶ್ರೀನಿವಾಸ್ ರವರು James Menor ರವರು R.M.L Patil ರವರು ಇವರೆಲ್ಲಾ ಹೇಳಿದ್ದಾರೆ. ಆ ಕಾರಣಕ್ಕಾಗಿ ನಮ್ಮಲ್ಲಿ ಒಣ ಬೇಸಾಯದಲ್ಲಿ ಬಹಳ ದೊಡ್ಡ ಪ್ರಗತಿಯನ್ನು ನಾವು ಪಡೆದಿದ್ದೇವೆ. 150 ಲಕ್ಷ ಕೃಷಿಕರು ಇವತ್ತು ಒಣ ಬೇಸಾಯದ ಮೇಲೆ ದುಡಿಮೆಯಲ್ಲಿದ್ದಾರೆ. ನಾವು ಹಸಿರು ಕ್ರಾಂತಿಯ ಸಂದರ್ಭದಲ್ಲಿ ನೀರಾವರಿಯ ವಿಚಾರದಲ್ಲಿ ದೊಡ್ಡ ಪ್ರಗತಿಯನ್ನು ಸಾಧಿಸಲಿಕ್ಕೆ ಸಾಧ್ಯವಾಗಲಿಲ್ಲ. ಆದರೆ ಒಣ

ಬೇಸಾಯದಲ್ಲಿ ಬಹಳ ಚೆನ್ನಾಗಿ ಇರತಕ್ಕಂಥಾದ್ದನ್ನು ಮಾಡಿದ್ದೇವೆ. ಆದರೆ, ಕೈಗಾರಿಕಾ ದೃಷ್ಟಿಯಲ್ಲಿ ನಾವು ಯಾವ ಮಟ್ಟದಲ್ಲಿ ಇದ್ದೇವೆಂದರೆ ಗುಜರಾತ್ ಮತ್ತು ಮಹಾರಾಷ್ಟ್ರಕ್ಕಿಂತ ಹಿಂದಿದ್ದೇವೆ. ನಮ್ಮ ಕೃಷಿ ವಲಯಗಳ ಸಂದರ್ಭದಲ್ಲಿ ಆಂಧ್ರ, ತಮಿಳುನಾಡು, ಹರ್‍ಯಾಣ, ಪಂಜಾಬ್‌ಗಳಿಗಿಂತ ನಾವು ಕೆಳಗಡೆ ಇದ್ದೇವೆ. ಅದಕ್ಕೆ ನಾವು ಇದು ಆರೋಹಣಾದಿ ಅಸಮಾನತೆ ಎಂದು ಕರೆಯಬಹುದು. Pyramidical structure ಎಂದೇನು ಕರೆಯುತ್ತೇವೆ, ಆರೋಹಣಾದಿ ಅಸಮಾನತೆ, ಇವತ್ತು ಇಲ್ಲಿ ಮಾನ್ಯ ಮಾಧುಸ್ವಾಮಿಯವರು ಪ್ರಸ್ತಾಪಿಸಿರತಕ್ಕಂಥ ಪ್ರಶ್ನೆಯ ಬಗ್ಗೆ ಮಾನ್ಯ ಶಾಸಕರಾಗಿರತಕ್ಕಂಥ ಕೆ. ಚಂದ್ರಶೇಖರ್‌ರವರು, ಸೋಮಣ್ಣನವರು, ನರೇಂದ್ರಬಾಬುರವರು ಆಕ್ಷೇಪಣೆಯನ್ನು ಎತ್ತಿದ್ದಾರೆ. ಅದು ನಿಜ. ಅವರ ಮಟ್ಟಿಗೆ, ಅವರ ಕ್ಷೇತ್ರದ ಮಟ್ಟಿಗೆ ಬೆಂಗಳೂರಿನ ವಿಚಾರದಲ್ಲಿ ನೀವು ಏಕೆ ಈ ತರಹದ ಕೊಂಕು ಮಾತು ಮಾತನಾಡುತ್ತೀರಿ ಎಂಬ ಮಾತನ್ನು ಅವರು ಎತ್ತಿರಬಹುದು. ಆದರೆ, ಬೆಂಗಳೂರೇ ಇಡೀ ಕರ್ನಾಟಕ ಅಲ್ಲ. ಬೆಂಗಳೂರಿನಲ್ಲಿ ಇಷ್ಟು ಆರ್ಥಿಕ ಸಂಪನ್ನವನ್ನು ಉತ್ಪಾದನೆ ಮಾಡುತ್ತಿದ್ದೇವೆ, ಇಷ್ಟು ತೆರಿಗೆಯನ್ನು ಕೊಡುತ್ತಿದ್ದೇವೆ, ಆದ್ದರಿಂದ ಇದನ್ನು ನಮಗೆ ಕೊಡಬೇಕಾಗಿದೆ ಎನ್ನುವುದಾಗಿದ್ದರೆ, ನೀವು ಸಂಪತ್ತಿನ ಒಂದು ದ್ವೀಪವನ್ನು ಸುತ್ತಲೂ ಇರುವಂಥ ಬಡತನದ ಸಮುದ್ರದ ನಡುವೆ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಸಂಪತ್ತಿನ ಒಂದು ದ್ವೀಪ ಬೆಂಗಳೂರಾಗಿ ಪರಿವರ್ತನೆಯಾಗಬಾರದು. ಅದು ಇಡೀ ಸುತ್ತಮುತ್ತಲು ಇರತಕ್ಕಂಥ ಬಡತನ ಅನ್ನುವುದು ಏನಿದೆ ಆ ಬಡತನವನ್ನು ನೀಗಿಸಲಿಕ್ಕೆ ಬೇಕಾದಂಥದ್ದು ಏನಿದೆ, ಅದನ್ನು ಮಾಡುವಾಗ ಆದಾಯದ ಸಾಧನೆ ಮೊದಲು ಜೊತೆಗಿರತಕ್ಕಂಥಾದ್ದನ್ನು ನಾವು ಕಂಡುಹಿಡಿಯಬೇಕಾಗುತ್ತದೆ. ಇದನ್ನು ಕಂಡುಹಿಡಿಯಬೇಕಾಗಿದ್ದರೆ ನಮ್ಮ ಧಾರ್ಮಿಕ ಪರಿಭಾಷೆಯನ್ನು ಪಾಲಿಸುತ್ತೇನೆ ಎನ್ನತಕ್ಕಂಥ ಮಾತನ್ನು ನಾನು ಹೇಳುವುದಿಲ್ಲ. ಬುದ್ಧ ಒಂದು ಮಾತನ್ನು ಹೇಳುತ್ತಾನೆ ಅದೇನೆಂದರೆ, "ಪ್ರತಿಯೊಬ್ಬ ಮನುಷ್ಯನ ಕೈಗೂ ಕೂಡ ಸ್ವರ್ಗದ ಬಾಗಿಲಿನ ಬೀಗದ ಕೈಯನ್ನು ದೇವರು ಕೊಟ್ಟಿರುತ್ತಾನೆ" ಬುದ್ಧ ಆ ದೇವರ ಮಾತನ್ನು ಉಪಯೋಗಿಸುವುದಿಲ್ಲ. ಪ್ರತಿಯೊಬ್ಬನ ಕೈಯಲ್ಲಿಯೂ ಕೂಡ ಸ್ವರ್ಗದ ಬಾಗಿಲ ಬೀಗದ ಕೈ ಇದೆ. ಆದರೆ ತೊಂದರೆ ಇರತಕ್ಕಂಥಾದ್ದು ಏನೆಂದರೆ ಆ ಬೀಗದ ಕೈಯಿಂದ ನರಕದ ಬಾಗಿಲನ್ನೂ ಕೂಡ ತೆಗೆಯಬಹುದು. ಆದರೆ, ಯಾವ ಬಾಗಿಲನ್ನು ತೆಗೆಯುತ್ತೇನೆ ಎನ್ನುವಂಥಾದ್ದರ ಆಯ್ಕೆ ಪ್ರತಿಯೊಬ್ಬ ವ್ಯಕ್ತಿಯ ಮೇಲೆ ಅವಲಂಬಿತವಾಗಿದೆ. ಆ ಬೀಗದ ಕೈಯಿಂದ ನಾನು ಸ್ವರ್ಗದ ಬಾಗಿಲನ್ನು ತೆಗೆಯಬಹುದು ಅಥವಾ ಆ ಬೀಗದ ಕೈಯಿಂದ ನಾನು ನರಕದ ಬಾಗಿಲನ್ನೂ ತೆಗೆಯಬಹುದು. ನಾವೀಗ ಅನೇಕ ಸಂದರ್ಭಗಳಲ್ಲಿ ಮಾಡುತ್ತಿರತಕ್ಕಂಥಾದ್ದು ಏನೆಂದರೆ, ನರಕದ ಬಾಗಿಲನ್ನು ತೆಗೆಯತಕ್ಕಂಥ ರೀತಿಯಲ್ಲಿ ನಮ್ಮ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಇದು ಆಗಲಾರದಂತೆ ನೋಡಬೇಕಾಗಿದ್ದರೆ Bunkar Sanjath Roy ಎಂದು ಹೇಳಿ ನಮ್ಮ ಅಮರ್ತ್ಯಸೇನ್‌ರಂತೆ ಮಾತನಾಡತಕ್ಕಂಥ ಒಬ್ಬ ಆರ್ಥಿಕ ತಜ್ಞ, ಆತ ಬಂಗಾಳ ದೇಶದಲ್ಲಿ ಈ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾನೆ. ಮತ್ತು 'ಬಿ ಸ್ಕೂಲ್' ಅನ್ನತಕ್ಕಂಥಾದ್ದನ್ನು ಮಾಡುತ್ತಾನೆ. ಇಡೀ ಶಾಲೆಯ ವಾತಾವರಣವನ್ನು ಬದಲಿ ಮಾಡತಕ್ಕಂಥ, ಸ್ಕೂಲ್ ಅನ್ನು ಬಿಟ್ಟಿರತಕ್ಕಂಥ ಜನರು ಯಾರಿದ್ದಾರೆ ಡ್ರಾಪ್–ಔಟ್ಸ್ ಎಂದು ಏನು ನಾವು ಕರೆಯುತ್ತಿದ್ದೇವೆ, ಅವರ ಬಗ್ಗೆಯಾಗಲಿ, ಜಿ–2 ಸೊಸೈಟಿ ಅಂತ ಅಂದರೆ ಯಾರು ಇವತ್ತು ಐಟಿಐ, ಡಿಪ್ಲೋಮಾ, ಇಂಜನಿಯರಿಂಗ್ ಮಾಡಿದ್ದೇವೆಂದು

ಭಾವಿಸಿಕೊಳ್ಳುತ್ತಾರೆ, ಅವರೆಲ್ಲರಿಗಿಂತ ಬಹಳ ಮಟ್ಟಿಗೆ ತಮ್ಮ ಅನುಭವದಿಂದ ವಿವೇಕಿಗಳಾಗಿದ್ದಂಥ ನಮ್ಮ ಕಮ್ಮಾರ, ಚಮ್ಮಾರ, ಗ್ಯಾರೇಜ್‌ನಲ್ಲಿ ಕೆಲಸ ಮಾಡತಕ್ಕಂಥ ಹುಡುಗ, ಇವರಿಗಿರತಕ್ಕಂಥ ಬುದ್ಧಿಯನ್ನು ನಾವು ನೋಡಿದಾಗ ನೀವು ಈ ಶಕ್ತಿಗಳನ್ನು ನಮ್ಮ ವಿವೇಕದ ಮೂಲಕ ಸಾಮಾನ್ಯ ಜ್ಞಾನದ ಮೂಲಕ ಅದನ್ನು ಬದಲಿ ಮಾಡತಕ್ಕಂಥ ಶಕ್ತಿ ಬರುತ್ತದೆ ಎಂದು ಹೇಳಿ ಪ್ರತಿಪಾದನೆ ಮಾಡಿ ಆತ Barefoot ಕಾಲೇಜ್ ಎಂದು ಹೇಳಿ ಫಿಲೋಮಿಯಾ ಎನ್ನತಕ್ಕಂಥದ್ದು ರಾಜಸ್ತಾನದಲ್ಲಿ 1992 ರಲ್ಲಿ ಒಂದು ಕಾಲೇಜ್ ಅನ್ನು ಪ್ರಾರಂಭ ಮಾಡಿದರು. Bare foot Doctor ಎಂದು ಹೇಳಿ ರಾಜನಾರಾಯಣರು ಮೊದಲನೇ ಸಲ ಪ್ರತಿಪಾದನೆ ಮಾಡಿದಾಗ ಬಹಳ ಜನ ಅತನನ್ನು ಕುರಿತಾಗಿ ಬಹಳ ವ್ಯಂಗ್ಯ ಮಾಡಿದರು, ಲೇವಡಿ ಮಾಡಿದರು, ಈ ದೇಶದಲ್ಲಿರತಕ್ಕಂಥ ಸಾಮಾನ್ಯ ರೋಗಗಳಾಗಿರತಕ್ಕಂಥ ನಾಯಿ ಕೆಮ್ಮು, ಸಿಡುಬು, ಅಥವಾ ಅತಿಸಾರ ಇವುಗಳ ಬಗ್ಗೆ ಸ್ವಲ್ಪಮಟ್ಟಿಗೆ ಔಷಧ ಕೊಡತಕ್ಕಂಥವರಿದ್ದರೆ ಸಾಕು. ಉಳಿದಿದ್ದೆಲ್ಲಾ ಸರಿ ಹೋಗುತ್ತದೆ ಎಂದು ಹೇಳಿ Barefoot Doctor ಎನ್ನುವ ಪರಿಕಲ್ಪನೆಯನ್ನು ರಾಜನಾರಾಯಣ್‌ರವರು ತಂದಾಗ ಅವರ ಬಗ್ಗೆ ಲೇವಡಿ ಮಾಡಿದರು. ಆದರೆ, ಇವತ್ತು ನಮಗೆ ಬೇಕಾಗಿರತಕ್ಕಂಥ ಅದರ ಅಗತ್ಯ ಈ ಸಂದರ್ಭದಲ್ಲಿದೆ. ನಾನು ಈಗಾಗಲೇ ಈ ಸಂದರ್ಭದಲ್ಲಿ ಮಾತನಾಡುವಾಗ ಎಲ್ಲಿ ನಮ್ಮ ವ್ಯವಸ್ಥೆ ತಪ್ಪಾಗುತ್ತದೆ ಎಂಬುದರಲ್ಲಿ ತಾವು ಯೋಚನೆ ಮಾಡಿ. ಬಯೋಟೆಕ್ ನಮಗೆ ಉತ್ತರವಾಗಿರುವುದಿಲ್ಲ. Hidden Hunger ಅನ್ನತಕ್ಕಂಥಾದ್ದನ್ನು ಮಾಡಿದೆವು. ಈಗ ಮ್ಯಾಜಿಕ್ ಬುಲೆಟ್ ಎಂದು ಹೇಳಿ ಪ್ರೋಟೀನ್ಸ್ ರಿಚ್‌ಪೊಟಾಟೋ ಎಂದು ಹೇಳಿ ಇವತ್ತು ತಯಾರು ಮಾಡುತ್ತಿದ್ದಾರೆ. ಈ ಪ್ರೊಟೀನ್ ರಿಚ್ ಇರುವ ಪೊಟಾಟೋದಿಂದ ಇದು ಸಾಮಾನ್ಯರೂ ಊಟ ಮಾಡತಕ್ಕಂಥ ಒಂದು ಆಹಾರ. ಅದರಲ್ಲಿ ಶರ್ಕರಪಿಷ್ಟ ಇರುತ್ತದೆ. ಅದೆಲ್ಲಾ ನಾನು ಒಪ್ಪಿಕೊಳ್ಳುತ್ತೇನೆ. ಅದರಿಂದ 2.8 ರಷ್ಟು ಬರುತ್ತದೆ ಅನ್ನತಕ್ಕಂಥಾದ್ದು. ನಮ್ಮ ಮಾಮೂಲಿಯಾಗಿರತಕ್ಕಂಥ ಆಲೂಗೆಡ್ಡೆಯಲ್ಲಿ 1.8 ರವರೆಗೆ ಈ ಕೊಬ್ಬಿನ ಅಂಶ ಇರುತ್ತದೆ. ಆದರೆ, ಇವತ್ತು ಅದನ್ನು ಉಪಯೋಗಿಸಿ 2.8ಕ್ಕೆ ತರುವುದಾಗಿದ್ದರೆ, ಇವತ್ತು ಎರಡು ಹೊತ್ತಿನ ಊಟಕ್ಕೆ ಗತಿ ಇಲ್ಲದೇ ಇರತಕ್ಕಂಥ ಜನಗಳು ನಿಜವಾಗಿಯೂ ಕೂಡ 30 ದಶಲಕ್ಷ ಟನ್‌ನಷ್ಟು ಆಹಾರವನ್ನು ಒಂದು ಕಡೆಗೆ ಇಟ್ಟುಕೊಂಡಿರತಕ್ಕಂಥವರಿಗೆ ನಾವು ಆಹಾರವನ್ನು ಕೊಡದೆ, ಇವರಿಗೆ ಬರೇ ನಾವು 2.5ರ ಈ ಒಂದು ಪೊಟ್ಯಾಟೋ ಅಥವಾ ನಮ್ಮ ಈ ಆಲೂಗೆಡ್ಡೆಗೆ ಹೆಚ್ಚು ಪ್ರೇರಣೆಯನ್ನು ಕೊಟ್ಟು ಪ್ರಯೋಗಾಲಯದಲ್ಲಿ ಮಾಡಿ ಅದರ ಮೂಲಕವಾಗಿ ಒದಗಿಸಿಕೊಡತಕ್ಕಂಥಾದ್ದು ಎಷ್ಟು ಸಮಂಜಸ ಎನ್ನತಕ್ಕಂಥ ಪ್ರಶ್ನೆಯನ್ನು ಆತ ಕೇಳುತ್ತಾನೆ. Let us make an attempt to decipher the great scientific achievement. It is true that potato is part of the common Indian's diet. It is also true that the potato's price is so low that it can be offered by slum dwellers. Although potato has been held responsible for obesity and other health related problems and affects trendy generation, it is very low in protein. Potato, on an average contains 1.98% protein. Even if its availability has been increased to a third, protein percentage comes to 2.5% at the maximum. How will this protein-rich potato help solve the mal-nutrition in this country ? with

2.5% protein, how will the country's nutritional security be addressed ? And what about the Pulses that contain an average of 20-26%. Isn't a better route to address the problem of hidden hunger ? ಇವತ್ತು ನಮಗೆ ಎರಡು ಹೊತ್ತಿನ ಊಟಕ್ಕೆ ಸಂಬಂಧ ಇರತಕ್ಕಂಥ ಪರಿಸ್ಥಿತಿಯಲ್ಲಿ ನೀವು ಪ್ರೋಟೀನ್ ರಿಚ್ ಆಗಿರತಕ್ಕಂಥ ಬಯೋಟೆಕ್ನಾಲಜಿಯ ಮೂಲಕ ಮಾಡುವಂಥ ಈ ಕೃತಿಯ ಜೆನೆಟಿಕ್ ಮಾಡಿಫಿಕೇಷನ್ ಮೂಲಕ ಬರುವಂಥ ಆಹಾರವನ್ನು ತಿನ್ನಿಸುವುದರ ಮೂಲಕ ನಮಗೆ ಅನೇಕವಾಗಿರತಕ್ಕಂಥ ರೋಗಗಳು ಬರುವುದರ ಜೊತೆಜೊತೆಗೂ ಕೂಡ ನೀವು ನಮ್ಮ ದ್ವಿದಳ ಧಾನ್ಯಗಳನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡುತ್ತೀರಿ. ಅಲ್ಲಿ 20, 26 ಪರ್ಸೆಂಟ್ ಇರತಕ್ಕಂಥ ನಮ್ಮ ಕೊಬ್ಬಿನ ಅಂಶ, ನಮ್ಮ ಪೌಷ್ಠಿಕ ಆಹಾರ ಇವುಗಳನ್ನು ಯಾವ ರೀತಿ ಮಾಡುತ್ತೀರಿ ? None of the scientific bodies in India ever raised its voice for a speedy distribution of a surplus food grains. Wheat and Rice rotting in the open. In 2003, the surplus food grains was estimated to be around 30 MT. This food is also nutritious, Rice and Wheat on an average contains about 8 to 9% protein. Four times more than the GM potato claims. But non one is interested in building up pressure on the Government to see that these foods reaches those who need it most. ಇದು, ಯಾರಿಗೆ ಅಗತ್ಯವಾಗಿ ಸಲ್ಲಬೇಕಾಗಿರತಕ್ಕಂಥ ಆ ಜನಗಳ ಬಗ್ಗೆ ಮಾತನಾಡುವಾಗ ರಾಷ್ಟ್ರಪತಿಗಳ ಬಗ್ಗೆ ನಮಗೆ ಬಹಳ ದೊಡ್ಡ ಗೌರವವಿದೆ. ಆದರೆ, ಅವರೇನು ಪ್ರತಿಪಾದನೆ ಮಾಡತಕ್ಕಂಥ ಈ ಬಯೋಟೆಕ್‌ನ ಮೂಲಕವಾಗಿ ನಾವು ಈ ಸಮಸ್ಯೆಗಳಿಗೆ ಉತ್ತರವನ್ನು ಕಂಡುಕೊಳ್ಳಬಹುದು, ನಮ್ಮ ಟೊಮೊಟೋದಲ್ಲಿ ನೀರಿನ ಅಂಶ ಬಹಳ ಇರುತ್ತದೆ. ಆದ್ದರಿಂದ, ಅಲ್ಲಿರತಕ್ಕಂಥ ಪಲ್ಪ್, ಮಾಂಸದ ಅಂಶ ಹೆಚ್ಚಿಗೆ ಇರಬೇಕು ಅಥವಾ ಬೀಜ ಕಡಿಮೆ ಇರಬೇಕು ಮತ್ತು ಪಲ್ಪ್ ಹೆಚ್ಚಿರಬೇಕು ಎಂದು ಇದೆ. ಇಂಡೋ ಅಮೆರಿಕನ್ ಹೈಬ್ರಿಡ್ ಸೀಡ್ಸ್ ಅನ್ನು ನಾವೆಲ್ಲಾ ಹಿಂದೆ ಬೆಳೆಯುತ್ತಿದ್ದೆವು. ಆ ತರಹದ ಯೋಚನೆಯನ್ನು ಮಾಡುವುದಾಗಿದ್ದರೆ ಎಷ್ಟು ದೊಡ್ಡ ತೊಂದರೆಯಾಗುತ್ತದೆ ಎನ್ನತಕ್ಕಂಥದ್ದನ್ನೂ ಕೂಡ ತಾವು ಕಲ್ಪಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ, ಇದರ ಬಗ್ಗೆ ನಾವು ಕೊಡಬೇಕಾಗಿರತಕ್ಕಂಥದ್ದೇನೂ ಇಲ್ಲ. ನಿರ್ಭೀತಿಕರಣಕ್ಕೊಳಗಾಗಿರತಕ್ಕಂಥ ಮೊನ್ಸಾಂಟೋದ ಬಗ್ಗೆ ಕೂಡ ಮಾನ್ಯ ಮಾಧುಸ್ವಾಮಿಯವರು ಹಾಗೂ ಶ್ರೀರಾಮರೆಡ್ಡಿಯವರು ಮಾತನಾಡಿದರು. ಬೇರೆಯವರೂ ಕೂಡ ಈ ವಿಚಾರವನ್ನು ಎತ್ತಿದರು. ಯಾವ ರೀತಿಯಾಗಿ ಈ ಕೆಲಸವನ್ನು ಮಾಡುತ್ತಾರೆಂದರೆ, With the availability of all such subsidies, Agri business companies find it much easier, and economical to export. Export credit used primarily by the US are not counted as export subsidy. ನಮ್ಮ ಸಚಿವರಾಗಿರತಕ್ಕಂಥ ಮಾನ್ಯ ಆಚಾರ್ಯರವರು ಈ ಒಂದು ಸಂದರ್ಭದಲ್ಲಿ ಡಬ್ಲ್ಯುಟಿಒದಿಂದ ಕೂಡ ನಮಗೆ ಲಾಭವಾಗಬಹುದೇನೋ ಅನ್ನತಕ್ಕಂಥದ್ದರ ಬಗ್ಗೆ ಮೇಲ್ಮನೆಯಲ್ಲಿ ಚರ್ಚೆ ಮಾಡಿದರು. ಆ ಸಂದರ್ಭದಲ್ಲಿ ನೀವು ಇನ್ನು ಮೇಲೆ ಯಾವುದೇ ರಿಯಾಯಿತಿಗಳನ್ನು ನಮ್ಮ ಆಹಾರಧಾನ್ಯಗಳನ್ನು ಬೆಳೆಯಲಿಕ್ಕೆ ಕೃಷಿ ಉತ್ಪನ್ನಗಳನ್ನು ಬೆಳೆಯಲಿಕ್ಕೆ ಉಪಯೋಗಿಸಬಾರದೆನ್ನುವ ಮಾತನ್ನು ಹೇಳಿದರು.

ಆದರೆ, ಆ ಸಂದರ್ಭದಲ್ಲಿ ಅದು ನಮಗೆ ಲಾಭದಾಯಕ ಆಗಬಹುದೇನೋ ಎಂದು ಯೋಚನೆ ಮಾಡಿದರು. ಈಗ ಅವರು ಬುದ್ಧಿವಂತಿಕೆ ಮಾಡಿ ಹಾಂಗ್‌ಕಾಂಗ್‌ನ ಮತ್ತು ಸಿಯಾಟ್ರೋನಲ್ಲಿ ಮಾಡಿದ ಒಪ್ಪಂದದ ನಡುವೆ, ಅವರೇನು ಹೇಳುತ್ತಾರೆ, ಈ ಕೃಷಿ ಕ್ರೆಡಿಟ್ ಕಾರ್ಡ್ ಏನು ಕೊಡುತ್ತೇವೆ, ಅದು ಈ ಸಬ್ಸಿಡಿ ಅಲ್ಲ ಅನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಅದರ ಮೂಲಕ ಆಗಿರತಕ್ಕಂಥ ಅಪಾಯ ಏನೆಂದರೆ, with the availability of all such subsidies, Agri business companies find it much easier, and economical to export. Export credit used primarily by the US and not counted as export subsidies, doubled in just one year to reach 5.9 billion US dollars, In 1998. Export subsidies and credits are therefore garnered by the food exporting companies. In the US, for instance, more than 80% of the corn export is handled by three companies / firms : Kargil, ADM, Gennoha. The level of dumping by US alone hovers around 40% of wheat , 30% of soyabean, between 25 to 30% for corn and 57% for cotton. ಈ ಹತ್ತಿಯ ವಿಚಾರದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಅವರು ಎಕ್ಸ್‌ಪೋರ್ಟ್ ಕ್ರೆಡಿಟ್‌ನ ವಿಚಾರಗಳನ್ನು ತಂದು ಸಬ್ಸಿಡಿಯನ್ನು ನೀವು ಕೊಡಬಾರದು ಎಂದು ಹೇಳಿ ನಮಗೆ ಪ್ರತಿಬಂಧನ ಮಾಡಿ ಈ ಗ್ಯಾಟ್ ಮತ್ತು ಡಬ್ಲ್ಯುಟಿ ಒಪ್ಪಂದ ಮತ್ತು ಆ ಕಾರಣಗಳಿಗಾಗಿ ಆಗಿರತಕ್ಕಂಥ ಒಪ್ಪಂದದ ಮೂಲಕ ಆದ ಪರಿಣಾಮ ಏನಾಗಿದೆ ಎಂದರೆ, the poor and hungry are the ones who lack enough body facts and therefore would not be able to take advantage of the miracle nutritous food. What the poor needs at the first place is balanced diet that builds up the ability to absorb the nutrients ಇವತ್ತು ಈ ಬಯೋಟೆಕ್‌ನ ಮೂಲಕವಾಗಿ ನಮ್ಮ ಬಾಳೆ ಹಣ್ಣನ್ನು, ನಮ್ಮ ಟೊಮಾಟೋವನ್ನು, ನಮ್ಮ ಹಣ್ಣುಗಳನ್ನು ನಾವೆಲ್ಲಾ ಮಾಡಿ ಜೆನೆಟಿಕ್ ಮಾಡಿಫಿಕೇಷನ್ ಮೂಲಕ ನಿಮಗೆ ತಂದುಕೊಡುತ್ತೇವೆ ಅನ್ನತಕ್ಕಂಥ ಮಾತನ್ನು ಹೇಳಿ, ಅದರ ಮೂಲಕ ಕೊಳ್ಳುವ ಶಕ್ತಿಯಿಂದ ವಂಚಿತನಾಗಿರತಕ್ಕಂಥ ನಮ್ಮ ರೈತ, ಸಾಮಾನ್ಯ ಮನುಷ್ಯ ಇವತ್ತು ಅವನಿಗೆ ಬೇಕಾಗಿರತಕ್ಕಂಥ ಸಂಶಕ್ತಿಯೇ ಇಲ್ಲ. ಅರಗಿಸಿಕೊಳ್ಳುವಂಥ ಶಕ್ತಿ, ಜೀರ್ಣಿಸಿ ಕೊಳ್ಳುವಂಥ ಶಕ್ತಿಯೇ ಇಲ್ಲಂಥ ಒಬ್ಬ ವ್ಯಕ್ತಿ ಇಂಥ ಪೌಷ್ಠಿಕ ಆಹಾರವನ್ನು ಜೀರ್ಣಿಸಿ ಕೊಳ್ಳಲಿಕ್ಕೆ ಏನು ಮಾಡುತ್ತಾನೆ? ಆ ಪೌಷ್ಠಿಕ ಆಹಾರವನ್ನು ಆಕಸ್ಮಾತ್ತಾಗಿ ಆತ ಊಟ ಮಾಡಿದರೆ ಅದು ಅತಿಸಾರವಾಗಿ, ಭೇದಿಯಾಗಿ ಹೊರಟುಹೋಗುತ್ತದೆಯೇ ವಿನ ಅದು ಯಾವುದೇ ತರಹವಾಗಿರತಕ್ಕಂಥ ಆಹಾರದ ಮೂಲಕವಾಗಿ ಮನುಷ್ಯ ಒಬ್ಬ ಸದೃಢನಾಗಿರತಕ್ಕಂಥ, ಕೆಲಸ ಮಾಡತಕ್ಕಂಥ ವ್ಯಕ್ತಿಯಾಗಿ ಪರಿವರ್ತನೆಗೊಳ್ಳುವುದಿಲ್ಲ. ಇನ್ನೂ ಒಂದು ಅಪಾಯದ ಚಿಂತನೆ ಎಂದರೆ, Smell the GM Coffee ಅನ್ನತಕ್ಕಂಥದ್ದಿದೆ. ಈ ಬಯೋಟೆಕ್‌ನ ವಿಚಾರದಲ್ಲಿ ನಾನು ವಿರೋಧ ಏಕೆ ಮಾಡುತ್ತಿದ್ದೇನೆಂದರೆ, ನಮಗೆ ಈ ಕಾಫಿ ಬೀಜ....

SRI. K.R. RAMESH KUMAR : I was hearing you. ಡಬ್ಲ್ಯುಟಿ ಓ ನಿಂದ ಅಥವಾ ಜಾಗತೀಕರಣದಿಂದ ನಮಗೆ ಅನುಕೂಲವೋ ? ಅನಾನುಕೂಲವೋ ಎಂದು ನಿಮ್ಮ ಅಭಿಪ್ರಾಯ ಏನೂ ಗೊತ್ತಾಗಲಿಲ್ಲ. ಸ್ವಲ್ಪ ಕನ್‌ಫ್ಯೂಷನ್ ಆಗಿದೆ.

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ರಮೇಶ್‌ಕುಮಾರ್‌ರವರು ಉದ್ದೇಶ ಪೂರ್ವಕವಾಗಿಯೇ ಕಲ್ಪಿಸಿಕೊಂಡು ಗೊಂದಲವಾಗಿದೆ ಎಂದು ಭಾವಿಸುತ್ತಾರೆ. ನಾನು ಈ ಜಿಎಂ ಅಪಾಯ ಹೇಗಿದೆ ಅನ್ನತಕ್ಕಂಥದ್ದನ್ನು ಹೇಳಿದ್ದೇನೆ. ಈ ಜೆನೆಟಿಕ್ ಮಾಡಿಫಿಕೇಷನ್‌ನಿಂದ ಆಗಿರುವ ತೊಂದರೆ ಏನೆಂದು ಹೇಳಿದಾಗ, ನಾನು ಡಬ್ಲ್ಯುಟಿಒಗೆ ವಿರೋಧವಾಗಿದ್ದೇನೆಂಬುದು ತಮಗೆ ಗೊತ್ತಾಗಿಯೇ ಆಗುತ್ತದೆ. ನಾವಿಲ್ಲಿ ಎಷ್ಟೇ ರಾಷ್ಟ್ರಾಧ್ಯಕ್ಷರ ಬಗ್ಗೆ ಗೌರವವನ್ನು ಕೊಟ್ಟರೂ ಸಹ ಮಾನ್ಯ ರಾಷ್ಟ್ರಾಧ್ಯಕ್ಷರ ವಿಚಾರಗಳಲ್ಲಿ ಆಗಿರತಕ್ಕಂಥದ್ದರಲ್ಲಿ ಕೆಲವು ವೈಜ್ಞಾನಿಕ ಮಾಯಾ ಪರದೆಯನ್ನು 3 ನೇ ಜಗತ್ತಿನ ದೇಶಗಳು ನಮಗೆ ಸೃಷ್ಟಿ ಮಾಡುತ್ತಿದ್ದಾರೆ. ಈಗ ಉದಾಹರಣೆಗೆ ಇನ್ನು 10–15 ವರ್ಷಗಳಾದರೆ ಸನ್ಮಾನ್ಯ ರಮೇಶ್‌ಕುಮಾರ್‌ರವರೇ, ...

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಮ್ಮಲ್ಲಿ 94 ರಿಂದ ಹಿಡಿದು ನಮ್ಮ ಎಲ್ಲಾ ರಿಫೈಂಡ್ ಆಯಿಲ್ ಮಿಲ್ಸ್ ಕ್ಲೋಸ್ ಆಗಿ ಬಿಟ್ಟವು. ಎಡಿಬಲ್ ಆಯಿಲ್ಸ್ ಬೆಳೆಯತಕ್ಕಂಥ ರೈತರು ನಮ್ಮಲ್ಲಿ ಕುಸಿದು ಬಿದ್ದು ಹೋದರು. ಏಕೆಂದರೆ, ನಮ್ಮವರು ಏಕದಂ ಇಂಪೋರ್ಟ್ಸ್‌ನಲ್ಲಿ ಸೋಯಾಬಿನ್ ತರಿಸುವುದಕ್ಕೆ ಶುರುಮಾಡಿದರು. They gave a subsidy of 25% in U.S. 25 ಪರ್ಸೆಂಟ್ ಸಬ್ಸಿಡಿ ಕೊಟ್ಟು ಯುಎಸ್‌ಎ ನಿಂದ ಯಾವಾಗ ಸೋಯಾಬಿನ್ ಇಲ್ಲಿಗೆ ಕಳುಹಿಸಿದರು ಇಲ್ಲಿ ಎಡಿಬಲ್ ಆಯಿಲ್ ಬೆಳೆಯತಕ್ಕಂಥವರೆಲ್ಲಾ ಮಲಗಿಬಿಟ್ಟರು. ಅದೇ ರೀತಿ ನಮ್ಮ ಗೌರ್ನಮೆಂಟ್ ಆಫ್ ಇಂಡಿಯಾದವರು, ಫುಡ್ ಕಾರ್ಪೊರೇಷನ್‌ರವರು ವೀಟ್ ಪರ್ಚೇಸ್ ಮಾಡಿದರು. ಏಳು ಸಾವಿರಕ್ಕೆ ಪರ್ಚೇಸ್ ಮಾಡಿ ನಾಲ್ಕು ಸಾವಿರಕ್ಕೆ ಕಾರ್ಗಿಲ್‌ಗೆ ಮಾರಿದರು.

ಶ್ರೀ ಎಸ್. ಎಸ್. ಪಾಟೀಲ್ : ರೈತರು ಈಗ ಹತ್ತಿ ಬಿತ್ತುವುದನ್ನೇ ಬಿಟ್ಟಿದ್ದಾರೆ. ರೈತರು ಹತ್ತಿ ಬಿತ್ತುವುದನ್ನೇ ಕಡಿಮೆ ಮಾಡಿದ್ದಾರೆ. ಮೊದಲನೆ ಏರಿಯಾ ಹಾಗೂ ಇವತ್ತಿನ ಏರಿಯಾ ತೆಗೆದುಕೊಂಡರೆ 20 ಪರ್ಸೆಂಟ್ ಉಳಿದಿಲ್ಲ. ನಮ್ಮಲ್ಲಿ ಹತ್ತಿ ಏರಿಯಾನೇ ಹೋಗಿದೆ.

SRI M.P. PRAKASH :- non-genetical natural food grains ಇವು ಆದರೆ ಈಗ ಇರತಕ್ಕಂಥ ಅಪಾಯ ಏನಾಗಿದೆ ಎಂದರೆ genetically modified bio-technology ಮೂಲಕ ಬಂದಿರತಕ್ಕಂಥಾದ್ದರ ಮೂಲಕ ನಮಗೆ ಅಪಾಯ ಹೇಗೆ ಆಗುತ್ತದೆ ಎಂದರೆ ಅದು ದುಬಾರಿಯಾಗುತ್ತದೆ. ಮಾನ್ಸಾಂಟೊನಂಥವರು ನಿರ್ಭೀತೀಕರಣಕ್ಕೆ ಒಳಗಾಗಿರತಕ್ಕಂಥ ಬೀಜವನ್ನು ನಮಗೆ ಕೊಡುತ್ತಾರೆ. ಆ ಬೀಜವನ್ನು ನಾವು ಉಪಯೋಗಿಸಿಕೊಳ್ಳುತ್ತೇವೆ ಮತ್ತೆ ಮರು ವರ್ಷ ಆ ಬೀಜವನ್ನು ಕಾಯ್ದಿರಿಸುವುದಕ್ಕಾಗುವುದಿಲ್ಲ. ಆಗ ಇಡೀ ಪ್ರಪಂಚ ತಮ್ಮ ಹಿಡಿತಕ್ಕೆ ಬಂದಿದೆ ಎಂದು ಗೊತ್ತಾದ ತಕ್ಷಣವೇ ಅದರ ಧಾರಣೆಯನ್ನು ಏರಿಸುವುದರ ಮೂಲಕವಾಗಿ ಅವರು ಇಡೀ ನಮ್ಮ ಕೃಷಿ ವಲಯವನ್ನೇ ತಮ್ಮ ಕೈಯಲ್ಲಿ ತೆಗೆದುಕೊಳ್ಳುತ್ತಾರೆ. ಅದು ಅಣು ಅಸ್ತ್ರಕ್ಕಿಂತಲೂ ಹೆಚ್ಚು ಅಪಾಯಕಾರಿಯಾಗಿರತಕ್ಕಂಥಾದ್ದು. ಹಿಂದಿನ ಕಾಲದಲ್ಲಿ ಬ್ರಿಟೀಷರು ತಕ್ಕಡಿ ಹಿಡಿದುಕೊಂಡು ಬಂದರು, ವ್ಯಾಪಾರದ ಮೂಲಕವಾಗಿ ತಂದಿರತಕ್ಕಂಥಾದ್ದು ಆಗಬಹುದು, ಆದರೆ ಇವತ್ತು ಏನು ಅಪಾಯವಾಗುತ್ತದೆ ಎಂಬುದಕ್ಕೆ ತಾವು ಯೋಚನೆ ಮಾಡಬೇಕು. ಇನ್ನು ಹತ್ತು ವರ್ಷದಲ್ಲಿ ಈಗ ಅವರೇನು ಕ್ಲೋನಿಂಗ್ ಮಾಡತಕ್ಕಂಥಾದ್ದು ಏನು ಇದೆ, ತದ್ರೂಪಿಗಳನ್ನು ಸೃಷ್ಟಿ ಮಾಡತಕ್ಕಂಥಾದ್ದರ ವ್ಯವಸ್ಥೆಯನ್ನು ಎಲ್ಲರೂ ವಿರೋಧ ಮಾಡಿದ್ದಾರೆ. ಈಗ ಇಲಿಯ ಮೇಲೆ ಮನುಷ್ಯನ ಮಿದುಳನ್ನು

ಹಾಕಿ ಅದರ ಮೂಲಕವಾಗಿ ಇನ್ನು ಹತ್ತು ವರ್ಷದಲ್ಲಿ ಇಲಿ ಹಾಡನ್ನು ಹೇಳುವುದಕ್ಕೆ ಶುರು ಮಾಡುತ್ತದೆ, ಮಾತನಾಡಲಿಕ್ಕೆ ಶುರು ಮಾಡುತ್ತದೆ. ಇದರ ವಿಚಾರದಲ್ಲಿ ವ್ಯಾಟಿಕನ್ ಕಾಂಗ್ರೆಸ್ಸಿನ ಕಾರ್ಡಿನಲ್ಸ್ ಎಲ್ಲರೂ ಕುಳಿತುಕೊಂಡು ಒಂದು ರೆಸೊಲ್ಯೂಷನ್ ಮಾಡಿರತಕ್ಕಂಥಾದ್ದು ಇದೆ. ನಮ್ಮ ಧರ್ಮಗಳು ಇದರ ಬಗ್ಗೆ ಯೋಚನೆಯನ್ನು ಮಾಡಬೇಕಾಗಿವೆ. ಇದರಲ್ಲಿ ಕ್ರಿಶ್ಚಿಯಾನಿಟಿಯಾಗಿರತಕ್ಕಂಥವರು ವ್ಯಾಟಿಕನ್‌ನಲ್ಲಿ ಈ ವಿಚಾರವನ್ನು ಪ್ರಥಮಬಾರಿಗೆ ಕಾರ್ಡಿನಲ್ ಕಾಂಗ್ರೆಸ್ಸಿನಲ್ಲಿ ಈ ರೀತಿಯಾಗಿ ಕ್ಲೋನಿಂಗ್ ಮಾಡತಕ್ಕಂಥಾದ್ದು, ತದ್ರೂಪಿಗಳನ್ನು ಸೃಷ್ಟಿ ಮಾಡುವಂಥ ವಿಚಾರದಲ್ಲಿ ಮನುಷ್ಯನ ಮೆದುಳನ್ನು ಇಲಿಗೆ ಹಸ್ತಾಂತರಗೊಳಿಸತಕ್ಕಂಥದ್ದರ ಬಗ್ಗೆ ಚರ್ಚಿಸಿದ್ದಾರೆ. ಅದರ ಮೂಲಕ ಅಪಾಯವಾಗುತ್ತದೆ ನಾಳೆ ಪ್ರೀತಿಯಿಂದ ಸಾಕಿದ ನಮ್ಮ ಪ್ರಾಣಿಗಳು ಏನು ಇವೆ, ಅವೆಲ್ಲವೂ ಮಾತನಾಡಲಿಕ್ಕೆ ಪ್ರಾರಂಭ ಮಾಡಿದರೆ ಏನಾಗಬಹುದು ? ಸನ್ಮಾನ್ಯ ಅಧ್ಯಕ್ಷರೆ, ತಾವು ಯೋಚನೆ ಮಾಡಿ. ಆಗ ಯಾರು ಎಷ್ಟು ಅಪಾಯಕ್ಕೆ ಒಳಗಾಗುತ್ತಾರೆ.

ಶ್ರೀ ನೆ.ಲ. ನರೇಂದ್ರಬಾಬು : ಆಗ ಅವೆಲ್ಲವೂ ಅಸೆಂಬ್ಲಿಗೆ ಬಂದು ಬಿಡುತ್ತವೆ.

ಶ್ರೀ ಎಂ.ಪಿ. ಪ್ರಕಾಶ್ : ಬರಬಹುದು. ಅದು ಆಗಲಿಕ್ಕೆ ಸಾಧ್ಯ. ಏಕೆಂದರೆ, ನಮ್ಮ ಪ್ರಾಣಿ ಸಂಪತ್ತು ನಮ್ಮ ಜನಸಂಖ್ಯೆಗಿಂತ ಹೆಚ್ಚು ಇದೆ. ಆದುದರಿಂದ, ಅವುಗಳೇ ಓಟು ಹಾಕಿಕೊಂಡರೆ ನಾವು ಯಾರೂ ಗೆದ್ದು ಬರಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ. ಆದುದರಿಂದ, ಅಪಾಯ ಎಲ್ಲಿ ಅಂದರೆ, 80 ದೇಶಗಳು ಈ ಪ್ರಪಂಚದ 70 ರಷ್ಟು ಇರತಕ್ಕಂಥ ಕಾಫಿಯನ್ನು ಉತ್ಪಾದನೆ ಮಾಡುತ್ತವೆ. ಆ ಕಾಫಿ ನೈಜವಾಗಿ ಬೆಳೆಯತಕ್ಕಂಥ ಸಂದರ್ಭದಲ್ಲಿ ಅದು ಅರಳುವ, ಅದು ಹೂವಾಗುವಂಥ, ಮತ್ತು ಅದು ಮಾಗುವ ಪ್ರಕ್ರಿಯೆಗಳು ಮಾಮೂಲಿಯಾಗಿ ಆ ಋತುಮಾನಕ್ಕೆ ಅನುಗುಣವಾಗಿ ಬರುತ್ತವೆ. ಆದರೆ ಈಗ ಅದರಲ್ಲಿ ಏನು ಮಾಡಿದ್ದಾರೆ ಎಂದರೆ there is no doubt ripening control GM coffee is being developed for large plantation. They will be able to dramitically increase the Profitability of their operations ; Increase in the amount of coffee on an already glutted and pushed market price further down, forcing poor farmers out of business. Plantatinns using this GM coffee will be able to decrease their labour cost by as much as 50% by allowing them to harvest by machine rather than by hand. ನಮ್ಮ ಬಳ್ಳಾರಿಯವರಿಗೆ, ಬಿಜಾಪುರದವರಿಗೆ, ಬಾಗಲಕೋಟೆಯವರಿಗೆ, ಹಿಂಗಾರಿ ಎನ್ನತಕ್ಕಂಥಾದ್ದು ಇಲ್ಲ. ನಮ್ಮ ಹಿಂಗಾರಿ ಎಂದರೆ, ಚಿಕ್ಕಮಗಳೂರು, ನಮ್ಮ ಹಿಂಗಾರಿ ಎಂದರೆ ಕೊಡಗು, ನಮ್ಮ ಹಿಂಗಾರಿ ಎಂದರೆ ಸಕಲೇಶಪುರ, ಅಲ್ಲಿ ಏನು ಕಾಫಿ ತೋಟಗಳು ಇವೆ ಆ ಕಾಫಿ ತೋಟಕ್ಕೆ ನಮ್ಮ ಲಂಬಾಣಿ ಜನಾಂಗದವರು, ಬಡತನದ ಕೆಳಗೆ ಇರತಕ್ಕಂಥ ಅನೇಕ ಜನ ಹಿಂದುಳಿದ ಸಮಾಜದಲ್ಲಿರತಕ್ಕಂಥವರು, ಉದ್ಯೋಗವೇ ಇಲ್ಲದಂತಹ ಕಷ್ಟದ ಸ್ಥಿತಿಯಲ್ಲಿ ಅವರು ಆ ಕಡೆಗೆ ಹೋಗಿ ಆ ಮಾಗಿರತಕ್ಕಂಥ ಕಾಫಿಯನ್ನು ಕೈಯಿಂದ ಎತ್ತಿ ಅದರ ಮೂಲಕವಾಗಿ ಕಾಫಿಯನ್ನು ತರಿಸಿಕೊಡುತ್ತಾರೆ. ಆದರೆ ಈ ಜಿಎಂ, ಬಯೋಟೆಕ್ನಾಲಜಿ ಮಾಡತಕ್ಕಂಥ ಅಪಾಯ ಮೂರನೇ ಜಗತ್ತಿಗೆ ಹೇಗೆ ಆಗುತ್ತದೆ ಎಂದರೆ, ಅವರು ಮಾಡಿದಂಥ ಈ ವ್ಯವಸ್ಥೆಯಿಂದ ಏಕದಂ ಅದು ಪರಿವರ್ತನೆಯಾಗತಕ್ಕಂಥಾದ್ದು, ಒಂದನೇ ಮಾಗುವ ಪ್ರಕ್ರಿಯೆ ಎಂದರೆ, ಯಾವಾಗಲೂ ಕೂಡ ಒಂದು ತೋಟದಲ್ಲಿ ಅರ್ಧ ಹಣ್ಣುಗಳು ಈಗ

ಮಾಗಿರುತ್ತವೆ, ಇನ್ನರ್ಧ ಹಣ್ಣುಗಳು ಇನ್ನೊಂದು ಹದಿನೈದು ದಿವಸ ಇಪ್ಪತ್ತು ದಿವಸಗಳಾದ ಮೇಲೆ ಮಾಗುತ್ತವೆ. ಆಗ ಎಲ್ಲಾ ಕಾಲಕ್ಕೂ ಕೂಡ ಅವರು ಹೆಚ್ಚು ಕೂಲಿಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಏಕೆಂದರೆ, ಅವರನ್ನು ಅಲ್ಲಿ ಉಪಯೋಗಿಸಿಕೊಳ್ಳುವುದರಿಂದ, ಆದರೆ ಇದರಿಂದಾಗಿರುವಂಥ ಅಪಾಯ ಏನಾಗುತ್ತದೆ ಎಂದರೆ, ಆ ಔಷಧಿಯನ್ನು ಸಿಂಪಡಿಸಿ ಬಿಟ್ಟರೆ ಒಂದೇ ಬಾರಿಗೆ ಎಲ್ಲಾ ಕಾಫಿ ತೋಟಗಳೂ ಕೂಡ ಮಾಗಿ ಹಣ್ಣಾಗುತ್ತವೆ. ಹಾಗೆ ಹಣ್ಣಾದಂಥ ಸಂದರ್ಭದಲ್ಲಿ ಮಿಷನ್ ಮೂಲಕ ಅವುಗಳನ್ನು ತೆಗೆದುಕೊಂಡರೆ, ನಮ್ಮ ಭಾರತ ದೇಶದಲ್ಲಿ ಇದೂ ಕೂಡ ಬಂದು ಹೋದರೆ ನಮ್ಮಲ್ಲಿರತಕ್ಕಂಥ ಕೂಲಿಗಳ ಕೆಲಸ ಏನಾಗಬೇಕು ? ಈ ರೀತಿಯ ಅಪಾಯಕಾರಿಯಾಗಿರತಕ್ಕಂಥ ಈ ಕಾಫಿಯನ್ನು ಕುಡಿಯುವುದರ ಮೂಲಕ ಏನೆಲ್ಲಾ ಅಪಾಯಗಳು ಆಗುತ್ತವೆ ಎನ್ನುವುದರ ಬಗ್ಗೆ ಇನ್ನೂ ಕೂಡ ವೈದ್ಯರಾಗಲಿ ಅಥವಾ ನಮ್ಮ ಡಬ್ಲ್ಯೂಹೆಚ್‌ಓ ಆಗಲಿ ಯಾವುದೇ ಒಂದು ವಿಚಾರಗಳನ್ನು ತಿಳಿಸಿಲ್ಲ. ಅದು ಇನ್ನೂ ಅಪಾಯಕಾರಿಯಾಗಬಹುದು. ಅದೆಲ್ಲಕ್ಕಿಂತಲೂ ಕೂಡ ಮೊದಲು ನಮ್ಮ ಅತ್ಯಂತ ಅಗತ್ಯವಾಗಿರತಕ್ಕಂಥ ನಮ್ಮ ಆಹಾರದ ಈ ಹಸಿವನ್ನು ತೆಗೆದು ಹಾಕತಕ್ಕಂಥಾದ್ದರ ಕಡೆಗೆ ಆ ಕೆಲಸವನ್ನು ಮಾಡಿದರೆ ಮಾತ್ರ ನಮಗೆ ಈ ಕೆಲಸವನ್ನು ಮಾಡಲಿಕ್ಕೆ ಸಾಧ್ಯತೆಯಾಗುತ್ತದೆ. Super Sweetener after a Slow Start, ಎನ್ನತಕ್ಕಂಥಾದ್ದನ್ನೂ ಒಂದು ಬರೆದರು. ಅದನ್ನು ನಾನು ಹೆಚ್ಚು ಇಲ್ಲಿ ಓದುವುದಿಲ್ಲ, ಈಗ ಸಿಂಥೆಟಿಕ್ ಸ್ವೀಟ್‌ನ ಅನ್ನು ನಮ್ಮ ಕಾಫಿಯಲ್ಲಿ ಹಾಕತಕ್ಕಂಥಾದ್ದು ಏನು ಇದೆ ಇದನ್ನು ಪಾಟ್‌ನಲ್ಲಿ ಜೆನಿಟಿಕ್ ಆಗಿ ತಯಾರಿಸಿರುತ್ತಾರೆ. ಜೆನಿಟಿಕ್ ಆಗಿ ತಯಾರಿಸಿ ನಮ್ಮ ಹೊಲ ಮನೆಗಳೇನೂ ಇರುವುದಿಲ್ಲವಾಗಿ ಅವರ ಕಾರ್ಖಾನೆಗಳಲ್ಲಿ ತಯಾರು ಮಾಡಿ ಸೂಪರ್ ಸ್ವೀಟ್‌ನನ್ನು ತಯಾರು ಮಾಡುತ್ತಾರೆ. ಅದಕ್ಕೆ ಕಂಪನಿಗಳು ಇವೆ, ಅದರ ಬಗ್ಗೆ ದೊಡ್ಡ ಗಲಾಟೆಯಾಗಿದೆ. ಇವೆಲ್ಲವೂ ಕೂಡ GM- Food and Hunger ಎನ್ನತಕ್ಕಂಥಾದ್ದು ಇದರ ಬಗ್ಗೆ ನಮ್ಮ ದೇಶದಲ್ಲಿ ದೊಡ್ಡದಾಗಿ ನಡೆದಿರತಕ್ಕಂಥ ಆಂದೋಲನವನ್ನು ನೀವು ಕಾಣುತ್ತಿದ್ದೀರಿ. ಆದರೆ ಇಲ್ಲಿ ನಾವು ನೋಡಬೇಕಾಗಿದ್ದು . . . "In the year 2000 India had a record food surplus of..."

ಶ್ರೀ ಆರ್. ದಿನೇಶ್ ಗುಂಡೂರಾವ್ : ಸಾರ್ ಇನ್ನೂ ಬಹಳಷ್ಟು ಜನ ಭಾಷಣ ಮಾಡುವವರು ಇದ್ದಾರೆ. ಎಲ್ಲಾ ಯುವ ಶಾಸಕರುಗಳು ತುಂಬಾ ಜನ ಮಾತನಾಡಬೇಕೆಂದು ಇದ್ದಾರೆ. ಹಿರಿಯ ಶಾಸಕರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಆದರೆ ಅವರು ಇಷ್ಟೊಂದು ಸಮಯ ತೆಗೆದುಕೊಂಡು ಬಿಟ್ಟರೆ ನಮಗೆ ಎಲ್ಲಿ ಅವಕಾಶ ಸಿಗುತ್ತದೆ ? ತಾವು ಆಗಲೇ 6 ಗಂಟೆಗೆ ರಿಪ್ಲೈ ಎಂದು ಹೇಳಿದಿರಿ..

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ : ಆವಾಗಲೇ ಮಾನ್ಯ ಶ್ರೀನಿವಾಸಗೌಡರವರು ಒಂದು ಗಂಟೆ ಮಾತನಾಡಿದರಲ್ಲಾ ಆವಾಗ ತಮಗೆ ಹೇಳುವುದಕ್ಕೆ ಏನಾಗಿತ್ತು ? ಅವರು ಒಳ್ಳೆಯ ವಿಚಾರವನ್ನು ವ್ಯಕ್ತಮಾಡುತ್ತಿದ್ದಾರೆ. ಅವರಿಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಆರ್. ದಿನೇಶ್ ಗುಂಡೂರಾವ್ : ತಾವು ಹೇಳಿದಿರಿ, 15 ನಿಮಿಷ ಹಿರಿಯರು ಮಾತನಾಡುತ್ತಾರೆ. ಕಿರಿಯ ಶಾಸಕರು 10 ನಿಮಿಷ ಮಾತನಾಡುತ್ತಾರೆಂದು ಹೇಳಿದಿರಿ. ಅವರು ಸಾಕಷ್ಟು ಮಾತನಾಡುತ್ತಿದ್ದಾರೆ...

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ : ಮಾನ್ಯ ಶ್ರೀನಿವಾಸಗೌಡರವರು ಮಾತನಾಡಿದಾಗ ನೀವು ಈ ಮಾತು ಹೇಳಬೇಕಾಗಿತ್ತು

ಶ್ರೀ ಆರ್. ದಿನೇಶ್ ಗುಂಡೂರಾವ್ : ಹೊಸಬರಿಗೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ : ಮಾನ್ಯ ಶ್ರೀನಿವಾಸಗೌಡರವರು ಮಾತನಾಡುವಾಗ 15 ನಿಮಿಷ ಕಾಲಾವಕಾಶ ಕೊಟ್ಟಿದ್ದಕ್ಕೆ ಒಂದು ಗಂಟೆಗಳ ಕಾಲ ಮಾತನಾಡಿದರು, ಅವಾಗ ಯಾರೂ ಕೇಳಲಿಲ್ಲ.

ಶ್ರೀ ಮಹಿಮಾ ಜೆ. ಪಟೇಲ್ : ಇನ್ನು ಮೇಲೆ ಯಾರಿಗೆ ಏನು ಸಮಯ ನಿಗದಿಪಡಿಸಿರುತ್ತೀರಿ, ಅದಕ್ಕಿಂತ ಹೆಚ್ಚಿಗೆ ಸಮಯ ಕೊಡಬೇಡಿ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ದಿನೇಶ್ ಗುಂಡುರಾವ್‌ರವರು ಹಾಗೂ ಇತರ ಸದಸ್ಯರು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ. ನಮ್ಮ ಪಕ್ಷಕ್ಕೆ ಮತ್ತು ಇಲ್ಲಿ ನಮ್ಮ ಸಮ್ಮಿಶ್ರ ಸರಕಾರದ ಪಕ್ಷದಲ್ಲಿ ಇಲ್ಲಿಯವರೆಗೆ ಒಬ್ಬರು ಮಾತನಾಡಿದ್ದಾರೆ. ನಾನು ಈಗ ಎರಡನೇಯವನಾಗಿ ಮಾತನಾಡುತ್ತಿದ್ದೇನೆ. ನೀವು ಐದು ನಿಮಿಷದಲ್ಲಿ ಮುಗಿಸಿರಿ ಎಂದರೆ ಐದು ನಿಮಿಷದಲ್ಲಿ ಮುಗಿಸುತ್ತೇನೆ, ಹತ್ತು ನಿಮಿಷದಲ್ಲಿ ಮುಗಿಸಿರಿ ಎಂದರೆ ಹತ್ತು ನಿಮಿಷದಲ್ಲಿ ಮುಗಿಸುತ್ತೇನೆ. ನಮಗೆ ಅಲಾಟೆಡ್ ಟೈಂ ಏನು ಇದೆ ಆ ಅಲಾಟೆಡ್ ಟೈಂ ಅನ್ನು ಉಪಯೋಗಿಸಿಕೊಳ್ಳುತ್ತೇನೆ. ಆದಾದ ಮೇಲೆ ನೀವು ಎಷ್ಟು ಹೊತ್ತಾದರೂ ಮಾತನಾಡಿ ನನ್ನದೇನೂ ಅಭ್ಯಂತರವಿಲ್ಲ.

SRI. K.R. RAMESH KUMAR :- We are sorry. ನಾವು ದಿನೇಶ್‌ಗೆ ಅಡ್ವೈಸ್ ಮಾಡುತ್ತೇವೆ, ಪ್ರಕಾಶ್‌ರವರನ್ನು ನಾವು ಪಾರ್ಟಿ ರೆಪ್ರಸೆಂಟೇಟಿವ್ ಎಂದು ಟ್ರೀಟ್ ಮಾಡುವುದಿಲ್ಲ, ನೀವು ಮಾತನಾಡತಕ್ಕಂಥದ್ದು valuable. The whole house receives your words with lot of respect and attention. We do not intend to obstruct you. ತಾವು ದಯಮಾಡಿ ಮಾತನಾಡಿ. His anxiety ಇರುವುದು ನಮಗೆ ಒಂದು ಅವಕಾಶ ಸಿಗಬೇಕೆಂದು. Youngsters will get it. He is a senior member. We will not interrupt...

ಶ್ರೀ ಆರ್. ದಿನೇಶ್ ಗುಂಡೂರಾವ್ : ಸಾರ್ ಅವರು ಬಹಳ ಹಿರಿಯರು, ಅವರ ಬಗ್ಗೆ ನಮಗೆ ಬಹಳ ಗೌರವ ಇದೆ, ಅವರ ಭಾಷಣ ನಾವು ಎಲ್ಲಾ ಕೇಳಬೇಕೆಂದು ಇದ್ದೇವೆ. ನಮಗೂ ಕೂಡ ಒಂದು ಅವಕಾಶ ಮಾಡಿಕೊಡಿ ಎಂದು ಕೇಳಿದೆ ಅಷ್ಟೆ

SRI. M.P. PRAKASH : I will not seek any prerogative on that. ನಮಗೆ ಇಲ್ಲಿ ಇರತಕ್ಕಂಥದ್ದು ಕಾಲಕ್ಕೆ ತಕ್ಕಂತೆ ಬದಲಾವಣೆಯಾಗತಕ್ಕಂಥ ವಿಚಾರದಲ್ಲಿಯೂ ಕೂಡ ಈ ಸಾಲದ ವಿಚಾರಗಳ ಸಂಬಂಧಪಟ್ಟಂತೆ, ಬ್ಯಾಂಕ್‌ಗಳಿಗೆ 96 ಸಾವಿರ ಕೋಟಿ ರೂಗಳ ಪಂಗನಾಮ. ಈ ಭಾರತ ದೇಶದಲ್ಲಿ ನಾವು ಬಡವರ ಬಗ್ಗೆ ಕೊಟ್ಟಿರತಕ್ಕಂಥ ಸಾಲದ ಬಗ್ಗೆ ನಮ್ಮ ಪಿಎಲ್‌ಡಿ ಬ್ಯಾಂಕ್‌ಗಳು, ನಮ್ಮ ಸೊಸೈಟಿಗಳು, ನಮ್ಮ ಸರ್ಕಾರ ಮಾಡತಕ್ಕಂಥ ಅನೇಕ ಸಂದರ್ಭಗಳಲ್ಲಿ ಆಗತಕ್ಕಂಥ ಕ್ರಮಕ್ಕೂ ವಸೂಲಾತಿಗೂ ವ್ಯತ್ಯಾಸವಿದೆ. ಈಗ ಭಾರತದಲ್ಲಿ, ಮಾರ್ಚ್ 97 ರವರೆಗೆ 43,

300 ಕೋಟಿ ರೂ ಇತ್ತು 98 ರವರೆಗೆ 50,815 ಕೋಟಿ, ರೂ 99 ರವರೆಗೆ 58, 554 ಕೋಟಿ, ರೂ ಅದೇ ರೀತಿಯಾಗಿ 2004 ರವರೆಗೆ 96, 084 ಕೋಟಿ ರೂ ವಸೂಲಿಯಾಗದೇ ಸಾಲ ತೀರಿಸುವಂಥ ಶಕ್ತಿ ಇರತಕ್ಕಂಥ ಕೈಗಾರಿಕಾ ಉದ್ಯಮಿಗಳು ಮತ್ತು ಅವರೆಲ್ಲರೂ ತೆಗೆದುಕೊಂಡಿರತಕ್ಕಂಥ ಸಾಲ ವಸೂಲಾತಿಯಾಗಿಲ್ಲ, ಅದು ಹಾಗೆಯೇ ಉಳಿದಿರತಕ್ಕಂಥಾದ್ದು ಇದೆ. ನಾನ್ ಫರ್‌ಫಾರ್ಮೆನ್ಸ್ ಆಸೆಟ್ ಎಂದು ಎನ್ನಬಹುದು, ಆದರೆ ಅದು ಕೊಡದೇ ಇರತಕ್ಕಂಥಾದ್ದು. ನಾನ್ ಫರ್‌ಫಾರ್ಮೆನ್ಸ್ ಆಸೆಟ್ ಎಂದರೆ ಬ್ಯಾಂಕಿನಲ್ಲಿಟ್ಟು ಅದನ್ನು ಉಪಯೋಗಿಸಿ ಕೊಳ್ಳುವುದಕ್ಕೆ ಸಾಧ್ಯವಾಗಿಲ್ಲವಂಥಾದ್ದು. ಸಾಲವೇ ತೆಗೆದಿರತಕ್ಕಂಥದ್ದು ಇರಬಹುದು. ಆದರೆ ಇಲ್ಲಿ ಸಾಲ ತೆಗೆದುಕೊಂಡಿದ್ದೇವೆ ಕಟ್ಟುವುದಿಲ್ಲ, ಬಡವ ಅಲ್ಲ ತೆಗೆದುಕೊಂಡಿರುವುದು

ಶ್ರೀ ಕೆಆರ್. ರಮೇಶ್ ಕುಮಾರ್ : ನಮ್ಮ ಸರ್ವೀಸ್ ಕೋ–ಆಪರೇಟಿವ್ ಸೊಸೈಟಿಯಲ್ಲಿ ನಾನು ಮೂರು ಸಾವಿರ ರೂ ಸಾಲ ತೆಗೆಯಬೇಕಾದರೆ ಆರು ಸಾವಿರ ರೂಪಾಯಿ ಗ್ಯಾರಂಟಿ ಕೊಡಬೇಕು, ನಮ್ಮ ಪಿಸಿಎಆರ್‌ಡಿ ಬ್ಯಾಂಕ್‌ನಲ್ಲಿ ಒಂದು ಕೊಳವೆ ಬಾವಿ ಹಾಕುವುದಕ್ಕೆ ಬೋರ್‌ವೆಲ್ ಹಾಕುವುದಕ್ಕೆ ಬೇಕಾಗಿದ್ದರೆ ನಮ್ಮ ಜಮೀನು ಎಲ್ಲಾ ಅಡ ಇಡಬೇಕು. ಕಡಿಮೆ ದುಡ್ಡು ಬೇಕಾದರೆ ಜಾಸ್ತಿ ಅಡಮಾನ ಇಡಬೇಕು. ಲಕ್ಷಗಟ್ಟಲೆ, ಕೋಟಿ ಗಟ್ಟಲೆ ಬೇಕಾಗಿದ್ದರೆ ಅದಕ್ಕೆ ತ್ರೀಪೀಸ್ ಸೂಟ್, ಬ್ರೋಕನ್ ಇಂಗ್ಲೀಷ್, ಒಂದು ವಿಸಿಟಿಂಗ್ ಕಾರ್ಡು, ಸ್ವಲ್ಪ ಚೀಟಿಂಗ್ ಮಾಡುವುದು ಪ್ರಾಕ್ಟೀಸ್ ಇದ್ದು ನಾಲ್ಕು ಜನರನ್ನು ಕಲ್ಟಿವೇಟ್ ಮಾಡಿ, ಐಡಿಬಿಐನಲ್ಲಿ ಕೆಎಸ್‌ಐಡಿಸಿ ನಲ್ಲಿರತಕ್ಕಂಥ ಡೈರೆಕ್ಟರ್‌ಗಳನ್ನು ಚೆನ್ನಾಗಿ ಹೊಂದಿಕೊಂಡು ಫೈನಾನ್ಸಿಯಲ್ ಕನ್‌ಸಲ್ಟೆಂಟ್ ಕರೆದು ಪ್ರಾಜೆಕ್ಟ್ ರಿಪೋರ್ಟ್ ಮಾಡಿದರೆ ಅದು ಸಾಕು. ಏಕೆಂದರೆ ಈ ಕ್ವಿಟಿ ಏನೂ ಇರುವುದಿಲ್ಲ. ಅವೆಲ್ಲವನ್ನೂ ಮೇಕಪ್ ಮಾಡಿರುತ್ತಾರೆ. ಎಲ್ಲವೂ ಅವನದ್ದೇ ಆಗಿದ್ದರೂ ಕೂಡ ಆತ ತೆಗೆದುಕೊಂಡು ಹೋಗುವುದಕ್ಕೆ ಏನೂ ಇರುವುದಿಲ್ಲ. ಇದರಲ್ಲಿ ಕೆ.ಎಸ್.ಎಫ್. ಸಿ. ಕೂಡ ಸೇರಿಕೊಂಡಿದೆ. ಇರುತ್ತಾನಲ್ಲಾ ಆತ ಗ್ಯಾರಂಟಿ ಕೂಡ ಅಲ್ಲ. ಏಕೆಂದರೆ ಆತ ಅರಬ್‌ಗೆ ಅಥವಾ ಇನ್ನೆಲ್ಲಿಯಾದರೂ ಓಡಿಹೋಗಬಹುದೆಂಬ ಅನುಮಾನದ ಮೇಲೆ ಆತನಿಂದ ಸೆಕ್ಯುರಿಟಿ ತೆಗೆದುಕೊಳ್ಳುತ್ತಾರೆ. ಇವನ ಹತ್ತಿರ ಏನು ಸೆಕ್ಯುರಿಟಿ ಇರುತ್ತದೆ ? The higher the amount your demand, lesser the security and the amount of risk is involved.

SRI M.P. PRAKASH : They do away with the collateral security also.

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಹೌದು, ತಮಟೆ ಬಾರಿಸುವುದೆಲ್ಲವೂ ಇವನ ಮನೆ ಮುಂದೆಯಷ್ಟೆ ಆತನ ಮನೆ ಮುಂದೆ ಏನೂ ಇರುವುದಿಲ್ಲ. ಆತನ ಮನೆ ಮುಂದೆ ಚಿಯರ್ಸ್.

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ರಮೇಶ್ ಕುಮಾರ್‌ರವರು ಹೇಳಿದಂತೆ, ಕರ್ನಾಟಕದಲ್ಲಿ 2004 ರವರೆಗೆ 5, 358, 85 ಕೋಟಿ ರೂಪಾಯಿಗಳಷ್ಟು ಸಾಲದ ಹಣವನ್ನು ನಮ್ಮ ಬ್ಯಾಂಕ್‌ಗಳಿಗೆ ಕೊಡಬೇಕಾಗಿರತಕ್ಕಂಥಾದ್ದು ಇದೆ. ಆದರೆ, ಈ ಹಣ ಬರಬೇಕಾಗಿರತಕ್ಕಂಥ ಖಾತೆಗಳು 684. ಈ 684 ಖಾತೆಗಳು 5, 358, 85 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ತಾವು ಹೇಳಿದಂತೆ ನಮ್ಮ ಸೇವಾ ಸಹಕಾರ ಸಂಘಗಳಾಗಲಿ ಅಥವಾ ಮತ್ತೊಂದು ಆಗಿರಲಿ, ಇವತ್ತಿನದಿವಸ ಲಕ್ಷಾಂತರ ಜನ ಬೇಸಾಯಕ್ಕೆ ಮತ್ತು ನೀರಾವರಿಗೋಸ್ಕರ ತೆಗೆದುಕೊಂಡಿರತಕ್ಕಂಥ ಸಾಲದ ಬಗ್ಗೆ ಹೇಳುವುದಾದರೆ,

ಇದಕ್ಕೋಸ್ಕರ ಸಾಲ ತೆಗೆದುಕೊಳ್ಳುವುದಕ್ಕೆ ಲಕ್ಷಾಂತರ ಜನ ಇದ್ದರೂ ಕೂಡ ಅವರಿಗೆ ನಾವು ಸಾಲ ಕೊಡುವುದಿಲ್ಲ. ಅವರು ಯಾವುದೇ ಈ ಮಟ್ಟಕ್ಕೆ ಕೂಡ ಹೋಗುವುದಿಲ್ಲ. ಅವರಿಗೆ ಇದ್ದಂಥ 7 ಪರ್ಸೆಂಟ್ ಬಡ್ಡಿಯನ್ನು 6 ಪರ್ಸೆಂಟ್‌ಗೆ ಮಾಡಿರತಕ್ಕಂಥಾದ್ದು ಹಿಂದಿನ ಮಾನ್ಯ ಧರ್ಮಸಿಂಗ್‌ರವರ ಸರ್ಕಾರಕ್ಕೆ ಹೋಗಬೇಕಾಗಿರತಕ್ಕಂಥ ಒಂದು ದೊಡ್ಡ ಗೌರವ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮಾನ್ಯ ಅಧ್ಯಕ್ಷರೆ, ಇದರ ಜೊತೆಗೆ ಪಿಎಲ್‌ಡಿ ಬ್ಯಾಂಕ್ ಮತ್ತು ಪೆಹಾರ್ಡ್ ಬ್ಯಾಂಕ್‌ನಲ್ಲಿ ಒನ್ ಟೈಂ ಸೆಟ್ಲಮೆಂಟ್‌ಗೆ ಪೀನಲ್ ಇಂಟರೆಸ್ಟ್‌ನಲ್ಲಿ ಸ್ವಲ್ಪ ಕನ್ಸೆಷನ್ ಕೊಡುತ್ತಾರೆ. ಆದರೆ, ನ್ಯಾಷನಲೈಜ್ಡ್ ಬ್ಯಾಂಕ್ ಮತ್ತು ಕೆಎಸ್‌ಎಫ್‌ಸಿ ಗೆ ನೀವು ಹೋದರೆ ಆತನಿಗೆ ಸೆಕ್ಯುರಿಟಿ ಇದ್ದರೆ ಆತನಿಂದ ವಸೂಲಿ ಮಾಡಿಕೊಳ್ಳುತ್ತಾರೆ. ಇಲ್ಲದಿದ್ದರೆ ಆತನಿಂದ ಏನೂ ವಸೂಲು ಮಾಡುವುದಿಲ್ಲ. ಆತ ಕೊಟ್ಟಷ್ಟು ತೆಗೆದುಕೊಂಡು ಕ್ಲೋಜ್ ಮಾಡುತ್ತಾರೆ. ಅಂದರೆ, ಇಲ್ಲಿ ಏನಾಗಿದೆ ಎಂದರೆ ಯಾರ ಹತ್ತಿರ ಇರುತ್ತದೆಯೋ ಆತನಿಂದ ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಇದೆ. ಡೆಲಿಬರೇಟ್ ಆಗಿ ಯಾರು ಮೋಸ ಮಾಡುವುದಕ್ಕೆ ಹೋಗುತ್ತಾರೆಯೋ ಅಂಥವರಿಂದ ಏನು ಕಲೆಕ್ಟ್ ಮಾಡುವುದಿಲ್ಲ.

ಶ್ರೀ ಎಸ್. ರಾಜೇಂದ್ರನ್ :– ಮಾನ್ಯ ಅಧ್ಯಕ್ಷರೆ, ಡಿಸಿಸಿ ಬ್ಯಾಂಕ್‌ನವರು ಸಾರ್ವಜನಿಕರಿಗೆ ಹಣ ಕೊಡುವುದಕ್ಕೆ ಆಗುವುದಿಲ್ಲ ಪೂರ್ತಿ ಹಣವನ್ನು ಕಟ್ಟುತ್ತೇವೆಂದರೆ ಆತ ಕಟ್ಟಿರತಕ್ಕಂಥ ಹಣವೆಲ್ಲವನ್ನು ಬರೇ ಬಡ್ಡಿಯಿಂದು ತೆಗೆದುಕೊಂಡಿರುತ್ತಾರೆ. ಒನ್ ಟೈಂ ಸೆಟ್ಲಮೆಂಟ್ ಮಾಡುತ್ತೇವೆಂದು ಹೇಳಿದರೂ ಕೂಡ ಇಲ್ಲ ನೀವು ಕಟ್ಟಿರುವ ಹಣವೆಲ್ಲಾ ಬಟ್ಟಿಗೆ ಸರಿಯಾಗಿದೆ. ಆದ್ದರಿಂದ ಮತ್ತೆ ಹೊಸದಾಗಿ ಕಟ್ಟಿ ಎಂದು ಹೇಳುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್ :– ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ,

" In fact, there are more poor people in India now than the total population at the time of independence. More that 1/3 of our population is still illiterate. This proportion is significantly higher than the rural India's 40% and much higher for women at 45% The infant mortality rate is at 66 to 1000 is among the highest in the world. The maternal mortality rate is 407 per 1, 00, 000 live-birth as per higher than the most developing country. 22% of the population does not have access to the drinking water, while 64% of the population does not have access to the sanitation facility." ಇದು ನಾವು ದೊಡ್ಡದಾಗಿ ಮಾಡಿರತಕ್ಕಂಥ ಕೆಲಸವೆಂದು ಹೇಳುತ್ತೇವೆ. ಆದರೆ, ಇದರಲ್ಲಿ ನಮ್ಮ ರಾಜಕಾರಣಿಗಳ ತಪ್ಪುಗಳು ಯಾವ ರೀತಿ ಇರುತ್ತದೆಂದರೆ,

"Political leaders aspire for recognition as a nuclear power in P-5 club, membership or the Security Council in the United Nations and a seat at the dinner table with the G-8. The ultimate aspirations in India is the super in power in the world." ಸೂಪರ್ ಪವರ್ ಆಗಬೇಕೆಂಬುದು ನಮ್ಮ ರಾಜಕೀಯ ಉದ್ದೇಶವಾಗಿದೆ. ಅದು ನಮ್ಮ ಇಚ್ಛಾಶಕ್ತಿ ಮತ್ತು ನಮ್ಮ ಸಂಕಲ್ಪ ಆಗಿದ್ದರೆ ನಾವು ಬಯಸುವುದು

ಏನು ? ಜಿ–8 ಕಂಟ್ರಿಗಳ ಜೊತೆ ಹೋಗಿ ನಾವು ಅವರ ಟೇಬಲ್ ಮುಂದೆ ಕುಳಿತು ಊಟ ಮಾಡಬೇಕು, ಅಣು ವಿಚಾರಗಳ ಒಪ್ಪಂದದ ಬಗ್ಗೆ ಕರುಡುಗೆ ಸಹಿ ಮಾಡಿರತಕ್ಕಂಥಾದ್ದು ಬಹಳ ಮುಖ್ಯವೆಂದು ಭಾವಿಸಿಕೊಳ್ಳುತ್ತೇವೆ. ಆದರೆ, ಆಗಿರತಕ್ಕಂಥ ಅನಾಹುತಗಳು ಏನೆಂದು ನಾವು ನೋಡಿದರೆ ನಮ್ಮ ಜನ ಎಷ್ಟು ತೊಂದರೆಯಲ್ಲಿದ್ದಾರೆ, ಅವರ ಬಗ್ಗೆ ನಾವು ಏನು ಕೆಲಸ ಮಾಡಿದ್ದೇವೆಂದು ಮಾನ್ಯ ಮಾಧುಸ್ವಾಮಿಯವರು ಪ್ರಶ್ನೆ ಮಾಡಿದರೆ ನಮ್ಮ ನಗರ ಪ್ರದೇಶವನ್ನು ಪ್ರತಿನಿಧಿಸತಕ್ಕಂಥ ಶಾಸಕರು ತಮ್ಮದೇ ಆದಂಥ ಕಾರಣಕ್ಕಾಗಿ ಅವರು ಎತ್ತಿರತಕ್ಕಂಥ ಪ್ರಶ್ನೆ ನಿಜ. ಅದು ನಿಜವಾಗಿಯೂ ಕೂಡ ಬೇಕಾಗಿರತಕ್ಕಂಥಾದ್ದು. ಆದರೆ, ಬೆಂಗಳೂರು ಈ ದೊಡ್ಡ ಮಟ್ಟದಲ್ಲಿ ಬೆಳೆಯುವುದಕ್ಕೆ ಏತಕ್ಕಾಗಿ ಅವಕಾಶವನ್ನು ಕಲ್ಪಿಸಿ ಕೊಡಬೇಕಾಗಿತ್ತು ? Most luxurious drinking water facilities have been provided to Bangalore. ಯಾವುದೇ ರಾಜ್ಯದ ಅಥವಾ ನಾಗರೀಕತೆಯ ರಾಜಧಾನಿಗಳು ನದಿಯ ದಂಡೆಯಮೇಲೆ ಇರುತ್ತವೆ. ಅದು ನ್ಯೂಯಾರ್ಕ್, ಲಂಡನ್, ಪ್ಯಾರೀಸ್, ಕೈರೋ ಮತ್ತು ಚೈನಾದೇಶದ ಬೀಜಿಂಗ್ ಇರಬಹುದು, ಇವೆಲ್ಲವೂ ಕೂಡ ನದಿ ದಂಡೆಯಮೇಲೆ ಇರತಕ್ಕಂಥ ರಾಜಧಾನಿಗಳು ಆಗಿವೆ. ರಾಜಧಾನಿಗೆ ಎಲ್ಲಾ ಜನರನ್ನು ಆಕರ್ಷಿಸುವಂಥ ಶಕ್ತಿ ಅದಕ್ಕೆ ತನ್ನದೇ ಆಗಿ ಅಂತರ್ಗತವಾಗಿರುತ್ತದೆ. ಆದರೆ, 3, 470 ಮೀಟರ್ ಸಮುದ್ರ ಮಟ್ಟಕ್ಕಿಂತ ಎತ್ತರದಲ್ಲಿರತಕ್ಕಂಥ ಬೆಂಗಳೂರನ್ನು ನಾವು ರಾಜಧಾನಿಯಾಗಿ ಆಯ್ಕೆ ಮಾಡಿಕೊಂಡಿದ್ದೇವೆ, ಇದು ಬಹಳ ಆಹ್ಲಾದಕರವಾಗಿರತಕ್ಕಂಥ ವಾತಾವರಣ ಮತ್ತು ಉತ್ತಮವಾಗಿ ಹೆಚ್ಚು ಜನಸಂಖ್ಯೆ ಇರತಕ್ಕಂಥಾದ್ದು, ಬಹಳ ಸಜ್ಜನರು ಮತ್ತು ಪಿಂಚಣಿಗೆ ಸೇರಿರತಕ್ಕಂಥವರು, ಜ್ಞಾನಪಿಪಾಸುಗಳಾಗಿರತಕ್ಕಂತಹ ಸಂಸ್ಥೆಗಳನ್ನು ಕಟ್ಟಬೇಕಾಗಿ ಪರಿಕಲ್ಪಿಸಿ ಯೋಚನೆ ಮಾಡಿದಂಥ ಈ ನಗರವನ್ನು ಯಾವುದೋ ಕಾರಣಕ್ಕಾಗಿ ನಾವು ಇವತ್ತು ಆಯ್ಕೆ ಮಾಡಿ ಇದು ತಮಿಳರಿಗೆ, ಆಂಧ್ರದವರಿಗೆ ಹತ್ತಿರವಾಗಿ ಅಲ್ಲಿ ಹಿಂದೂಪುರವನ್ನು ಮಾನ್ಯ ಚಂದ್ರಬಾಬುನಾಯ್ಡುರವರು ಮಾಡಿ ಇವತ್ತು ನಮ್ಮ ಇಂಡಸ್ಟ್ರಿಗಳೆಲ್ಲವೂ ಹಿಂದೂಪುರಕ್ಕೆ ಹೋಗಬೇಕು. ಆದರೆ ಅಲ್ಲಿ ಕೆಲಸ ಮಾಡತಕ್ಕಂಥ ಪ್ರತಿಯೊಬ್ಬರ ಸಮಸ್ಯೆಗಳನ್ನು ಮಾನ್ಯ ನರೇಂದ್ರಬಾಬುರವರು ಮತ್ತು ಮಾನ್ಯ ಚಂದ್ರಶೇಖರ್‌ರವರು, ಮಾನ್ಯ ದಿನೇಶ್‌ಗುಂಡೂರಾವ್‌ರವರು ಪರಿಹರಿಸಬೇಕಾಗಿದೆ. ಅಂದರೆ, ಅವರಿಗೆ ಶಾಲೆ, ಅವರ ಆರೋಗ್ಯ, ಅವರ ಮನೆ, ಅವರಿಗೆ ಕುಡಿಯುವ ನೀರು ಅವರಿಗೆ ಶೌಚಾಲಯದ ಸಮಸ್ಯೆಗಳನ್ನು ನೀವು ಬಗೆಹರಿಸಬೇಕು. ಆದರೆ, ಆದಾಯ, ಕಾರ್ಖಾನೆ ಮತ್ತು ಅವರ ಕಾರ್ಪೊರೇಟ್ ಆಫೀಸ್ ಆಂಧ್ರದಲ್ಲಿ ಮತ್ತು ತಮಿಳುನಾಡಿನ ಹೊಸೂರಿನಲ್ಲಿರತಕ್ಕಂಥಾದ್ದು ಆಗಿದೆ. ಇದನ್ನು ನಾವು ಯೋಚನೆ ಮಾಡಿದಾಗ ಬೆಂಗಳೂರು ಈ ತರಹದ ರಾಜಧಾನಿಯಾಗಿ 3600 ಚಿಲ್ಲರೆ ಕೋಟಿ ರೂಪಾಯಿಗಳನ್ನು ಕಾವೇರಿಯ ನಾಲ್ಕನೇ ಹಂತಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಆದರೆ ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಗೆ ನೀವು ಕೊಡತಕ್ಕಂಥಾದ್ದು ಎಷ್ಟು ? ಇವತ್ತಿಗೂ ಕೂಡ 55 ಎಲ್‌ಪಿಸಿಡಿ ನೀರು ಕೊಡುವುದಕ್ಕೆ ಸರ್ಕಾರದಿಂದ ಆಗುತ್ತಿಲ್ಲ. ಆದರೆ, ಇಲ್ಲಿರುವ ಫೈವ್‌ಸ್ಟಾರ್ ಹೋಟಲ್‌ನಲ್ಲಿ ಒಂದು ಸಲ ಫ್ಲಷ್ ಔಟ್ ಮಾಡಿದರೆ 12 ಲೀಟರ್‌ನಷ್ಟು ನೀರು ಆ ಪೈಪ್‌ಗಳಿಂದ ಹೊರಕ್ಕೆ ಹೋಗುತ್ತದೆ. ನಾವು ಕ್ಷೌರಿಮಾಡಿಕೊಳ್ಳುವ ಸಮಯದಲ್ಲಿ ಟ್ಯಾಪ್‌ನ್ನು ಕ್ಲೋಜ್ ಮಾಡುವುದಿಲ್ಲ ಇತ್ತೀಚಿನ ದಿನಗಳಲ್ಲಿ . ಎಲೈಟ್ ಕ್ಲಾಸ್ ಎಂದು ನಾವು ಏನು ಇದ್ದೇವೆ ನಾವು ಅಷ್ಟು

ಸೋಮಾರಿಗಳಾಗಿದ್ದೇವೆ. ಇದರಿಂದ ಸುಮಾರು ಹೆಚ್ಚು ಕಡಿಮೆ ನಾಲ್ಕರಿಂದ ಐದು ಲೀಟರ್ ನೀರು ಹೊರಟು ಹೋಗುತ್ತದೆ. ಆದರೆ ಅವರು ಇಲ್ಲಿ ಬರೆದುಕೊಳ್ಳತಕ್ಕಂಥಾದ್ದು ಏನೆಂದರೆ, ಬೆಂಗಳೂರಿನಲ್ಲಿ ಉಳಿದುಕೊಳ್ಳುವುದಕ್ಕೆ ಒಂದು ಚೆನ್ನಾಗಿರತಕ್ಕಂಥ ಪಂಚತಾರಾ ಹೋಟಲ್ ಇಲ್ಲ. ಆದ್ದರಿಂದ ನಾವು ಮದ್ರಾಸ್‌ನಲ್ಲಿ ಉಳಿದುಕೊಂಡು ವಿಮಾನದಲ್ಲಿ ಇಲ್ಲಿಗೆ ಬಂದು ಕೆಲಸ ಮುಗಿಸಿಕೊಂಡು ಮತ್ತೆ ವಿಮಾನದ ಮೂಲಕ ಹೋಗಬೇಕು. ಬೆಂಗಳೂರಿನಲ್ಲಿ ಇನ್‌ಫ್ರಾಸ್ಟಕ್ಚರ್ ಇಲ್ಲ. ಅಂದರೆ ಫೈಸ್ಟಾರ್ ಹೋಟಲ್‌ಗಳು ಲೆಕ್ಕಕ್ಕೆ ಇದ್ದರೆ ಮಾತ್ರ ಇನ್‌ಫ್ರಾಸ್ಟಕ್ಚರ್ ಇದ್ದಂತೆಯೇನು ? ಅದಕ್ಕಿಂತ ಮುಖ್ಯವಾಗಿರತಕ್ಕಂಥಾದ್ದು ನಮ್ಮ ರಸ್ತೆ ಮತ್ತು ನಮ್ಮಲ್ಲಿರತಕ್ಕಂಥ ಕೊಳಚೆ ಪ್ರದೇಶದಲ್ಲಿರತಕ್ಕಂಥ ಜನರಿಗೆ ಬೇಕಾಗಿರತಕ್ಕಂಥ ಉದ್ಯೋಗ, ಅಲ್ಲಿಯ ಶೌಚಾಲಯ ಅವರಿಗೆ ಕುಡಿಯುವ ನೀರು, ಇವುಗಳನ್ನು ಮಾಡಬೇಕಾಗಿರತಕ್ಕಂಥಾದ್ದು ಮುಖ್ಯವಾಗಿರುವುದರಿಂದ ಇದರ ಬಗ್ಗೆ ಅವರು ಏನು ಪ್ರಸ್ತಾಪಮಾಡಿದ್ದರೆ, ಇದು ನಮ್ಮನ್ನು ಈ ವಿಚಾರಗಳ ಕಡೆಗೆ ಗಮನ ಕೊಡತಕ್ಕಂಥಾದ್ದಕ್ಕೆ ಅವಕಾಶವನ್ನು ಮಾಡಿಕೊಡುತ್ತದೆ.

" The Government must, therefore, find resources for stepping up public investment in infrastruture, especially power, transport and communication. The withdrawal of the Government from the sector in keeping with the ideology of marketisation and globalisation is a pre-nature simply because sufficient private investment, whether domestic or foreign, is simply not forthcoming." ಇವರೇನು ಮಾತನಾಡುತ್ತಿದ್ದಾರಲ್ಲಾ, private participation ಅಂತ ಹೇಳಿ ನಮ್ಮ ಮಹಾ ಮಹಾ ಐಟಿ, ಬಿಟಿ ರವರು ಮಾತನಾಡಿದರು ಈಗ ಎಲ್ಲಿದೆ ಸ್ವಾಮಿ ? Private Participation ಆಗಿರತಕ್ಕಂಥಾದ್ದು ಬೇರೆ ವಿಚಾರಗಳಿಗೆ ಸಂಬಂಧಪಟ್ಟಿರತಕ್ಕಂಥದ್ದು. ಆ ಕಾರಣಕ್ಕಾಗಿ ಸಮೃದ್ಧವಾದಂಥ ಕರ್ನಾಟಕ ಎಂದರೆ, ಕುವೆಂಪುರವರ ದೃಷ್ಟಿಯಲ್ಲಿ

“ ಬರಿಯ ಚದುರ ಮೈಲಿಗಳಲ್ತು ಕರ್ನಾಟಕದ
ದೇಶ ವಿಸ್ತೀರ್ಣಮಂ
ನೆನೆನೇ ಮನೋಮಯದ ಸಂಸ್ಕೃತಿಯ ಕೋಶ ವಿಸ್ತೀರ್ಣಮಂ
ಮರೆಯದಿರು ಚದುರ ಸಂವತ್ಸರದ ಶತಮಾನಗಳ ಕಾಲ ವಿಸ್ತೀರ್ಣಮಂ
ಪ್ರಾಣಮಯ, ಭಾವಮಯ ವಿಸ್ತೀರ್ಣಮಂ
ಚಿದಾಕಾಶ ವಿಜ್ಞಾನ ವಿಸ್ತೀರ್ಣಮಂ”

ಎಂದು ಹೇಳಿದ್ದಾರೆ. ಕರ್ನಾಟಕದ ಬಗ್ಗೆ ಮಾನ್ಯ ಶ್ರೀನಿವಾಸಗೌಡರು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಾ ಹೇಳಿದರು. ಅದೇನೆಂದರೆ, ಒಂದು ದೇಶವೆಂದರೆ ಕೇವಲ ಒಂದು ಮಣ್ಣು ಅಲ್ಲ. ಇಲ್ಲಿರತಕ್ಕಂಥ ಜನ ಎಂದು ಹೇಳಿದರು. ಆ ಜನಗಳಿಗೆ ಕನಸು ಇರಬೇಕೆಂದೇ ಮಾನ್ಯ ಅಬ್ದುಲ್ ಕಲಾಂನವರು ಕನಸನ್ನು ಸೂಚಿಸಿದ್ದಾರೆ. ಆದರೆ ಅದು ಭ್ರಮೆಯಾಗಬಾರದು. ಕನಸು ಮನಸ್ಸಿನ ಕನ್ನಡಿ. ಕನಸು ಮನಸ್ಸಿನ ನಾಟ್ನುಡಿ, ಅದು ಅನಿಸಿಕೆಗಳ, ಭಾವನೆಗಳ ನಾಟ್ನುಡಿ ಮತ್ತು ಮುನ್ನುಡಿ ಕೂಡ ಆಗಿರತಕ್ಕಂಥಾದ್ದು. ಆ ಕಾರಣಕ್ಕಾಗಿಯೇ ನಮ್ಮದೇ ಆಗಿರತಕ್ಕಂಥ ವ್ಯವಸ್ಥೆಯಲ್ಲಿ ನಾವು

ಯೋಚನೆಯನ್ನು ಮಾಡಬೇಕಾಗಿದೆ ನಾವು ನಿಜವಾಗಿಯೂ ಕೂಡ ಎಷ್ಟು ಸತದೃಷ್ಟರಾಗಿದ್ದೇವೆಂದರೆ, ನಾನು ಆಗಲೇ ಹೇಳಿದ ಹಾಗೆ ಆರೋಹಣಾದಿ ಅಸಮಾನತೆ ಎನ್ನತಕ್ಕಂಥ ಮಾತನ್ನು ಹೇಳಿದೆ. ಇಲ್ಲಿ ತಾವು ಸ್ವಲ್ಪ ದಯವಿಟ್ಟು ಯೋಚನೆ ಮಾಡಬೇಕು. ಜೆನ್‌ಬ್ರೆಮೆರನ್ ಪರಿಭಾಷೆಯಲ್ಲಿ ಹೇಳುವುದಾದರೆ ಕರ್ನಾಟಕದ ಅಭಿವೃದ್ಧಿಯು ಆರೋಹಣವಾಗಿ ಅಸಮಾನತೆಯನ್ನು ಅನುಭವಿಸುತ್ತಿದೆ. Pyramidical structure. ನಾಡು ಉದಯವಾದ ಸಂದರ್ಭದಲ್ಲಿ ಒಟ್ಟು ದುಡಿಮೆಗಾರರಲ್ಲಿ ಶೇಕಡ 75 ರಷ್ಟು ಮಂದಿ ರಾಜ್ಯದ ವರಮಾನದ ಶೇಕಡ ೬೧.೫೦ ರಷ್ಟನ್ನು ಅನುಭವಿಸುತ್ತಿದ್ದರು. ಅಂದರೆ ಸ್ವಾತಂತ್ರ್ಯ ಬಂದಂಥ ಸಂದರ್ಭದಲ್ಲಿ ದುಡಿಮೆದಾರರು ಶ್ರಮಜೀವಿಗಳು ೭೫ ಪರ್ಸೆಂಟ್‌ನಷ್ಟು ಇದ್ದರೆ ಅವರುಗಳ ವರಮಾನದ ೬೧.೫೦ ನ್ನು ಅನುಭವಿಸುತ್ತಿದ್ದರು. ಆದರೆ, ಇಂದು ಶೇಕಡ ೬೭ ರಷ್ಟು ದುಡಿಮೆದಾರರು ಕೇವಲ ಶೇಕಡ ೩೫ ರಷ್ಟು ವರಮಾನವನ್ನು ಪಡೆಯುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ತೃತಿಯವಲಯದಲ್ಲಿ ಅಂದರೆ ಸೇವಾ ಸೆಕ್ಟರ್‌ನಲ್ಲಿರತಕ್ಕಂಥವರು, ಐಟಿ, ಬಿಟಿ ಮತ್ತು ಈ ಪಂಚತಾರಾ ಹೋಟಲ್‌ಗಳಲ್ಲಿ ಅಥವಾ ನಮ್ಮ ಗಾರ್ಮೆಂಟ್ಸ್ ಐಟಂಗಳನ್ನು ಎಕ್ಸ್‌ಪೋರ್ಟ್ ಮಾಡತಕ್ಕಂಥ ವಿಚಾರದಲ್ಲಿ designers 'walk, designers' clothing, designers' shoes ಎಂದು ಏನು ತಂದಿದ್ದೇವೆ, ಈ ವಲಯದಲ್ಲಿರತಕ್ಕಂಥವರದ್ದು ಅಂದರೆ, ಇದಕ್ಕೆ ಪ್ರತಿಯಾಗಿ ತೃತಿಯ ವಲಯದಲ್ಲಿ ೧೯೬೧ ರಲ್ಲಿ ಒಟ್ಟು ದುಡಿಮೆದಾರರಲ್ಲಿ ಶೇಕಡ ೧೪ ರಷ್ಟು ಮಂದಿ ರಾಜ್ಯದ ಒಟ್ಟು ವರಮಾನದ ೨೬ ರಷ್ಟನ್ನು ತಮ್ಮದಾಗಿಸಿಕೊಳ್ಳುತ್ತಿದ್ದರು. ಆದರೆ ಇಂದು ಕೇವಲ 22 ರಷ್ಟು, ದುಡಿಮೆಗಾರರು ರಾಜ್ಯದ ವರಮಾನದ ೪೦ ರಷ್ಟನ್ನು ನುಂಗಿಹಾಕುತ್ತಿದ್ದಾರೆ. ಅಂದರೆ ಒಂದು ಮಾಯಾಲೋಕವನ್ನು ನಾವು ಸೃಷ್ಟಿಮಾಡುತ್ತಿದ್ದೇವೆ. ಈ ಮಾಯಾಲೋಕದಲ್ಲಿರುವಂತಹ ಬಡವರ ಪ್ರಶ್ನೆ ಏನಿದೆ ? ತಾವು ಅದನ್ನು ನೋಡಬೇಕು. ಆರೋಗ್ಯ ಸಂಬಂಧಿಯಾಗಿರತಕ್ಕಂತಹ ವಿಚಾರದಲ್ಲಿ ಕೂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಇವರುಗಳೆಲ್ಲರನ್ನು ತೆಗೆದುಕೊಂಡರೆ ಆರೋಗ್ಯ ಸಂಬಂಧಿಯಾಗಿರತಕ್ಕಂತಹ ಅಸಮಾನತೆಯ ಬಗ್ಗೆ ಕೂಡ ತಾವು ಯೋಚನೆಯನ್ನು ಮಾಡಬೇಕು. ಪರಿಶಿಷ್ಟ ಜಾತಿಯವರು ಎಸ್.ಟಿ. ಗಿಂತ ಕೆಳಮಟ್ಟದ ಶೇಕಡಾ 2 ಅಂದರೆ ತೀವ್ರವಾಗಿರುವಂತಹ ಶಿಶುಮರಣ ಮೊದಲಾಗಿರುವಂತಹದ್ದು ಏನು ಇರುತ್ತದೆ, ಅಂದರೆ ಸ್ಟ್ಯಾಂಡರ್ಡ್ ಡೀವಿಯೇಷನ್‌ಗಿಂತ ಕಡಿಮೆ ಇರುವಂತಹದ್ದು, ಅದರ ಬಗ್ಗೆ ಮಾನ್ಯ ಆಚಾರ್ಯರವರಿಗೆ ಗೊತ್ತಿದೆ. ಅದು 2 ಪರ್ಸೆಂಟ್‌ಗಿಂತ ಕಮ್ಮಿಯಿರುವುದಿದ್ದರೆ ಪರಿಶಿಷ್ಟ ಜಾತಿಯಲ್ಲಿ 55.80 ಇದೆ. ಶಿಶುಮರಣ ಒಂದು ಸಾವಿರ ಜನಕ್ಕೆ 70 ರಷ್ಟು ಇದೆ. 5 ವರ್ಷ ವಯಸ್ಸಿನೊಳಗೆ ಇರುವಂತಹ ಮಕ್ಕಳ ಮರಣ 105 ರಷ್ಟು ಇದೆ. ಪರಿಶಿಷ್ಟ ಪಂಗಡದಲ್ಲಿ 55.70 ವಯೋಮಾನ ಎರಡು ಎಸ್‌ಟಿಗಿಂತ ಕಡಿಮೆ ಇರುವಂತಹದ್ದು. ಶಿಶುಮರಣ 85 ರಷ್ಟು ಇದೆ, ೫ ವರ್ಷದೊಳಗಿನ ಮಕ್ಕಳ ಮರಣ ಪ್ರಮಾನ 120 ರಷ್ಟು ಇದೆ. ಇದು ನಮ್ಮ ಪೌಷ್ಟಿಕವಾಗಿರುವಂತಹ ಆಹಾರದ ಕೊರತೆಯಿಂದ ಆಗಿದೆ. ಮತ್ತು ಲಿಂಗಸಂಬಂಧಿಯಾದಂತಹ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದರೆ ಅದು ಸಂಪೂರ್ಣವಾಗಿ ನಾವು ದುರ್ಗತಿಗೆ ಬಂದಿದ್ದೇವೆ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಕರ್ನಾಟಕ ರಾಜ್ಯದ ಒಟ್ಟು ವರಮಾನ ಆಯ್ದ ಸೂಚಿಕೆಗಳಲ್ಲಿ 5611.48 ಕೋಟಿ ರೂಪಾಯಿಗಳಲ್ಲಿ, ಹೈದರಾಬಾದ್ ಕರ್ನಾಟಕ ಪ್ರದೇಶದ ಪಾಲು 1980–81 ರಲ್ಲಿ 16.15 ಇದ್ದಾರೆ 1993–94 ರಲ್ಲಿ 13.79, 99–2000 ರಲ್ಲಿ 11.50 ಕ್ಕೆ ಕುಸಿದಿದೆ.

ಪ್ರಾದೇಶಿಕ ಅಸಮಾನತೆಯು ತೀವ್ರಗೊಳ್ಳುತ್ತಾ ನಡೆದಿರುವುದನ್ನು ಇದು ಸೂಚಿಸುತ್ತದೆ. "ಕೂಲಿ ಇದ್ದರೆ ಕೂಳು" ಎಂಬ ಸ್ಥಿತಿಯಲ್ಲಿ ದಿನಗೂಲಿ ದುಡಿಮೆಗಾರರು ರಾಜ್ಯದಲ್ಲಿ 2001 ರಲ್ಲಿ 60.41 ಲಕ್ಷ ಇದ್ದಾರೆ. ಇವರಲ್ಲಿ ಶೇಕಡ 59ರಷ್ಟು ಪಾಲು ಉತ್ತರ ಕರ್ನಾಟಕ ಪ್ರದೇಶವಾಗಿದೆ. ಜನಸಂಖ್ಯೆಯಲ್ಲಿ ಉತ್ತರಕರ್ನಾಟಕದ ಪಾಲು ಕೇವಲ ಶೇಕಡಾ 43 ಇದೆ ಆದರೆ ದಿನಗೂಲಿ ದುಡಿಮೆಗಾರರಲ್ಲಿ ಮಾತ್ರ ಇವರ ಪಾಲು ಶೇಕಡ 59. ಅಂದರೆ ನಾವು ಜನಸಂಖ್ಯೆಯಲ್ಲಿ ಕಡಿಮೆ ಇದ್ದೇವೆ. ದುಡಿಮೆಗಾರರು ಹೆಚ್ಚು ಇದ್ದೇವೆ, ಆದರೆ ಪಾಲಿನಲ್ಲಿ ಮಾತ್ರ ನಾವು ಕಡಿಮೆ ಇದ್ದೇವೆ. ರಾಜ್ಯ ಮಟ್ಟದಲ್ಲಿ ಒಟ್ಟು ದುಡಿಮೆಗಾರರಲ್ಲಿ ದಿನಗೂಲಿ ದುಡಿಮೆಗಾರರ ಪ್ರಮಾಣ ಕೇವಲ 26.79 ಇದ್ದಾರೆ ದಕ್ಷಿಣ ಕರ್ನಾಟಕದಲ್ಲಿ ಇವರ ಪ್ರಮಾಣ 19.37 ಆದರೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಇವರ ಪ್ರಮಾಣ 40.59. ನಾವು ಏತಕ್ಕಾಗಿ ಹಿಂದುಳಿದಿದ್ದೇವೆ. ಅಷ್ಟು ಇದ್ದರೂ ಕೂಡ ನಮಗೆ ಇದ್ಯಾವುದೂ ಕೂಡ ಸೇರುತ್ತಿಲ್ಲವೆನ್ನುವುದು ಬಂದಾಗ ಈ ವಿಚಾರಗಳ ಬಗ್ಗೆ ನಮ್ಮ ವಿಚಾರಗಳನ್ನು ಅವರು ಅಮೂರ್ತವಾಗಿಟ್ಟಿಲ್ಲ ಮೂರ್ತವಾಗಿಟ್ಟಿದ್ದಾರೆ. ಕೆಲವು ವಿಷಯಗಳಲ್ಲಿ ನಮ್ಮದೇ ಆಗಿರತಕ್ಕಂತಹ ವಿವೇಕವನ್ನು ನಾವು ಉಪಯೋಗಿಸಿಕೊಳ್ಳಬೇಕಾಗುತ್ತದೆ. ಈಗ ಮಾನ್ಯ ರಮೇಶ್‌ಕುಮಾರ್‌ರವರು, ಹಾಗೂ ಶ್ರೀರಾಮರೆಡ್ಡಿಯವರು ಈ ವಿಚಾರದ ಬಗ್ಗೆ ಮಾತನಾಡಿದ್ದಾರೆ. ಅವರು ಹೇಳುತ್ತಾರೆ One study in the year 1719 by Major Wilkis spoke of tanks which have been broken and disused from 200 to 300 years. They were visible in every part of the country and every men were over-grown with the jungles and forgotten unknown. ಎನ್ನತಕ್ಕಂತಹ ಮಾತನ್ನು ಹೇಳುತ್ತಾರೆ. ಅದರ ಜೊತೆಗೆ ಅವರು ಹೇಳುತ್ತಾರೆ. ಮೈಸೂರಿನ ಅವತ್ತಿನ ಸರ್ಕಾರದಲ್ಲಿ ಕೋಲಾರ ಮತ್ತು ಬೆಂಗಳೂರಿನ ನಡುವೆ ಅವರು 3 ಅಡಿಗೆ ನೀರು ಸಿಗುತ್ತಿತ್ತು ಎಂದು ಹೇಳುತ್ತಾರೆ.

"No one seems to have thought of the tanks and lakes as not just sources of irrigation, but also as sources of keeping the water table at conveniently high level. It is pointed out that in Bangalore and the adjacent Kolar District, water could be found at the depth of 3 Ft. from the ground at the beginnig of the last century. Now, the level has gone down to more than 300 Ft." ಎಂದು ಲೇಖನವನ್ನು ಬರೆದಾಗ ಅವನು ಹೇಳುತ್ತಾನೆ. ಆದರೆ ನಮಗೆ ಬಂದಿರುವಂತಹ ವರದಿ ಪ್ರಕಾರ ಇದು ಈಗಾಗಲೇ 700 ರಿಂದ 1000 ಅಡಿಗೆ ಕೋಲಾರದಲ್ಲಿ ಹೋಗಿದೆ. ಬೆಂಗಳೂರಿನಲ್ಲಿ 960 ಮಿಲಿಮೀಟರ್‌ಗಿಂತ ಹೆಚ್ಚು ಮಳೆ ಬರತಕ್ಕಂತಹ 1200 ಮಿಲಿಮೀಟರ್ ಮಳೆ ಬರತಕ್ಕಂತಹ ಈ ಪ್ರದೇಶದಲ್ಲಿಯೂ ಕೂಡ ಇವತ್ತು 500, 600 ಅಡಿವರೆಗೂ ಕೂಡ ಬೆಂಗಳೂರಿನಲ್ಲಿ ಹೋಗಿದೆ. ಆದ್ದರಿಂದ ಈ ನಮ್ಮ ನೀರನ್ನು ಉಪಯೋಗಿಸಿಕೊಳ್ಳತಕ್ಕಂಥಾದ್ದು ಕೂಡ ಬಹಳ ದೊಡ್ಡ ಪ್ರಮಾಣದಲ್ಲಿ ಕೆಲಸವನ್ನು ಮಾಡಬೇಕಾಗಿದ್ದರೆ ನಮ್ಮ ಶಿವನನ್ನು ಅಥವಾ ವಿಷ್ಣುವನ್ನು ಮತ್ತು ಬ್ರಹ್ಮನನ್ನು ಇದೇ ದೃಷ್ಟಿಯಲ್ಲಿ ಮಾಡಿದ್ದೇವೆ. ಬ್ರಹ್ಮ ಹುಟ್ಟಿರುವುದು ಕೂಡ ಕಮಲದ ಮೇಲೆ, ಕಮಲ, it is a water plant. ಅದು ನೀರಿನ ಮೇಲಿರುವಂತಹ ಒಂದು ಕಮಲ. ಅಂದರೆ ತಕ್ಷಣವೇ ನಮ್ಮ ಗೆಳೆಯರು ನೋಡಿ ಕಮಲ ಎಷ್ಟು

ಪರಿಶುದ್ಧ ಎಂದು ಅಂದುಕೊಳ್ಳಬಾರದು. ಅಂದರೆ ಕಮಲ ನೀರಿನ ಮೇಲೆ ಇರತಕ್ಕಂಥದ್ದು, ಆದರೆ ಅದೇ ರೀತಿಯಾಗಿ ವಿಷ್ಣು ಆತ ಕಡಲಿನ ಮೇಲೆ ಮಲಗಿರತಕ್ಕಂಥ ಶೇಷಶಯನ ಅದೇ ರೀತಿಯಾಗಿ ಶಿವ ಗಂಗೆಯನ್ನು ......

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಪ್ರಕಾಶ್‌ರವರೇ, ನೀವೂ ಕೂಡ ಕಮಲದ ಮೇಲೆ ನಿಂತಿದ್ದೀರಿ. ನೀವು ಕೂಡ ಕಮಲದ ಮೇಲೆ ನಿಂತಿದ್ದೀರಿ ? ಅಲ್ವಾ ?

ಶ್ರೀ ಎಂ.ಪಿ. ಪ್ರಕಾಶ್ : ನೀವು ಮತ್ತು ನಾವೂ ಕೂಡ ಆಗಿದ್ದೆವಲ್ಲಾರಿ ? ನೀವು ಮತ್ತು ನಾವು ಜೆ.ಹೆಚ್. ಪಟೇಲ್‌ರವರು ಇದ್ದಾಗ ಆಗಿದ್ದೆವಲ್ಲಾ ? ಮತ್ತೆ ಹೊಸದಾಗಿ ಆಗುವುದು ಏನಿದೆ ? ಹೊಸದಾಗಿ ಏನಾದರೂ ಆಗುವುದಿದ್ದರೆ ಹೇಳಿ. ನೀವು ಈಗ ಆ ಕಡೆಗೆ ಹೋಗಿದ್ದೀರಿ. ಆ ಮಾತು ಬೇರೆ. ಆದರೆ ಆಗ ನಾವೆಲ್ಲರೂ ಆಗಿದ್ದೆವಲ್ಲಾ. ಆದ್ದರಿಂದ ಈಗ ಅನೇಕ ವಿಷಯಗಳು ಇವೆ ಅದರ ಹಿಂದೆಯೇ ಹೇಳುವುದಕ್ಕೆ ಹೋದರೆ 1,93,000 ಎಕರೆ ಇವತ್ತು ಅನ್‌ಅಥಾರೈಸ್ಡ್ ಆಕ್ಯುಪೇಷನ್‌ನೊಳಗಡೆ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿದೆ. ಇದರಲ್ಲಿ 40 ಕೆರೆಗಳೂ ಕೂಡ ಸೇರಿವೆ. ಈ 40 ಕೆರೆಗಳನ್ನೂ ಕೂಡ ಇಲ್ಲವಾಗಿರುವ ಬಗ್ಗೆ ನಾವು ಕಾಣುತ್ತೇವೆ. ಆದ್ದರಿಂದ ನಾವು ಇಲ್ಲಿ ಇರಬೇಕಾಗಿರುವ ಬಗ್ಗೆ ಒಂದು ರಾಜಕೀಯ ಇಚ್ಛಾಶಕ್ತಿಯ ಮೂಲಕವಾಗಿ ನಾವು ಕೆಲಸವನ್ನು ಮಾಡಬೇಕಾಗುತ್ತದೆ. ಅದಕ್ಕೆ ಬೇಕಾಗಿರತಕ್ಕಂತಹ ರಾಜಕೀಯ ಇಚ್ಛಾಶಕ್ತಿ, ಈ ಉಗಾದಿ ಹಬ್ಬದ ಮುಂದುಗಡೆಗೆ ಈ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ಕೊಟ್ಟಿರುವುದರಲ್ಲಿ ಡಾ.ಸಿದ್ದಲಿಂಗಯ್ಯನವರು ಬಹಳ ಒಳ್ಳೆಯ ಮಾತನ್ನು ಉಗಾದಿ ಹಬ್ಬದ ಬಗ್ಗೆ ಬರೆದಿದ್ದಾರೆ.

"ಉಳ್ಳವರಿಗೆ ಹಬ್ಬವಾಯಿತು, ಕವಿಕುಲಕ್ಕೆ ಗಬ್ಬವಾಯಿತು
ಇಲ್ಲದವರಿಗೆ ಏನಾಯಿತು, ಹೇಳೆ ಯುಗಾದಿ" ಎಂದು

ಯುಗಾದಿಯನ್ನು ಕೇಳುತ್ತಾರೆ. "ಯುಗ, ಯುಗ ಬರುತ್ತದೆ ಮರಳಿ ಮರಳಿ ಬರುತ್ತದೆ" ಎಂದು ನಾವು ಹೇಳುತ್ತೇವೆ. ಆದರೆ ಇಲ್ಲದವರು ಏನಿದ್ದಾರೆ ಅವರಿಗೆ ಯುಗಾದಿ ಯಾವುದೇ ಸಂತಸವನ್ನೂ ತಂದುಕೊಡುವುದಿಲ್ಲ. ಆ ಸಂತಸವನ್ನು ತಂದುಕೊಡುವಂತಹ ರೀತಿಯಲ್ಲಿ ನಮ್ಮ ಈ ಸರ್ಕಾರ ಕೆಲಸವನ್ನು ಖಂಡಿತವಾಗಿಯೂ ಮಾಡುತ್ತದೆ. ಮೊನ್ನೆ ಪ್ರಕಟಣೆ ಮಾಡಿರುವಂತಹದ್ದು ಏನಿದೆ, ಈ ಕನಿಷ್ಠ ಕಾರ್ಯಕ್ರಮಗಳ ಆ ಒಂದು ಪಟ್ಟಿ ಏನಿದೆ, ಅದು " ಕರ್ನಾಟಕ ಅಭಿವೃದ್ಧಿ ರಂಗ" ಅನ್ನತಕ್ಕಂಥಾದ್ದು. ರಾಜಕೀಯ ಇಚ್ಛಾಶಕ್ತಿಗಳ ಮೂಲಕ ಅದನ್ನು ನಾವು ಪ್ರಕಟಗೊಳಿಸಿದರೆ ಅದರ ಮೂಲಕ ನಾವು ಕೆಲಸವನ್ನು ಪ್ರಾರಂಭ ಮಾಡಿದರೆ ಖಂಡಿತವಾಗಿಯೂ ಕೂಡ ನಮ್ಮ ದೇಶಕ್ಕೆ ಒಳ್ಳೆಯದಾಗುತ್ತದೆ. ಇದು ಏನಾಗಿದೆ ಎನ್ನುವುದರ ಬಗ್ಗೆ ಒಂದು litmus test ಎಂದು ಹೇಳುತ್ತಾರೆ.

> "The litmus test of the performance of the economy, hence Government is neither economic growth nor economic efficiency. It is not even equity in abstract sense, but whether or not it meets the basic needs and the growing aspirations of the people. Growing aspiration of the people has to be met."

ಅದನ್ನು ಮಾಡಿದಾಗ ಮಾತ್ರ, the litmus test, we will be able to pass. That is the only test which we all pray for that. ಅದನ್ನು ಮಾಡತಕ್ಕಂತಹ ಒಂದು ಶಕ್ತಿ ನಮ್ಮೆಲ್ಲರಿಗೂ ಬರಲಿ ಇವತ್ತು ತಾವು ಮತ್ತು ಈ ಸರ್ಕಾರದವರು 3 ದಿವಸಗಳ ಕಾಲ ಈ ವಿಚಾರಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಒಂಧು ಅವಕಾಶ ಕೊಟ್ಟಿರುವುದಕ್ಕೆ ನಿಜವಾಗಿಯೂ ಕೂಡ ಉತ್ತಮವಾದಂತಹ ಪರಂಪರೆಯನ್ನು ಭಾರತ ದೇಶದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ಶಾಸಕಾಂಗ ಪಕ್ಷ ಹಾಕಿಕೊಟ್ಟಿರುವಂತಹದ್ದು ಅನುಕರಣೀಯ, ಅಪೇಕ್ಷಣೀಯ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿಶ್ವೇಶ್ವರ ಹೆಗಡೆಯವರನ್ನು ಬಿಟ್ಟರೆ ಬಿಜೆಪಿ ಕಡೆಯಿಂದ ಯಾರೂ ಕೂಡ ಮಾತನಾಡಿರುವುದಿಲ್ಲ.

ಅಧ್ಯಕ್ಷರು : ಯಾರು ಮಾತನಾಡಬೇಕೆಂಬುದರ ಬಗ್ಗೆ ನಾನು ಲಾಟರಿಯನ್ನು ಹಾಕಬೇಕಾಗುತ್ತದೆ. ಈಗ ಮೊದಲು ಕುಮಾರ ಬಂಗಾರಪ್ಪನವರು ಮಾತನಾಡುವುದಕ್ಕೆ ಅವಕಾಶವನ್ನು ಕೊಡೋಣ.

ಶ್ರೀ ಹೆಚ್.ಡಿ. ಬಸವರಾಜು : ಸನ್ಮಾನ್ಯ ಅಧ್ಯಕ್ಷರಲ್ಲಿ ಒಂದು ವಿನಂತಿ...

ಶ್ರೀ ಸಿ.ಟಿ. ರವಿ : ನೀವು ಬಿಜೆಪಿಯವರಿಗೆ ಮಾತನಾಡುವುದಕ್ಕೆ ಎಷ್ಟು ಅವಕಾಶವನ್ನು ಕೊಟ್ಟಿದ್ದೀರಿ ನೋಡಿ ಅಲ್ಲಿದೆ. ಸುಮಾರು 79 ಜನ ಬಿಜೆಪಿಯ ಕಡೆಯವರು ಇದ್ದಾರೆ.

ಅಧ್ಯಕ್ಷರು : ಈಗ ಮಾನ್ಯ ಸಭಾನಾಯಕರು ಹಾಗೂ ವಿರೋಧಪಕ್ಷದ ನಾಯಕರೂ ಈ ಸದನದಲ್ಲಿದ್ದೀರಿ. ೩ ದಿವಸಗಳ ಕಾಲ ಈ ಬಗ್ಗೆ ಚರ್ಚೆಯಾಗಬೇಕೆಂದು ಇಟ್ಟಿದ್ದೆವು. ಆದರೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ೨ ದಿವಸಕ್ಕೆ ಸೀಮಿತಗೊಳಿಸೋಣ ಎಂದು ಆಯಿತು. ಈಗ ಬಹಳ ಜನ ಸದಸ್ಯರು ಮಾತನಾಡಬೇಕೆಂದು ಇದ್ದಾರೆ. ಅಥವಾ ನಾಳೆಯಾದರೂ ಸದನವನ್ನು ನಡೆಸಬೇಕು. ಇಲ್ಲದೇ ಹೋದರೆ ರಾತ್ರಿ ೯ ಗಂಟೆಯವರೆಗೆ ನಡೆಸಬೇಕಾಗುತ್ತದೆ. ಏನು ಮಾಡಬೇಕೆಂಬುದರ ಬಗ್ಗೆ ಸದನವು ನಿರ್ಧಾರ ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ನಾನು ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ. ಅವಕಾಶವನ್ನು ಕೊಡದೆ ಹೋದರೆ ನಮ್ಮನ್ನು ಬೈಯುತ್ತಾರೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಮಾನ್ಯ ಸಭಾನಾಯಕರು ಹಾಗೂ ವಿರೋಧ ಪಕ್ಷದ ನಾಯಕರು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೊಟ್ಟುಬಿಟ್ಟರೆ ನಾನು ಆ ರೀತಿಯಾಗಿ ಸಭೆಯನ್ನು ನಡೆಸುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು : ಸಂಖ್ಯೆಗಳನ್ನೂ ಕೂಡ ತಾವು ಪರಿಗಣಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಆದರೆ ಕೆಲವರು ಮಾತನಾಡಿ ಹೊರಗೆ ಹೋಗಿಬಿಡುತ್ತಾರೆ.

ಶ್ರೀ ಹೆಚ್.ಡಿ. ಬಸವರಾಜು : ತಾವು ಸದಸ್ಯರ ಸಂಖ್ಯೆಗಳನ್ನೂ ಕೂಡ ಪರಿಗಣಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ನಾವು ೮೦ ಜನರು ಬಿಜೆಪಿ ವತಿಯಿಂದ ಇದ್ದೇವೆ. ಈಗಾಗಲೇ ಒಬ್ಬರೋ ಇಬ್ಬರೋ ಮಾತ್ರ ಮಾತನಾಡಿದ್ದಾರೆ.

ಅಧ್ಯಕ್ಷರು : ನಾನು ಅದನ್ನು ಮಾನ್ಯ ಸಭಾನಾಯಕರು ಹಾಗೂ ವಿರೋಧಪಕ್ಷದ ನಾಯಕರಿಗೆ ಬಿಟ್ಟಿದ್ದೇನೆ. ಕುಮಾರ ಬಂಗಾರಪ್ಪನವರೇ, ತಾವು ಮಾತನಾಡಿ. ಆಮೇಲೆ ಅವರು ಏನು ಅಪ್ಪಣೆಯನ್ನು ಕೊಡುತ್ತಾರೋ ಆ ಪ್ರಕಾರ ಮಾಡೋಣ.

ಶ್ರೀ ಎಸ್. ಕುಮಾರ ಬಂಗಾರಪ್ಪ(ಸೊರಬ) :– ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ 20ನೇ ತಾರೀಖು ವಿಧಾನಮಂಡಲವನ್ನು ಉದ್ದೇಶಿಸಿ ಮಾತನಾಡಿರತಕ್ಕಂಥ ರಾಷ್ಟ್ರಪತಿಯವರ ಮಾತುಗಳನ್ನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಹಾಗೂ ಬೆಂಬಲವನ್ನು ವ್ಯಕ್ತಪಡಿಸುತ್ತಾ ಇವತ್ತು..............

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು :– ಸಮಯವನ್ನು ನಿಗದಿ ಮಾಡಿದರೆ, ಸಮಸ್ಯೆ ಬಗೆಹರಿಯುತ್ತದೆ. ಹೆಚ್ಚು ಮಾತನಾಡಲು ನಮಗೂ ಹಂಬಲವಿಲ್ಲ, ನಮಗೆ ಐದೇ ನಿಮಿಷ ಸಮಯವನ್ನು ನಿಗದಿಪಡಿಸಿದರೂ ನಾವು ಬೇಡವೆಂದು ಹೇಳುವುದಿಲ್ಲ.

ಅಧ್ಯಕ್ಷರು : ಈಗ ಸಭಾ ನಾಯಕರು ಹಾಗೂ ವಿರೋಧಪಕ್ಷದ ನಾಯಕರು ಸಮಾಲೋಚನೆ ಮಾಡಿ ತಿಳಿಸುತ್ತಾರೆ. ಇವತ್ತು ೯ ರಿಂದ ೧೦ ಗಂಟೆಯವರೆಗೆ ಸದನವನ್ನು ನಡೆಸುವುದೇ ಅಥವಾ ನಾಳೆ ಸದನವನ್ನು ನಡೆಸುವುದು ಎಂಬ ಬಗ್ಗೆ ಅವರೀರ್ವರೂ ಸಮಾಲೋಚನೆ ಮಾಡಿ ತಿಳಿಸುತ್ತಾರೆ. ಈಗ ನಾನು ಮಾನ್ಯ ಕುಮಾರ ಬಂಗಾರಪ್ಪನವರನ್ನು ಕರೆದಿದ್ದೇನೆ, ಅವರು ಮಾತಾಡಲಿ.

ಶ್ರೀ ಹೆಚ್. ಡಿ. ಬಸವರಾಜು :– ತಾವು ಸಮಯವನ್ನು ನಿಗದಿಮಾಡಿದರೆ ನಮಗೆ ಅನುಕೂಲವಾಗುತ್ತದೆ. ತಾವು ಎಷ್ಟೇ ಸಮಯ ಕೊಟ್ಟರೂ ನಾವು ಬೇಡವೆನ್ನುವುದಿಲ್ಲ.

ಅಧ್ಯಕ್ಷರು :– ಆಯಿತು, ಕೊಡೋಣ.

ಶ್ರೀ ಎಸ್. ಕುಮಾರ ಬಂಗಾರಪ್ಪ :– ಮಾನ್ಯ ಅಧ್ಯಕ್ಷರೇ, ಇವತ್ತು ಮಾನ್ಯ ರಾಷ್ಟ್ರಪತಿಯವರು ಮಾಡಿರತಕ್ಕಂತಹ ಭಾಷಣವನ್ನು ಮತ್ತು ಅವರು ಕೊಟ್ಟಿರುವ ೧೧ ಸೂತ್ರಗಳನ್ನು, ಸಲಹೆಗಳನ್ನು ನಾನು ಬೆಂಬಲಿಸುತ್ತಾ ವಿಶೇಷವಾಗಿ ರಾಷ್ಟ್ರಪತಿಗಳವರ ಭಾಷಣವನ್ನು ಮುಖಪುಟದಿಂದ ಕಡೆಯ ಪುಟದವರೆಗೆ ನೋಡತಕ್ಕಂಥ ಸಂದರ್ಭ ಇವತ್ತು ಇದೆ. ಏಕೆಂದರೆ ಈ ಮುಖಪುಟದಲ್ಲಿ ಒಂದು ರೀತಿಯಾಗಿದ್ದರೆ, ಹಿಂಭಾಗದಲ್ಲಿರುವ ಮಹರ್ಷಿ ಪತಂಜಲಿ ಅವರ ಯೋಗಸೂತ್ರದಲ್ಲಿ ಮಾಡಿರತಕ್ಕಂಥದ್ದರಲ್ಲಿ ಒಂದು ಅವರ ಆಸೆ ಏನು ಇದೆ, "ನೀವು ಯಾವುದಾದರೂ ಅತ್ಯಂತ ಪ್ರಮುಖವಾದ ಕಾರಣ, ಅಸಾಧಾರಣ ಯೋಜನೆಯಿಂದ ಸ್ಫೂರ್ತಿಗೊಂಡಾಗ ನಿಮ್ಮೆಲ್ಲಾ ಆಲೋಚನೆಗಳು ಅಡತಡೆಗಳನ್ನು ಮುರಿದು ಮುನ್ನುಗ್ಗುತ್ತವೆ. ನಿಮ್ಮ ಚಿಂತನೆ ತನ್ನ ಪರಿಧಿ ಮೀರಿ ಪರಿವರ್ತನೆಗೊಳ್ಳುತ್ತದೆ, ನಿಮ್ಮ ಅಂತಃಪ್ರಜ್ಞೆ ಎಲ್ಲಾ ಕೋನಗಳಲ್ಲೂ ಪ್ರವಹಿಸುತ್ತದೆ. ತನ್ಮೂಲಕ ನೀವು ನಿಮ್ಮನ್ನು ಒಂದು ಹೊಸ, ಅಮೂಲ್ಯವಾದ, ಆಶ್ಚರ್ಯಕರವಾದ ಜಗತ್ತಿನಲ್ಲಿ ಗುರುತಿಸಿಕೊಳ್ಳುತ್ತೀರಿ. ನಿಮ್ಮಲ್ಲಿನ ಸುಪ್ತಶಕ್ತಿ, ಸಹಜ ಸಾಮರ್ಥ್ಯ ಮತ್ತು ಪ್ರತಿಭೆಗಳಿಗೆ ಜೀವ ಬರುತ್ತದೆ. ಹಾಗೂ ನಿಮ್ಮನ್ನು ನೀವು ನಿಮ್ಮ ಊಹೆಗೂ ನಿಲುಕದ ಅತ್ಯುನ್ನತ ವ್ಯಕ್ತಿಯೆಂಬುದನ್ನು ಅನ್ವೇಷಿಸುತ್ತೀರಿ." ಅನ್ನತಕ್ಕಂಥ ಮಾತನ್ನು ಆಡಿದ್ದಾರೆ. ಅಂದರೆ ಮುಖ್ಯವಾಗಿ ನಾವು ಇಲ್ಲಿ ಮಾನ್ಯ ರಾಷ್ಟ್ರಪತಿಯವರನ್ನು ನೋಡಬೇಕಾಗಿರುವುದು ಇದೊಂದು Inspiration ಆಗಿದೆ. ಇಲ್ಲಿ ನಾವು ಅವರಿಂದ ಪ್ರೇರಣೆ ತೆಗೆದುಕೊಂಡು ಪ್ರತಿಯೊಬ್ಬ ರಾಷ್ಟ್ರದ ಒಬ್ಬ ಧೀಮಂತ ನಾಯಕನ ಬಾಯಿನಿಂದ ಬರತಕ್ಕಂಥ ಮಾತುಗಳು ಮತ್ತು ಅವರ ಸಲಹೆಗಳು ಇವೆಲ್ಲವನ್ನು ಬಹಳ ದೊಡ್ಡ ಭಾವನೆಯಿಂದ ನೋಡತಕ್ಕಂಥ ಪ್ರಯತ್ನವನ್ನು ನಾವು ಇಲ್ಲಿ ಮಾಡಬೇಕು. ಇಲ್ಲಿ 11 ಸೂತ್ರಗಳಲ್ಲಿ ಇದನ್ನು ಹೇಳಿದ್ದರೂ ಕೂಡ

ಇದರ ಮರ್ಮವನ್ನು, ಅದರೊಳಗಿರುವ ಅರ್ಥವನ್ನು ನಾವು ಗ್ರಹಿಸಿಕೊಂಡು ಇಲ್ಲಿ ಬಹಳ ವಿಶಾಲವಾದ ಮಾತುಗಳಲ್ಲಿ ಮುಂದೆ ಹೋಗತಕ್ಕಂಥಾದ್ದು ಬಹಳ ಅವಶ್ಯಕತೆಯಿದೆ. ಏಕೆಂದರೆ ಇವತ್ತು ಮಾನ್ಯ ರಾಷ್ಟ್ರಪತಿಯವರು ನಮ್ಮ ಒಂದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಮ್ಮ ಭಾರತ ರಾಷ್ಟ್ರಕ್ಕೆ ಅಲಂಕಾರಯುಕ್ತವಾದ ಕಿರೀಟ ಇದ್ದಹಾಗೆ. ಇವತ್ತು ಯಾರೇ ಒಬ್ಬ ಮನುಷ್ಯನಿಗೆ ಗಲ್ಲು ಶಿಕ್ಷೆ ಆಗಿರುತ್ತದೆಯೆಂದರೆ ಆತನನ್ನು ಕ್ಷಮಿಸತಕ್ಕಂಥ ಶಕ್ತಿಯನ್ನು ಆ ರಾಷ್ಟ್ರಪತಿಯರಿಗೆ ಕೊಟ್ಟಿರತಕ್ಕಂಥದ್ದು ಇದೆ. ಅಂದರೆ ಇವತ್ತು ನಮ್ಮ ಸಂವಿಧಾನದಲ್ಲಿ ಪ್ರೆಸಿಡೆನ್ಷಿಯಲ್ ಪವರ್ಸ್ ಏನಿದೆ ಅದು ಬಹಳ ಮುಖ್ಯವಾದದು. ಅಂದರೆ ನಮ್ಮ ಅಮೇರಿಕಾದಲ್ಲಿ ಇರುವ ಪ್ರೆಸಿಡೆನ್ಷಿಯಲ್ ಪವರ್ಸ್‌ಗೂ ಇಂಗ್ಲೆಂಡ್‌ನಲ್ಲಿ ಇರುವುದಕ್ಕೆ ವ್ಯತ್ಯಾಸವಿದೆ. ಇಂಗ್ಲೇಂಡಿನಲ್ಲಿ 1965 ರಿಂದಲೇ ಅದನ್ನು ಮಾಡಿದರು. ಅಲ್ಲಿಗೇ ಅದನ್ನು ಕೊನೆಗೊಳಿಸಿ ಇಲ್ಲಿ ಕೂಡ ಯಾವುದೇ ಕಾರಣಕ್ಕೂ ಗಲ್ಲು ಶಿಕ್ಷೆಯಾಗಕೂಡದೆಂದು ನಿರ್ಧರಿಸಿದರು. ಆದರೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅಂತಿಮವಾಗಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ರಾಷ್ಟ್ರಪತಿಯವರ ಕೈಯಲ್ಲಿದೆ. ಅಂದರೆ ಇವತ್ತು ವಿಶೇಷವಾಗಿ ನಾವು ಇಲ್ಲಿ ನೋಡಬೇಕಾಗಿರುವುದೇನೆಂದರೆ ಅಭಿವೃದ್ಧಿ ಎನ್ನುವುದಕ್ಕೆ ಹತ್ತು ಹಲವಾರು ಉದ್ದೇಶಗಳಲ್ಲಿ ಅವರು ಹೇಳಿದ್ದರೂ ಕೂಡ ಅವರ ದೇಶ ಪ್ರೇಮ, ಕರ್ನಾಟಕದ ಮೇಲೆ ಅವರು ಇಟ್ಟಿರತಕ್ಕಂಥ ಆಸೆ ವಿಶೇಷವಾದದ್ದು. ಅವರು ' ನಾನು ಕರ್ನಾಟಕದಿಂದ ಎಷ್ಟು ಪ್ರೇರಣೆಯನ್ನು ಹೊಂದಿದ್ದೇನೆ ನಾನೊಬ್ಬ ಬಡವರ್ಗದಿಂದ ಬಂದಿದ್ದರೂ ಸಹ ರಾಷ್ಟ್ರಪತಿಯ ಸ್ಥಾನಕ್ಕೆ ನನ್ನನ್ನು ಆಯ್ಕೆ ಮಾಡಿರುವುದರಲ್ಲಿ ಕರ್ನಾಟಕದ್ದು ಕೂಡ ಭಾಗ ಇದೆ ಎನ್ನುವುದನ್ನು ನಾನು ಇಲ್ಲಿ ನೆನಸುತ್ತೇನೆ ' ಎಂಬ ಮಾತನ್ನು ಅವರು ಇಲ್ಲಿ ಆಡಿದ್ದಾರೆ. ಅಂದರೆ ಇದರಲ್ಲಿ ವಿಶೇಷವಾಗಿ ಅವರು ಮಾತನಾಡತಕ್ಕಂಥ ವಿಚಾರಕ್ಕೂ ಮುಂಚೆ ಅವರು ಮೊದಲು ಮಾತನಾಡಿರುವುದೇನೆಂದರೆ, ಬೆಂಗಳೂರಿನಲ್ಲಿ ಅವರು ಕಂಡಿರತಕ್ಕಂಥ ಗುರುಗಳನ್ನು ಅವರು ಕಂಡಿರತಕ್ಕಂಥ ಜಾಗಗಳನ್ನು, ಸವಿದ ತಿಂಡಿಗಳನ್ನು, ಸಂಸ್ಕೃತಿಯನ್ನು ಇಲ್ಲಿ ನೋಡಿದ ಹತ್ತಾರು ಸಂಗೀತ ಪ್ರಕಾರಗಳ ಇತ್ಯಾದಿಯಾಗಿ ನಮ್ಮ ನೆಲ ಜಲಗಳ ಬಗ್ಗೆ ಅವರು ಸುಮಾರು ಎರಡು ಮೂರು ಪುಟಗಳಷ್ಟು ಮಾತನಾಡಿದ್ದಾರೆ. ಕಡೆಗೆ ಅವರು ಅಭಿವೃದ್ಧಿಯ ಬಗ್ಗೆ ತಮ್ಮ ಚಿಂತನೆಯನ್ನು ತಿಳಿಸುತ್ತಾರೆ. ಇದು ಸರ್ವೇಸಾಮಾನ್ಯವಾಗಿ ಅವರು ನೋಡಿರತಕ್ಕಂಥಾದ್ದು ಏನಿದೆ ಅಂದು ರಾಷ್ಟ್ರವ್ಯಾಪಿಯಾಗಿ ಬಂದಿರತಕ್ಕಂಥ ಹತ್ತು ಹಲವಾರು ಚಿಂತನೆಗಳಲ್ಲಿ ನಮ್ಮ ರಾಜ್ಯಕ್ಕೆ ಸೂಕ್ತವಾಗಿರುವ ೧೧ ಸೂತ್ರಗಳನ್ನು ಅವರು ನಮ್ಮ ಮುಂದೆ ಇಟ್ಟಿದ್ದಾರೆಯೇ ಹೊರತು ಆದರೆ ಇದರಲ್ಲಿ ಎಲ್ಲವನ್ನೂ ಅಡಗಿಸಿಡಬೇಕೆಂಬ ಉದ್ದೇಶ ಇರಲಿಲ್ಲ. ಆದರೆ ನಮ್ಮ ಸರ್ಕಾರಕ್ಕೆ ನಾನು ವಿನಂತಿ ಮಾಡಿಕೊಳ್ಳುವುದಿಷ್ಟೇ, ಈಗಾಗಲೇ ಮಾನ್ಯ ನಮ್ಮ ಮಾಜಿ ಮುಖ್ಯಮಂತ್ರಿಗಳಾದಂಥ ಮಾನ್ಯ ಧರ್ಮಸಿಂಗ್ ಅವರು ಮತ್ತು ತಾವು ಅಧ್ಯಕ್ಷರು ಮಾನ್ಯ ರಾಷ್ಟ್ರಪತಿಯವರನ್ನು ಕಂಡು ಇಲ್ಲಿ ಬರಮಾಡಿಕೊಂಡು ಇದಾದ ನಂತರ ನಾವು ಇದನ್ನು ಸರ್ಕಾರದ ಮುಂದೆ ಹತ್ತು ಹಲವಾರು ಕಾರ್ಯಕ್ರಮಗಳನ್ನು ತರುತ್ತೇವೆಂದು ಏನು ಭಾವನೆಗಳನ್ನು ವ್ಯಕ್ತಪಡಿಸಿದಿರಿ ಇದರ ಮೇಲೆ ಚರ್ಚೆಯಾಗಿ ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕೆನ್ನುವ ನಿಟ್ಟಿನಲ್ಲಿ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳವರು ಸಭೆಯನ್ನು ಮಾಡಿ, ತಾವೂ ಕೂಡ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಂಪರ್ಕ ಮಾಡಿ ಚರ್ಚೆ ಮಾಡಿದ್ದೀರಿ, ಆದರೆ ಇಲಾಖೆಗಳು ಇವತ್ತು ಯಾವ ನಿರ್ಧಾರಗಳನ್ನು,

ಯಾವ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರಕ್ಕೆ ಸಲ್ಲಿಸಿದೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ಏಕೆಂದರೆ ನಾಳೆ ದಿನ ಬಜೆಟ್ಟಿಗೆ ಹೋಗುವಂತಹ ಸಂದರ್ಭಗಳಿವೆ. ಈ ಕಾರ್ಯಕ್ರಮಗಳ ಬಗ್ಗೆ ಮಾನ್ಯ ವಿರೋಧ ಪಕ್ಷಗಳ ನಾಯಕರು ಮಾತನಾಡತಕ್ಕಂಥ ಸಂದರ್ಭಗಳಲ್ಲಿ ಹೇಳಿದ್ದಾರೆ. ಶ್ರೀರಾಮರೆಡ್ಡಿಯವರು ಮಾತನಾಡಿದ್ದಾರೆ. ಇವ್ಯಾವೂ ಕೂಡ ಹೊಸ ಕಾರ್ಯಕ್ರಮಗಳಲ್ಲ, ಆದರೆ ಹೆಸರುಗಳು ಬದಲಾವಣೆಯಾಗಬಹುದೇ ಹೊರತು ಮನುಷ್ಯನ ಸಮಸ್ಯೆಗಳು ಅಂದಿನಿಂದ ಹಿಡಿದು ಇಂದಿನವರೆಗೂ ಅಂದರೆ ಪ್ರತಿನಿತ್ಯವು ಸಮಸ್ಯೆಯನ್ನು ಎದುರಿಸುವಂತಹ ಪರಿಸ್ಥಿತಿ ಬರುತ್ತದೆ. ಆದರೆ ಇಲ್ಲಿ ನಾವು ನೋಡಬೇಕಾಗಿರುವುದೇನೆಂದರೆ ೧೧ ಸೂತ್ರಗಳ ಬಗ್ಗೆ ಹೇಳುವಾಗ ನಮ್ಮ ಡಾ: ರಾಜೇಂದ್ರಪ್ರಸಾದರವರ ಭಾಷಣವನ್ನು ನಾನು ಇಲ್ಲಿ ನೋಡುತ್ತಿದ್ದೇನೆ. ಆಗಸ್ಟ್ ೧೫ ನೇ ತಾರೀಖು ಸ್ವಾತಂತ್ರ್ಯ ಬಂದ ದಿನದ ರಾತ್ರಿ ಅವರು ಮಾಡಿರುವಂಥ ಭಾಷಣದಲ್ಲಿ ೧೧ ಮಾತುಗಳನ್ನು ಅವರೇ ಸ್ವತಃ ಅವರ ಕೈಯಿಂದ ಬರೆದುಕೊಂಡು ಹೋಗಿ ಆ ಭಾಷಣವನ್ನು ಮಾಡಿದ್ದಾರೆ. ಆಗಿನ್ನೂ ಪಾರ್ಲಿಮೆಂಟ್ ಎಂದು ಇನ್ನೂ ಕೂಡ ಕರೆಯುತ್ತಿರಲಿಲ್ಲ ಪ್ರೆಸಿಡೆಂಟ್ ಆಫ್ ಕಾನ್ಸ್‌ಟಿಟ್ಯೂಯೆಂಟ್ ಅಸೆಂಬ್ಲಿ ಎಂದು ಅವತ್ತಿನ ದಿವಸ ದಿವಂಗತ ರಾಜೇಂದ್ರಪ್ರಸಾದ್‌ರವರು ಅಡ್ರೆಸ್ ಮಾಡಿರತಕ್ಕಂಥಾದ್ದು ಈ 11 ಸೂತ್ರಗಳಲ್ಲಿ ಅವರು ವಿಶೇಷವಾಗಿ ಹೇಳಿರತಕ್ಕಂಥದ್ದು "When every individual will be free and provide with them twelve of the development and raise of the fullest stature . . . " ಅಂದರೆ ಮುಖ್ಯವಾಗಿ ಇವರಿಗೆ ಬೇಕಾಗಿರುವಂಥದ್ದು" When the distinction between the high and low, between the rich and poor will disappear." ಅಂದರೆ ಅವರು ಅವತ್ತಿನಿಂದಲೂ ಕೂಡ ಇದೇ ತರಹದ ಈ 11 ಸೂತ್ರಗಳ ಬಗ್ಗೆ ಇಂತಹ ಮಾತುಗಳನ್ನು ಹೇಳಿದ್ದಾರೆ. ಅಂದರೆ ಸ್ವಾತಂತ್ರ್ಯ ಬಂದ ದಿನದಿಂದ ಹಿಡಿದು ಇವತ್ತಿನವರೆಗೂ ಇದರಲ್ಲಿ ಕೆಲವು ನಮ್ಮ ಅನ್‌ಟಚಬಲಿಟಿ ಬಗ್ಗೆ, ಜಾತೀಯತೆಯನ್ನು ಮರೆತುಬಿಟ್ಟು ಇದರಲ್ಲಿ ನಮ್ಮ ಧರ್ಮಗಳು ನಮ್ಮನ್ನು ನಾವು ಹೊಂದಿಕೊಂಡು ಹೋಗುವಂತಹ ಭಾವನೆಗಳನ್ನು ನಾವು ಹೊಂದಬೇಕು, ಆದರೆ ಇದು ಡಿಸ್ಟರ್ಬ್ ಆಗುವಂತಹ ಮಾತುಗಳು ಇಲ್ಲಿ ಆಗಬಾರದು ಎಂಬ ಭಾವನೆಯನ್ನು ಹೊಂದಿದ್ದಾರೆ. ನನಗೆ ತಿಳಿದಮಟ್ಟಿಗೆ ಇಲ್ಲಿ ನಮ್ಮ ಮಾನ್ಯ ರಾಷ್ಟ್ರಪತಿಗಳು ಅವತ್ತಿನ ಡಾ : ರಾಜೇಂದ್ರಪ್ರಸಾದ್‌ರವರ ಭಾಷಣದಿಂದ ಪ್ರೇರಣೆಯನ್ನು ಹೊಂದಿರಬಹುದು ಅಥವಾ ಹತ್ತಾರು ಗುರುಗಳಿಂದ ಅವರು ಪ್ರೇರಣೆಯನ್ನು ಹೊಂದಿರಬಹುದು ಅಥವಾ ಎಲ್ಲೋ ಒಬ್ಬ ಬಡವನ್ನು ನೋಡಿ ಆತನ ಕಷ್ಟ ಪರಿಹಾರ ಮಾಡಬೇಕೆಂಬ ದೃಷ್ಟಿಯಿಂದ ಆ ಪ್ರೇರಣೆ ಆಗಿರಬಹುದು. ಹಾಗಾಗಿ ಇವತ್ತು ನಮ್ಮ ರಾಷ್ಟ್ರಪತಿಯವರು ಇಂತಹ ಹತ್ತು ಹಲವಾರು ವಿಚಾರಗಳಲ್ಲಿ ಕೊಟ್ಟಿರತಕ್ಕಂಥ ಈ ಒಂದು ಸಂದೇಶವನ್ನು ನಾವು ಮುಖ್ಯವಾಗಿ ನೋಡತಕ್ಕಂಥಾದ್ದು ಬಹಳ ಅವಶ್ಯವಿದೆ. ಇದರಲ್ಲಿ ವಿಶೇಷವಾಗಿ ಇವತ್ತು ಮಾನ್ಯ ರಾಷ್ಟ್ರಪತಿಯವರ ಭಾಷಣದಲ್ಲಿ ನಮ್ಮ ಸರ್ಕಾರದಿಂದ ಕೊಡತಕ್ಕಂಥ ಕಾರ್ಯಕ್ರಮಗಳು, ನಾವು ಮಾಡತಕ್ಕಂಥ ಕಾರ್ಯಕ್ರಮಗಳು, ಇವೆಲ್ಲಾ ಕಾರ್ಯಕ್ರಮಗಳನ್ನು ಯಥಾವತ್ತಾಗಿ ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಕೆ.ಡಿ.ಪಿ. ಮೀಟಿಂಗ್‌ಗಳಲ್ಲಿ ನಾವೇನು ಕುಳಿತುಕೊಂಡು ಮಾತನಾಡುತ್ತೇವೆ, ಅಂದರೆ ಈ ಊರಿಗೆ ಕುಡಿಯುವ ನೀರು ಇರಬೇಕು, ನಮ್ಮ ಪರ್ ಕ್ಯಾಪಿಟ ಇನ್‌ಕಮ್ ಏನು ಜಾಸ್ತಿಯಾಗಬೇಕು ಇತ್ಯಾದಿಯಾಗಿ ಮಾತನಾಡುತ್ತೇವೆ. ನಮ್ಮ ರಾಷ್ಟ್ರಪತಿಯವರು ಕೂಡ ಪರ್ ಕ್ಯಾಪಿಟ ಇನ್‌ಕಮ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪರ್ ಕ್ಯಾಪಿಟ

ಇನ್‌ಕಮ್ ಇವತ್ತು ಇಷ್ಟುಮಟ್ಟಿಗೆ 10% ವರೆಗೂ ನಾವು ಹೋಗಬೇಕು ಎನ್ನುವ ಉದ್ದೇಶದಿಂದ, ಹೇಳಿದ್ದಾರೆ, ಅಂದರೆ ಮೂಲಭೂತವಾಗಿ ನಾವು ಮಾಡಿರಬೇಕಾಗಿರುವಂತಹದ್ದು ನಮ್ಮ ಸರ್ಕಾರ ಕೊಟ್ಟಿರತಕ್ಕಂಥ ಹತ್ತು ಹಲವಾರು ಕಾರ್ಯಕ್ರಮಗಳನ್ನು ಪ್ರಾಮಾಣಿಕವಾಗಿ ನಾವು ಅನುಷ್ಠಾನ ಮಾಡತಕ್ಕಂಥ ನಿಟ್ಟಿನಲ್ಲಿ ಹೋದರೆ ಮಾತ್ರ ಈ ನಮ್ಮ ಕಾರ್ಯಕ್ರಮಗಳನ್ನು ಮುಂದೆ ನಾವು ತೆಗೆದುಕೊಂಡು ಹೋಗಲಿಕ್ಕೆ ಸಾಧ್ಯವಾಗುತ್ತದೆ ಮತ್ತು ಇದನ್ನು ಅನುಷ್ಠಾನಕ್ಕೆ ತರುವಂತಹ ನಿಟ್ಟಿನಲ್ಲಿ ಯೋಚನೆ ಮಾಡಿ ಮುಂದಿನ ಹೊಸ ದಿಗಂತದಲ್ಲಿ ಹೋಗಲಿಕ್ಕೆ ಸಾಧ್ಯವಾಗುತ್ತದೆ. ನಾನು ಇಲ್ಲಿ ಮುಖ್ಯವಾಗಿ 11 ಉದ್ದೇಶಗಳನ್ನು ನೋಡಿದಂತಹ ಸಂದರ್ಭದಲ್ಲಿ ಇವತ್ತು ಇಂಧನದ ಬಗ್ಗೆ ನಾವು ಹೆಚ್ಚಿನ ಪ್ರಮಾಣದಲ್ಲಿ ಮಾತನಾಡತಕ್ಕಂಥ ಅವಶ್ಯಕತೆ ಬಹಳ ಇದೆಯೆನ್ನುವುದು ನನ್ನ ಭಾವನೆ. ಏಕೆಂದರೆ ಇವತ್ತು ಎಲ್ಲಿಗೆ ಹೋದರೂ ಕೂಡ, ಗ್ರಾಮೀಣ ಪ್ರದೇಶದ ರೈತಾಪಿ ವರ್ಗದ ಬಗ್ಗೆ ಚಿಂತನೆ ಮಾಡಿದರೂ ಕೂಡ ಬಹಳ ಸಮಸ್ಯೆ ಬಂದಿರುವಂತಾದ್ದು ಇಂಧನದ್ದೇ, ಅಂದರೆ ವಿದ್ಯುತ್ ಇವತ್ತು ನಮಗೆ ಎಲ್ಲೇ ನಿಂತರೂ ಕೂಡ ಅದು ನಮ್ಮ ಎದುರಿಗೆ ಕಾಣುವಂಥಾದ್ದು, ಎಲ್ಲದಕ್ಕೂ ಮೂಲಭೂತವಾಗಿ ಫೌಂಡೇಷನ್ ಆಗಿರುವುದು ವಿದ್ಯುತ್ ಆಗಿದ್ದು ಇವತ್ತು ಸಬ್ಸಿಡೈಸ್ಡ್ ರೇಟಿನಲ್ಲಿ ಪಂಪ್‌ಸೆಟ್‌ಗೂ ವಿದ್ಯುತ್ತನ್ನು ನಾವು ಕೊಡುತ್ತಿದ್ದೇವೆ ಅಥವಾ ನಮ್ಮ ರೈತಾಪಿ ವರ್ಗಕ್ಕೂ ಕೂಡ ಸಬ್ಸಿಡೈಸ್ಡ್ ರೇಟಿನಲ್ಲಿ ನಾವು ವಿದ್ಯುತ್ತನ್ನು ಕೊಟ್ಟರೂ ಕೂಡ ಅದರ ಉತ್ಪಾದನೆ ಮಾಡುವುದರಲ್ಲಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ಹೋಗಬೇಕಾಗಿದೆ ಇವತ್ತು ನಾವು ದೊಡ್ಡ ದೊಡ್ಡ ಸ್ಥಾವರಗಳನ್ನು ಹಾಕುವಂತಹ ಪ್ರಯತ್ನವನ್ನು ಮಾಡುತ್ತೇವೆ, ದೊಡ್ಡ ದೊಡ್ಡ ಯೋಚನೆಗಳನ್ನು ಮಾಡುತ್ತೇವೆ. ಆದರೆ ಇವತ್ತು ಮರ್ಕಿದಾ ಅಂತಹ ಜಾಗದಲ್ಲಿ ಸಣ್ಣ ಸಣ್ಣ ರೈತರು ಹರಿಯತಕ್ಕಂಥ ಝರಿಯಿಂದ ಸಣ್ಣ ಸಣ್ಣ ಡೈನಮೋವನ್ನು ಇಟ್ಟುಕೊಂಡು ಅವರು ವಿದ್ಯುತ್ ಉತ್ಪಾದಿಸುತ್ತಿದ್ದಾರೆ. ಸರ್ಕಾರದಿಂದ ಯಾವುದೇ ವಿದ್ಯುತ್ತಿನ ಉತ್ಪಾದನೆಯನ್ನು ಕೇಳುವುದಿಲ್ಲ, ಮತ್ತು ಅವರೇ ಉತ್ಪಾದನೆಯನ್ನು ಮಾಡಿಕೊಂಡು ಹೋಗುವುದು ನಡೆಯುತ್ತಿದೆ. ಅಂದರೆ ಇವತ್ತು ಮುಖ್ಯವಾಗಿ ನಾವು ಯೋಚಿಸಬೇಕಾಗಿರುವುದು ಎಂದರೆ ಸಣ್ಣ ಸಣ್ಣ ವಿದ್ಯುತ್ ಕೇಂದ್ರಗಳನ್ನು, ಸ್ಥಾಪಿಸುವುದಲ್ಲದೆ ಸಣ್ಣ ಸಣ್ಣ ಝರಿಗಳಿಂದ, ಅದರಲ್ಲೂ ವಿಶೇಷವಾಗಿ ನಮ್ಮ ಕರಾವಳಿ ಪ್ರದೇಶದಲ್ಲಿ ಸಮುದ್ರದಿಂದ ವಿದ್ಯುತ್ತನ್ನು ತಯಾರು ಮಾಡಬೇಕಾಗಿರುವುದು ಇವತ್ತು ಬಹಳ ಅವಶ್ಯವಾಗಿದೆ. ಇವತ್ತು ಗಾಳಿಯಿಂದ ಅಂದರೆ ವಿಂಡ್ ಮಿಲ್ಸ್ ಅನ್ನು ಮಾಡಿ ವಿದ್ಯುತ್ತನ್ನು ತೆಗೆಯುತ್ತಿದ್ದೇವೆ. ಇದು ನಮಗೆ ಬಹಳ ಸುಲಭವಾಗಿ ಇರತಕ್ಕಂಥ ವಿದ್ಯುತ್, ಆದರೆ ಇವತ್ತು ಸಮುದ್ರದ ಅಲೆಗಳಿಂದ ಅಂಡರ್ ಕರೆಂಟಿನಿಂದ ಬರತಕ್ಕಂಥ ವಿದ್ಯುತ್ತೇನಿದೆ, ಅದು ಮುಖ್ಯವಾದದು ಇವತ್ತು ನಮ್ಮ ಮಾನ್ಯ ರಾಷ್ಟ್ರಪತಿಗಳು ಜವಳಿಗೆ ಮೊದಲ ಸ್ಥಾನವನ್ನು ಕೊಟ್ಟಿದ್ದಾರೆ. ಆದರೆ ಮಾನ್ಯ ಎಂ.ಪಿ. ಪ್ರಕಾಶ್‌ರವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಮೇಲ್ನೋಟಕ್ಕೆ ಜವಳಿ ಅಂದರೆ ಅದು ಗಾರ್ಮೆಂಟ್ ಫ್ಯಾಕ್ಟರೀಸ್ ಅಂದು ಕಂಡರೂ ಸಹ ಒಳಗಡೆಯಿರುವ ಮರ್ಮ ರೈತಾಪಿ ಜನಕ್ಕೆ ಬರತಕ್ಕಂಥ ಹತ್ತು ಹಲವಾರು ಸಮಸ್ಯೆಗಳನ್ನು ಎದುರಿಸಲಿಕ್ಕೆ ಸಾಧ್ಯವಿದೆಯೆನ್ನುವ ಉದ್ದೇಶದಿಂದ ಹಾಕಿರತಕ್ಕಂಥ ವಿಷಯ ಈ ಜವಳಿ ಎಂದು ಹೇಳಿದ್ದಾರೆ. ಅಂದರೆ ಮೂಲಭೂತವಾಗಿ ಹತ್ತಿ ಬೆಳೆಗಾರರು, ಗಾರ್ಮೆಂಟಿಗೆ ಸಂಬಂಧಿಸಿದಂತೆ ಯಾವ ಸಂದರ್ಭದಲ್ಲಿ ಒಂದು ಕಾಲದಲ್ಲಿ ಇಂಗ್ಲೆಂಡಿಗೆ ಭಾರತದಿಂದ ಜವಳಿ ಹೋಗತಕ್ಕಂಥ ಕಾಲವಿತ್ತು ಆ

ದಿನ ಮತ್ತೆ ಬರಬೇಕೆನ್ನುವ ಉದ್ದೇಶದಿಂದ ಮಾನ್ಯ ರಾಷ್ಟ್ರಪತಿಗಳು ಆ ಜವಳಿಗೆ ಮೊದಲನೇ ಸ್ಥಾನ ಕೊಟ್ಟಿರಬಹುದು ಎನ್ನುವುದು ನನ್ನ ಭಾವನೆ ಆದರೆ ಇಲ್ಲಿ ವಿಶೇಷವಾಗಿ ಇಲ್ಲಿ ನೋಡಬೇಕಾಗಿರುವುದು ಏನೆಂದರೆ ಘನತ್ಯಾಜ್ಯವಸ್ತುಗಳಿಂದ ನಾವು ಇವತ್ತೇನು ಹತ್ತಾರು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ಅದರಲ್ಲೂ ವಿಶೇಷವಾಗಿ ಪ್ಲಾಸ್ಟಿಕ್‌ನ್ನು ಉತ್ಪಾದನೆ ಮಾಡತಕ್ಕಂಥ ವಿಧಾನ ಹೆಚ್ಚು ಕಡಿಮೆ ಬಹಳ ಸುಲಭ ಹೆಚ್ಚು ಕಡಿಮೆ ಎಲ್ಲರ ಮನೆಯಲ್ಲೂ ಕೂಡ ಇವತ್ತು ಪ್ಲಾಸ್ಟಿಕ್‌ನ್ನು ನಾವು ಬಳಸುತ್ತಿದ್ದೇವೆ. ಎಲ್ಲಾ ರೀತಿಯಲ್ಲಿಯೂ ಕೂಡ ಇವತ್ತು ನಮಗೆ ಪ್ಲಾಸ್ಟಿಕ್ ಇಲ್ಲದೇ ಏನೂ ಕೂಡ ನಡೆಯುವುದಿಲ್ಲವೆನ್ನುವ ಭಾವನೆಯಲ್ಲಿ ನಾವು ಬಂದು ನಿಂತಿದ್ದೇವೆ. ಆದರೆ ಭೂಮಿತಾಯಿಗೆ ತನ್ನೊಳಗೆ ಎಲ್ಲವನ್ನೂ ಕರಗಿಸಿಕೊಳ್ಳುವ ಶಕ್ತಿಯಿದ್ದರೂ ಸಹ ಈ ಪ್ಲಾಸ್ಟಿಕ್ ಅನ್ನು ಮಾತ್ರ ನಮ್ಮ ಭೂಮಿತಾಯಿಗೆ ಕರಗಿಸಿಕೊಳ್ಳತಕ್ಕಂಥ ಶಕ್ತಿ ಇನ್ನು ಕೂಡ ಬರಲಿಲ್ಲ, ನಮ್ಮ ವಿಜ್ಞಾನಿಗಳು ಇಷ್ಟೆಲ್ಲಾ ಸಂಶೋಧನೆ ಮಾಡಿ ಪ್ರಯೋಗಗಳನ್ನು ಮಾಡಿದರೂ ಕೂಡ ಪ್ಲಾಸ್ಟಿಕ್ ಅನ್ನು ಕರಗಿಸುವ ಶಕ್ತಿ ಅವರಿಗೆ ಬರಲಿಲ್ಲ, ಅಂದರೆ ಇವತ್ತು ನೇಚರ್‌ಗೆ ವಿರುದ್ಧವಾಗಿ ಹೊರಟಿರುವಂತಹದ್ದುಇದ್ದು ಘನತ್ಯಾಜ್ಯ ವಸ್ತುಗಳು ಅದರಲ್ಲು ವಿಶೇಷವಾಗಿ ಪ್ಲಾಸ್ಟಿಕ್‌ನಿಂದ ಆಗುವ ಹತ್ತು ಹಲವಾರು ಅನಾಹುತಗಳೇನಿವೆ ಇದನ್ನು ನಾವು ಮನಗಾಣಬೇಕು ಎನ್ನುವ ಉದ್ದೇಶದಿಂದ ಇವತ್ತು ಘನತ್ಯಾಜ್ಯ ವಸ್ತುಗಳ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ಇವತ್ತು plastic is the only material which can be recycled. ಎನ್ನುವಂಥಾದ್ದು ಪ್ಲಾಸ್ಟಿಕ್ ವಸ್ತುಗಳು ಒಡೆದು ಹೋಗಿದೆಯೆಂದರೆ ಮತ್ತೆ ಅದನ್ನು ಕರಗಿಸಿ ಮತ್ತೊಂದು ರೂಪಕ್ಕೆ ತರುವಂತಹ ಪ್ರಯತ್ನವನ್ನು ಮಾಡುತ್ತೇವೆ. ಆದರೆ ಉಳಿದಿರತಕ್ಕಂಥ ಹತ್ತು ಹಲವಾರು ಘನತ್ಯಾಜ್ಯ ವಸ್ತುಗಳಿಂದ ನಾವು ವಿದ್ಯುತ್ತನ್ನು ಉತ್ಪಾದನೆ ಮಾಡಿಕೊಳ್ಳತಕ್ಕಂಥ ಶಕ್ತಿಯಿದೆ ಎನ್ನತಕ್ಕಂಥ ಭಾವನೆಯಿಂದ, ಯಾವ ಉದ್ದೇಶದಿಂದ ಹಣವನ್ನು ಕೊಟ್ಟು ನಾವು ಒಂದು ವಸ್ತುವನ್ನು ಖರೀದಿಸಿ, ಮತ್ತೊಂದನ್ನು ಕಸದ ಬುಟ್ಟಿಗೆ ಹಾಕಿ ಅದನ್ನು ವೇಸ್ಟ್ ಎಂದು ಪರಿಗಣಿಸುತ್ತೇವೋ ಅದರಿಂದ ನಾವು ಬದುಕಬೇಕು ಅದು ಮತ್ತೆ ನಮಗೆ ಪ್ರಕೃತಿಯಿಂದ ಬರತಕ್ಕದ್ದು, ಅದನ್ನು ಮತ್ತೆ ಬಳಕೆ ಮಾಡಬೇಕೆಂಬ ಭಾವನೆ ಇವತ್ತು ನಮ್ಮಲ್ಲಿ ತಪ್ಪಿದೆ ಅದನ್ನು ಇಲ್ಲಿ ಎತ್ತಿಹಿಡಿಯತಕ್ಕಂಥ ಪ್ರಯತ್ನ ಇಲ್ಲಿ ಮಾಡಿರುವುದನ್ನು ನಾವು ಮನಗಾಣಬೇಕು. ಪ್ರತಿ ಸಾರಿಯೂ ಒಂದೊಂದೇ ಪಾಯಿಂಟ್‌ಗೆ ನಾವು ಹೋದಾಗಲೂ ಕೂಡ ಎಲ್ಲೋ ಒಂದು ಕಡೆ ನಾವು ಅಭಿವೃದ್ಧಿ ಹೊಂದುತ್ತೇವೆ, ಅಭಿವೃದ್ಧಿಶೀಲವಾಗಿರುತ್ತೇವೆ ಅಭಿವೃದ್ಧಿ ಪರವಾಗಿ ಮಾತನಾಡುತ್ತೇವೆ ಇದರಿಂದ ನಮ್ಮ ಹಣಕಾಸಿನ ವ್ಯವಸ್ಥೆ ಉತ್ತಮವಾಗುತ್ತದೆನ್ನುವ ಭಾವನೆಯಿಂದ ನಮ್ಮ ರಾಷ್ಟ್ರಪತಿಗಳ ಭಾಷಣವನ್ನು ನೋಡತಕ್ಕಂಥದ್ದಲ್ಲ. ಇಲ್ಲಿ ವಿಶೇಷವಾಗಿ ನೋಡಬೇಕಾದುದು ಏನೆಂದರೆ ರಾಷ್ಟ್ರಪತಿಗಳ ಭಾಷಣದಲ್ಲಿರುವ ಒಳಗಿನ ಮರ್ಮವನ್ನೊಳಗೊಂಡಿರುವ ಭಾವನೆಗಳು ಇದರಲ್ಲಿ ಎಷ್ಟಿದೆ ಎನ್ನುವುದನ್ನು ನೋಡಬೇಕಾದ ಅವಶ್ಯಕತೆ ಬಹಳವಿದೆ ಎನ್ನುವುದು ನನ್ನ ಭಾವನೆ ಅದರಲ್ಲೂ ವಿಶೇಷವಾಗಿ ನಮ್ಮ ಅರ್ಬನ್ ಸಮಸ್ಯೆಗಳು, ಇವತ್ತು ನಮ್ಮ ಅರ್ಬನೈಸೇಷನ್ ಅನ್ನು ನಾವು ಹೇಗೆಂದು ಕರೆಯುತ್ತೇವೆ ? ಇವತ್ತು ಪುರಸಭೆಯಿಂದ ತ್ಯಾಜ್ಯವಸ್ತುಗಳ ಮೂಲಕ ವಿದ್ಯುತ್ ಪಡೆಯುವುದು ಇದೆ, ಆದರೆ ಅರ್ಬನೈಸೇಷನ್ ಆಗುವುದು ಹೇಗೆ ? ಅರ್ಬನೈಸೇಷನ್ ಆಗುವುದು On the basis of the population. ಒಂದು ಪಾಪ್ಯುಲೇಷನ್, 10 ಸಾವಿರಗಳಿಗಿಂತ ಹೆಚ್ಚು ಜನಸಂಖ್ಯೆಯಾದರೆ ಅದನ್ನು ಪಟ್ಟಣ ಪಂಚಾಯಿತಿ ಎಂದು ಕರೆಯುತ್ತೇವೆ. ಈಗ ನಮ್ಮ ಗ್ರಾಮ ಪಂಚಾಯಿತಿಗಳು ಹತ್ತು ಸಾವಿರಕ್ಕಿಂತ ಜಾಸ್ತಿಯಿರುವುದು

ಎಷ್ಟಿಲ್ಲ ? ಇವತ್ತು ನಾವು ಒಂದು ಗ್ರಾಮ ಪಂಚಾಯಿತಿಗೆ ಐದು ಲಕ್ಷ ರೂಪಾಯಿ ಕೊಡುತ್ತೇವೆ, 10 ಲಕ್ಷ ರೂ., ಅಥವಾ 20 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಮಾತನಾಡುವುದಲ್ಲ, ಆದರೆ ಸಮಸ್ಯೆ ಉದ್ಭವವಾಗುತ್ತಿರುವುದು ನಗರದಷ್ಟೇ ಪ್ರಮಾಣದಲ್ಲಿ ಇವತ್ತು ಗ್ರಾಮೀಣಪ್ರದೇಶದಲ್ಲಿಯೂ ಸಹ ಜನಸಂಖ್ಯೆ ಏನು ಬೆಳೆದು ಬೆಳೆದೂ ಇಲ್ಲಿಯವರೆಗೂ ಬಂದು ನಿಂತಿದೆ. ಮುಖ್ಯವಾಗಿ ಇವತ್ತು ನಾವು ಅಭಿವೃದ್ಧಿಯನ್ನು ಕಾಣಬೇಕು ಎನ್ನುವುದಾದರೆ ನಮ್ಮ ಜನಸಂಖ್ಯೆಯ ನಿಯಂತ್ರಣವನ್ನು ಸಂಪೂರ್ಣವಾಗಿ ಕಡಿಮೆ ಮಾಡುವ ಪ್ರಯತ್ನವನ್ನು ನಾವು ಮಾಡಲಿಲ್ಲವೆಂದರೆ ಅದು ಸಾಧ್ಯವಾಗುವುದಿಲ್ಲ. ನಿರ್ದಿಷ್ಟವಾಗಿ ಹೇಗೆ ಚೈನಾ ಇವತ್ತು ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಜನಸಂಖ್ಯೆಯನ್ನು ನಿಯಂತ್ರಣ ಮಾಡಲಿಕ್ಕೆ ಪ್ರಯತ್ನಿಸಿದೆ, ಆ ರೀತಿ ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳದೇ ಹೋದರೆ ಯಾವುದೇ ಒಂದು ಅಭಿವೃದ್ಧಿ ಪಥದತ್ತ ನಾವು ಹೋಗತಕ್ಕಂಥ ದಿನಗಳನ್ನು ನಾವು ಕಾಣುವುದಕ್ಕೆ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು : ಇಪ್ಪತ್ತು ನಿಮಿಷ ಆಯಿತು, ದಯಮಾಡಿ ಬೇಗ ಮುಗಿಸಿ, ಇನ್ನೂ ಬಹಳ ಜನರು ಮಾತನಾಡಲಿದ್ದಾರೆ. ಇದು ತಮಗೂ ಗೊತ್ತಿದೆ.

ಶ್ರೀ ಎಸ್. ಕುಮಾರ ಬಂಗಾರಪ್ಪ :– ಇನ್ನೆಷ್ಟು ನಿಮಿಷ ಕಾಲಾವಕಾಶ ಕೊಡುತ್ತೀರಿ ?

ಅಧ್ಯಕ್ಷರು :– ಇನ್ನೆರಡು ನಿಮಿಷದಲ್ಲಿ ಮಾತನಾಡಿ ಮುಗಿಸಿ,

ಶ್ರೀ ಎಸ್. ಕುಮಾರ ಬಂಗಾರಪ್ಪ :– ಆಯಿತು, ಆ ನಿಟ್ಟಿನಲ್ಲಿ ಇವತ್ತು ನಾವು ಜನಸಂಖ್ಯೆಯನ್ನು ನಿಯಂತ್ರಣ ಮಾಡುವಂತಹದ್ದು ಬಹಳ ಅವಶ್ಯವಾಗಿದೆ. ಅದಕ್ಕೆ ಮುಖ್ಯವಾಗಿ ಕಾರ್ಯಕ್ರಮವನ್ನು ಹಾಕುವುದು ಬಹಳ ಉತ್ತಮ ಅನ್ನಿಸುತ್ತದೆ. ಇನ್ನೂ ನೀರಿನ ಬಗ್ಗೆ ಇವತ್ತು ಬಹಳಷ್ಟು ಹಿರಿಯ ನಾಯಕರೆಲ್ಲಾ ಮಾತನಾಡಿದ್ದಾರೆ. ನಾವು ಇವತ್ತು ಕೇಳುವುದಿಷ್ಟೇ, ಇಂದು ಮುಖ್ಯವಾಗಿ ನಮ್ಮ ರೈತನಿಗೆ ಕೊಡಬೇಕಾಗಿರುವುದು ನೀರಾವರಿ, ವಿದ್ಯುತ್, ರಸ್ತೆ ಈ ಮೂರನ್ನು ನಾವು ಪ್ರಾಥಮಿಕವಾಗಿ ಒಬ್ಬ ರೈತನಿಗೆ ಕೊಟ್ಟರೆ ಯಾವ ಒಬ್ಬ ರೈತನೂ ಯಾರೊಬ್ಬರ ಮನೆಯ ಮುಂದೆ ಹೋಗಿ ಆತ ಕೈಚಾಚುವುದಿಲ್ಲ, ಯಾವ ಸರ್ಕಾರದ ಮುಂದೆಯೂ ಆತ ಕೈಚಾಚುವುದಿಲ್ಲ, ಆದ್ದರಿಂದ ಮೊದಲು ಅವನಿಗೆ ಬೇಕಾಗಿರುವುದು ನೀರಾವರಿ, ಇವತ್ತು ನಾವು ಬೃಹತ್ತಾದ ನೀರಾವರಿ ಯೋಜನೆಗಳನ್ನು ಹಾಕಿಕೊಂಡು ಹದಿನೈದು, ಇಪ್ಪತ್ತು ವರ್ಷದಿಂದ ಮಾಡುತ್ತೇವೆ ಎನ್ನುವುದಕ್ಕಿಂತ ನಾವು ಸ್ಥಳೀಯವಾಗಿ ನಮ್ಮ ನಮ್ಮ ಕೆರೆಗಳನ್ನು, ಕಟ್ಟೆಗಳನ್ನೂ ನಮ್ಮ ಕಾಲುವೆಗಳನ್ನು ನಮ್ಮ ಕೊಳಗಳನ್ನು ನಮ್ಮ ಮನೆಯ ಮೇಲಿನ ಸೂರಿನ ಮೇಲಿನಿಂದ ಬೀಳತಕ್ಕಂಥ ಮಳೆಯ ನೀರು ಚರಂಡಿಗೆ ಹೋಗಿ ನಮ್ಮ ಕೆರೆಗೆ ಸೇರಿಸತಕ್ಕಂಥ ರೀತಿಯಲ್ಲಿ ಪ್ರಯತ್ನವನ್ನು ಮಾಡಲಿಲ್ಲವೆಂದರೆ ವಾಟರ್ ಕಷ್ಟವಾಗುತ್ತದೆ. ಅದು ವಾಟರ್ ಹಾರ್‌ವೆಸ್ಟಿಂಗ್ ಮೂಲಕ ಇರಬಹುದು, ಕೆರೆ ಹೂಳು ತೆಗೆಯತಕ್ಕಂಥ ಮೂಲಕ ಇರಬಹುದು, ನಮ್ಮನ್ನು ನಾವು ಸಂಪೂರ್ಣವಾಗಿ ಆ ಕೆರೆಯ ನೀರಿನೊಂದಿಗೆ ಹೊಂದಿಸಿಕೊಂಡು ಬೆಳೆ ತೆಗೆಯತಕ್ಕಂಥ ಪ್ರಯತ್ನ ಮಾಡಲಿಲ್ಲವೆಂದರೆ ಯಾವುದೇ ರೀತಿಯಲ್ಲಿಯೂ ಕೂಡ ನಾವು ಈ ರೀತಿಯ ಹತ್ತು ಹಲವಾರು ಕಾರ್ಯಕ್ರಮಗಳನ್ನು ಹಾಕಲಿಕ್ಕೆ ಸಾಧ್ಯವಾಗುವುದಿಲ್ಲ, ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುವುದಿಷ್ಟೆ ಇವತ್ತು ಹತ್ತಾರು ವರ್ಷಗಳಿಂದ ಕೆರೆಗಳ ಬಗ್ಗೆ ಅಥವಾ ನೀರಾವರಿ ಬಗ್ಗೆ ನಾವು ಹತ್ತಾರು ಪ್ರಯತ್ನಗಳನ್ನು ಮಾಡುತ್ತಲೇ ಬಂದಿದ್ದೇವೆ.

ನಾವ್ಯಾರು ಕೂಡ ಇದರ ಬಗ್ಗೆ ಪ್ರಯತ್ನಿಸಿಲ್ಲವೆಂದು ಹೇಳಲಿಕ್ಕೆ ಹೋಗುವುದಿಲ್ಲ. ಕಳೆದ ವರ್ಷ ದೇವರ ದಯದಿಂದ ಸ್ವಲ್ಪ ಮಳೆ ಚೆನ್ನಾಗಿ ಬಂದಿದೆ. ಆದರೆ ಈ ರೀತಿಯ ಕ್ರಾಂತಿಯನ್ನು ಮಾಡಬೇಕೆನ್ನುವುದಾದರೆ, ಮಾನ್ಯ ರಾಷ್ಟ್ರಪತಿಯವರು ಕೊಟ್ಟಿರತಕ್ಕಂಥ 11 ಸೂತ್ರಗಳ ಬಗ್ಗೆ ಅಭಿವೃದ್ಧಿಯನ್ನು ಮಾಡಬೇಕೆನ್ನುವುದಾದರೆ, ಒಂದು ವೇಳೆ ಏನಾದರೂ ಬರ ಬಂತು ಅಂದರೆ ಈ ರೀತಿಯ ಕಾರ್ಯಕ್ರಮಗಳನ್ನು ಮಾಡಲಿಕ್ಕೆ ಸಾಧ್ಯವಿದೆಯಾ ? ಒಂದು ವೇಳೆ ಭೂಕಂಪ ಆಯಿತು ಅಂದರೆ ಮಾಡಲಿಕ್ಕೆ ಸಾಧ್ಯವಿದೆಯೇ ? ಒಂದು ವೇಳೆ ಸುನಾಮಿಯಂಥ ಪ್ರಕೃತಿ ವಿಕೋಪಗಳಾದರೆ ಆಗ ಮಾಡಲಿಕ್ಕೆ ಸಾಧ್ಯವಿದೆಯೇ ? ಏಕೆಂದರೆ ಆಗ ಸಂಪೂರ್ಣವಾಗಿ ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿ ಕಾರ್ಯಕ್ರಮಗಳನ್ನು ತೊಡಗಿಸಿಕೊಳ್ಳುವಂತಹ ಪರಿಸ್ಥಿತಿ ಬರುತ್ತದೆ. ಆ ನಿಟ್ಟಿನಲ್ಲಿ ನಾನು ತಮ್ಮಲ್ಲಿ ವಿನಂತಿಸುವುದಿಷ್ಟೇ, ನಮ್ಮ ಹತ್ತು ಹಲವಾರು ಸಮಸ್ಯೆಗಳಿಗೆ ಮೂಲಭೂತವಾಗಿ ನಮಗೆ ದೇವರು ಕೊಡುವಂತಹದ್ದು ನೀರು ನೀರಿಗೆ ಪೂರಕವಾಗಿರುವುದು ಅರಣ್ಯ, ಹೀಗಿದ್ದೂ ನಾವು ಪ್ರಕೃತಿಯನ್ನು ಅಲ್ಲೋಲ ಕಲ್ಲೋಲ ಮಾಡಿಕೊಂಡು ನಾವು ಅಭಿವೃದ್ಧಿಯನ್ನು ಸಾಧನೆ ಮಾಡುತ್ತೇವೆನ್ನುವುದರಲ್ಲಿ ಯಾವುದೇ ಅರ್ಥವಿಲ್ಲ. ನಾವು ತಮ್ಮ ಮೂಲಕ ವಿನಂತಿಸುವುದಿಷ್ಟೆ ಅರಣ್ಯ, ನೆಲ, ಜಲವನ್ನು ಇವತ್ತು ಸಂಪೂರ್ಣವಾಗಿ ರಕ್ಷಣೆ ಮಾಡಿ ತನ್ಮೂಲಕ ನಮ್ಮ ಜನಸಂಖ್ಯೆಯನ್ನು ನಿಯಂತ್ರಿಸುವ ಪ್ರಯತ್ನವನ್ನು ಮಾಡಿದರೆ ನಮ್ಮ ಈ ತರಹದ ಹತ್ತು ಹಲವಾರು ಕಾರ್ಯಕ್ರಮಗಳನ್ನು ಏನು ಡೆವಲಪಿಂಗ್ ಕಂಟ್ರಿ ಎಂದು ಹೇಳಿ ಅಥವಾ ಅಭಿವೃದ್ಧಿಪಥದತ್ತ ನಮ್ಮ ದೇಶ ಹೋಗತಕ್ಕ ಹಾಗೆ ಮಾಡಲಿಕ್ಕೆ ಇವೆಲ್ಲಾ ಕೂಡಾ ಬೇಸ್ ಆಗುತ್ತದೆ. ಆ ನಿಟ್ಟಿನಲ್ಲಿ ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳಲಿಕ್ಕೆ ಹೋಗುವುದಿಲ್ಲ. ನಾನು ಇನ್ನು ಹತ್ತು ಹಲವಾರು ವಿಚಾರಗಳಿದ್ದರೂ ಸಹ ತಾವು ಕೊಟ್ಟಿರುವಂತಹ ಸಮಯಕ್ಕಾಗಿ ತಮಗೆ ಕೃತಜ್ಞತೆಯನ್ನು ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು : ರಾಜೇಂದ್ರನ್‌ರವರೇ, ಮಾನ್ಯ ರಾಯರೆಡ್ಡಿಯವರು ಟ್ರೈನ್‌ಗೆ ಹೋಗಬೇಕಾಗಿದೆಯಂತೆ.

ಒಬ್ಬ ಮಾನ್ಯ ಸದಸ್ಯರು : ಅಧ್ಯಕ್ಷರೇ, ನಮ್ಮ ಗತಿ ಏನು ? ಅವಕಾಶ ಇದೆಯೋ ಇಲ್ಲವೋ ಹೇಳಿ ಬಿಡಿ.

(ಗೊಂದಲ)

ಅಧ್ಯಕ್ಷರು : ಎಲ್ಲರಿಗೂ ಅವಕಾಶ ಕೊಡುತ್ತೇನೆ. ಕುಳಿತುಕೊಳ್ಳಿ ಮಾನ್ಯ ರಾಯರೆಡ್ಡಿಯವರೇ, ನಿಮಗೆ ನಾನು ಹತ್ತು ನಿಮಿಷ ಕೊಟ್ಟಿದ್ದೇನೆ. ಟೈಮ್ ನೋಡಿಕೊಳ್ಳಿ ಈಗ ಐದು ಗಂಟೆ ನಲ್ವತ್ತು ನಿಮಿಷ. ನೀವು ಇವತ್ತು ನಿಮಿಷಕ್ಕೆ ಮುಗಿಸಬೇಕು.

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) : ಅಧ್ಯಕ್ಷರೇ, ನಮ್ಮ ಸುವರ್ಣ ಕರ್ನಾಟಕ ಆಚರಣೆ ಸಮಾರಂಭದಲ್ಲಿ ಘನತೆವೆತ್ತ ರಾಷ್ಟ್ರಪತಿಗಳಾದ ಮಾನ್ಯ ಅಬ್ದುಲ್ ಕಲಾಂ ಅವರು ಏನು ಈ ಸದನವನ್ನೂ ಉದ್ದೇಶಿಸಿ ಮಾತನಾಡಿದ್ದಾರೆ ಆ ವಿಚಾರದಲ್ಲಿ 10 ನಿಮಿಷದಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಈ ವಿಚಾರದಲ್ಲಿ ನಾವು ಬಹಳ ಗಂಭೀರವಾಗಿ ಚರ್ಚೆ ಮಾಡಬೇಕಾಗಿದೆ. ಬಹುತೇಕ ಎಲ್ಲ ಶಾಸಕರು ಕೂಡ ಚರ್ಚೆಗೆ ಹೆಚ್ಚು ಸಮಯ ಬೇಕೆನ್ನುತ್ತಿದ್ದಾರೆ. ಆದರೆ ತಾವು ಮೊದಲು ನಿಗದಿಪಡಿಸಿದ್ದರಲ್ಲಿ ಒಂದು ದಿವಸ ಕಡಿಮೆ ಮಾಡಿದ್ದರಿಂದ ಈಗ ಈ ತೊಂದರೆಯಾಗಿದೆ.

ಶ್ರೀ ವೈಜನಾಥ ಪಾಟೀಲ್ : ಅಧ್ಯಕ್ಷರೇ . . .

ಶ್ರೀ ಬಸವರಾಜ ರಾಯರೆಡ್ಡಿ : ಸ್ವಾಮಿ ನನ್ನನ್ನು ನೀವು ಕರೆದಿದ್ದೀರಿ, ನಾನು ಮಾತನಾಡುತ್ತಿದ್ದೇನೆ

ಅಧ್ಯಕ್ಷರು : ವೈಜನಾಥ ಪಾಟೀಲರೇ, ರಾಯರೆಡ್ಡಿಯವರೇನೋ ಟ್ರೈನ್‌ಗೆ ಹೋಗುತ್ತಾರಂತೆ, ಅವರು ಮಾತನಾಡಲಿ, ನಿಮಗೂ ಅವಕಾಶ ಕೊಡುತ್ತೇನೆ ಕುಳಿತುಕೊಳ್ಳಿ

ಶ್ರೀ ವೈಜನಾಥ ಪಾಟೀಲ್ : ಇದರಲ್ಲಿ ರಾಜ್ಯದ ಒಂದು ಭಾಗದ ಪ್ರಸ್ತಾಪ ಮಾತ್ರ ಇದೆ.

ಅಧ್ಯಕ್ಷರು : ಕುಳಿತುಕೊಳ್ಳಿ ನಿಮಗೂ ಅವಕಾಶ ಕೊಡುತ್ತೇನೆ, ಎಲ್ಲರೂ ಒಂದೇ ಸಲಕ್ಕೆ ಮಾತನಾಡಲು ಸಾಧ್ಯವಾಗುತ್ತದೆಯೇ ? ಈ ಗಲಾಟೆಯಲ್ಲೇ ಹತ್ತು ನಿಮಿಷ ಕಳೆದುಹೋಯಿತು. ಅವರು ಟ್ರೈನ್‌ಗೆ ಹೋಗಬೇಕಂತೆ, ಕುಳಿತುಕೊಳ್ಳಿ.

ಶ್ರೀ ವೈಜನಾಥ ಪಾಟೀಲ್ : ನಾನು ಟ್ರೈನ್‌ಗೆ ಹೋಗಬೇಕಾಗಿದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಅಧ್ಯಕ್ಷರೇ ಎಲ್ಲರಿಗೂ ಒಟ್ಟಿಗೆ ಅವಕಾಶ ಕೊಟ್ಟುಬಿಡಿ. ಎಲ್ಲರೂ ಒಟ್ಟಿಗೆ ಮಾತನಾಡುತ್ತಾರೆ.

ಅಧ್ಯಕ್ಷರು : ದಯಮಾಡಿ ಸಹಕರಿಸಿ. ಎಲ್ಲರಿಗೂ ಅವಕಾಶ ಇದೆ. ರಾತ್ರಿ 12 ಗಂಟೆವರೆಗೂ ನಡೆಸಬೇಕಾ, ಹೇಳಿ.

(ಮಾನ್ಯ ಸದಸ್ಯರುಗಳಿಂದ ಶ್ರೀ ಬಸವರಾಜ ರಾಯರೆಡ್ಡಿ ಮತ್ತು ಶ್ರೀ ವೈಜನಾಥ ಪಾಟೀಲರಿಬ್ಬರೂ ಮಾತನಾಡತೊಡಗಿದರು)

(ಗೊಂದಲ)

ಅಧ್ಯಕ್ಷರು : ಮಾನ್ಯ ರಾಯರೆಡ್ಡಿಯವರೇ, ಅವರು ಹಿರಿಯರು. ಅವರದಾದ ಮೇಲೆ ನೀವು ಮಾತನಾಡಿ.

ಶ್ರೀ ವೈಜನಾಥ ಪಾಟೀಲ್ : ಅಧ್ಯಕ್ಷರೇ . . .

ಶ್ರೀ ಬಸವರಾಜ ರಾಯರೆಡ್ಡಿ : ನಾನು ಶುರು ಮಾಡಿಬಿಟ್ಟಿದ್ದೇನೆ ಅಧ್ಯಕ್ಷರೇ,

ಅಧ್ಯಕ್ಷರು : ಮಾನ್ಯ ವೈಜನಾಥ ಪಾಟೀಲರೇ ಕುಳಿತುಕೊಳ್ಳಿ ನಂತರ ನಿಮ್ಮನ್ನೇ ಕರೆಯುತ್ತೇನೆ.

(ಇಬ್ಬರು ಸದಸ್ಯರೂ ಮಾತುಡತೊಡಗಿದರು)

ಶ್ರೀ ಬಸವರಾಜ ರಾಯರೆಡ್ಡಿ : ಸಾರ್ ನಾನು ಏಳೂವರೆ ಫ್ಲೈಟ್‌ಗೆ ದೆಲ್ಲಿಗೆ ಹೋಗುತ್ತಿದ್ದೇನೆ ಆದ್ದರಿಂದ ನಾನು ಇರುವುದಿಲ್ಲ ಅದಕ್ಕೆ ನಾನು ಮನವಿ ಮಾಡಿದೆ

ಅಧ್ಯಕ್ಷರು : ಈಗ ಇಬ್ಬರೂ ಕುಳಿತುಕೊಳ್ಳಿ, ವೈಜನಾಥ ಪಾಟೀಲರೇ, ನೀವು ಹಿರಿಯ ಸದಸ್ಯರಾಗಿ ಹೀಗೆ ಮಾಡಿದರೆ ಹೇಗೆ ? ನಾನು ಈಗ ನಿಮ್ಮಿಬ್ಬರನ್ನೂ ಬಿಟ್ಟು ಮೂರನೇಯವರನ್ನು ಕರೆಯುತ್ತೇನೆ. ಇಂಥ ನಡವಳಿಕೆಯಿಂದ ಸದನ ನಡೆಸಲು ಸಾಧ್ಯ ಆಗುವುದಿಲ್ಲ, ಸದನಕ್ಕೆ ಗೌರವವೂ ಬರುವುದಿಲ್ಲ. ಬಹಳ ಸದಸ್ಯರು ಮಾತನಾಡಬೇಕೆಂದು ಆಸೆ ವ್ಯಕ್ತಪಡಿಸುತ್ತಿದ್ದಾರೆ. ರಾತ್ರಿ ಎಷ್ಟು ಗಂಟೆ ಆದರೂ ನಡೆಸೋಣ. ಪಾರ್ಲಿಮೆಂಟಿನಲ್ಲಿ ಇಡೀ ರಾತ್ರಿ ನಡೆದಿಲ್ಲವೇ ? ಎಲ್ಲರಿಗೂ ನಾನು ಅವಕಾಶ ಕೊಡುತ್ತೇನೆ ದಯಮಾಡಿ ಸಹಕರಿಸಿ. ಇವರು ಶುರುಮಾಡಿಬಿಟ್ಟಿದ್ದಾರೆ. ಮಾನ್ಯ ರಾಯರೆಡ್ಡಿ ಆದಮೇಲೆ ಮಾನ್ಯ ವೈಜನಾಥ ಪಾಟೀಲರಿಗೆ ಕರೆಯುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಮಾನ್ಯ ರಾಷ್ಟ್ರಪತಿಗಳು 11 ಅಂಶಗಳನ್ನು ಏನು ಹೇಳಿದ್ದಾರೆ ಅದರ ಬಗ್ಗೆ ಬಹುತೇಕ ಮಾನ್ಯ ಸದಸ್ಯರು ಕೆಲವು ಗಂಭೀರ ವಿಚಾರಗಳನ್ನು ಹೇಳಿದ್ದಾರೆ. ಅದನ್ನು ನಾನು ಪುನರುಚ್ಚರಿಸುವುದಿಲ್ಲ, ಅದಕ್ಕೆ ಕಾರಣ ಕಾಲದ ಮಿತಿ, ತಮ್ಮ ಕಷ್ಟ ಮತ್ತು ಈ ಸದನದ ವಿಚಾರ ನನಗೆ ಗೊತ್ತಿದೆ. ಜವಳಿ ಕ್ಷೇತ್ರದ ಬಗ್ಗೆ ನಾನು ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಡಲು ಇಚ್ಛೆಪಡುತ್ತೇನೆ ರಾಷ್ಟ್ರಪತಿಗಳೇನು ವಿಚಾರ ಹೇಳಿದ್ದಾರೆ ಅದರ ಬಗ್ಗೆಯೇ ಹಿಂದಿನ ಸರ್ಕಾರದ ಕಾರ್ಯಕ್ರಮ ಪ್ರಾರಂಭವಾಗಿವೆ. ಮಾನ್ಯ ಸಿದ್ಧರಾಮಯ್ಯನವರೇ, ನೀವು ಉಪಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಕೆಲವು ಒಳ್ಳೆಯ ಕೆಲಸಗಳು ಪ್ರಾರಂಭವಾಗಿವೆ, ಅವನ್ನು ಮುಂದುವರೆಸಿಕೊಂಡು ಹೋಗಬೇಕಾದ ಜವಾಬ್ದಾರಿ ಇವತ್ತು ಈ ಸರ್ಕಾರಕ್ಕಿದೆ. ಜವಳಿ ಕ್ಷೇತ್ರದಲ್ಲಿ ಕರ್ನಾಟಕದ ರೇಷ್ಮೆ ಮತ್ತು ಹತ್ತಿ, ಬಗ್ಗೆ ಅಧ್ಯಕ್ಷರೇ, ನಿಮಗೆ ಗೊತ್ತಿದೆ, ನಮ್ಮ ದೇಶದಲ್ಲಿ ಕಳೆದ ವರ್ಷ 15 ಲಕ್ಷ ಟನ್ ಸಿಲ್ಕ್ ಉತ್ಪಾದನೆ ಆಗಿದ್ದರಲ್ಲಿ ಕರ್ನಾಟಕದಲ್ಲಿ 7 ಲಕ್ಷ ಟನ್ ಆಗಿದೆ, ಅಂದರೆ 51 ಪರ್ಸೆಂಟ್ ರೇಷ್ಮೆ ಉತ್ಪಾದನೆ ಕರ್ನಾಟಕದಲ್ಲಿ ಆಗುತ್ತದೆ. ಹಿಂದೆ ರೇಷ್ಮೆಗೆಂದು ಇಂಟೆನ್ಸಿವ್ ಸೆರಿಕಲ್ಚರ್ ಡೆವಲಪ್‌ಮೆಂಟ್ ಪ್ರೋಗ್ರಾಂ ಅಂತ ಒಂದು ಕಾರ್ಯಕ್ರಮ ಇತ್ತು. ಆ ಕಾರ್ಯಕ್ರಮ ಇವತ್ತು ನಿಂತುಹೋಗಿದೆ. ಇದರ ಫಲವಾಗಿ ಉತ್ತರಕರ್ನಾಟಕದ ಬಹುತೇಕ ತಾಲ್ಲೂಕುಗಳಲ್ಲೂ ಈ ಬೆಳೆ ಕಡಿಮೆಯಾಗಿ ಕೇವಲ ಹಳೇ ಮೈಸೂರಿನ ಐದಾರು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದೆ ಮತ್ತೆ ಮಾನ್ಯ ಮುಖ್ಯಮಂತ್ರಿಗಳೇ ಆ ಕಾರ್ಯಕ್ರಮವನ್ನು ಪುನ : ಪ್ರಾರಂಭ ಮಾಡಬೇಕು. ಯಾಕೆ ಈ ಮಾತನ್ನು ನಾನು ಹೇಳುತ್ತೇನೆ ಅಂದರೆ ಇವತ್ತು ನಮ್ಮಲ್ಲಿ 96 ಸಿಲ್ಕ್‌ಫಾರ್ಮ್ಸ್ ಇವೆ, ದೊಡ್ಡ ಮಾರುಕಟ್ಟೆಗಳಿವೆ, ಉದಾಹರಣೆಗೆ ಸನ್ಮಾನ್ಯ ಧರ್ಮಸಿಂಗ್‌ರವರ ಕ್ಷೇತ್ರವಾದ ಜೇವರ್ಗಿಯಲ್ಲಿ ಸುಮಾರು 4 ರಿಂದ 5 ಕೋಟಿ ರೂ ಖರ್ಚು ಮಾಡಿ ಒಂದು ರೇಷ್ಮೆಮಾರುಕಟ್ಟೆ ಕಟ್ಟಿದ್ದಾರೆ. ಇವತ್ತು ಅದು ಹಾಳು ಬಿದ್ದುಹೋಗಿದೆ, ನಮ್ಮ ಕೊಪ್ಪಳದಲ್ಲಿ ಹಾಳುಬಿದ್ದುಹೋಗಿದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಈ ಐಎಸ್‌ಡಿಪಿ ಕಾರ್ಯಕ್ರಮ ತರುವ ಮೂಲಕ ಅವುಗಳನ್ನು ಪುನಶ್ಚೇತನ ಮಾಡಬೇಕಾಗಿದೆ. ಮತ್ತು ಅಷ್ಟೇ ಅಲ್ಲ, ಕಳೆದ ವರ್ಷ ಕೇಂದ್ರ ಸರ್ಕಾರ ಇಂಟೆನ್ಸಿವ್ ಸೆರಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಎಸ್‌ಸಿ ಮತ್ತು ಐಸ್‌ಟಿ ಬೆಳೆಗಾರರಿಗೆ ಸುಮಾರು 21 ಲಕ್ಷ ರೂಪಾಯಿಗಳ ಸಬ್ಸಿಡಿಯನ್ನು ಕೊಟ್ಟರು. ಆ ಸಬ್ಸಿಡಿಯಲ್ಲಿ ಬಳಕೆಯಾದದ್ದು ಕೇವಲ ಮೂರು ಲಕ್ಷ ರೂಪಾಯಿಗಳು ಮಾತ್ರ ಕೇಂದ್ರ ಸರ್ಕಾರ ಕೊಟ್ಟ ಹಣವನ್ನು ಬಳಸಿಕೊಳ್ಳಲಿಲ್ಲ. ಅದನ್ನು ಬಳಸಿಕೊಂಡು ಎಸ್‌ಸಿ ಮತ್ತು ಎಸ್‌ಟಿ ಜನಾಂಗಕ್ಕೆ ಅನುಕೂಲ ಮಾಡುವುದಕ್ಕಾಗಿ ಅದನ್ನು ಮುಂದುವರೆಸಿಕೊಂಡು ಹೋಗಬೇಕು ಮತ್ತು ಅದರ ಜೊತೆಗೆ ಸೆರಿಕಲ್ಚರ್ ವ್ಯಾಪಾರ ಏನು ಇದೆ, ಕೇವಲ ರಾಮನಗರ ಮತ್ತು ಬೆಂಗಳೂರು ಸುತ್ತಮುತ್ತ ಇರುವ ಪ್ರದೇಶದಲ್ಲಿ ಮಾತ್ರ ಆಗಿದೆ. ಉದಾಹರಣೆಗೆ ಇವತ್ತು ನಮ್ಮ ಕೊಪ್ಪಳದಲ್ಲಿ, ಗುಲ್ಬರ್ಗದಲ್ಲಿ, ಬಿಜಾಪುರದಲ್ಲಿ ಬೆಳೆದಂಥ ರೇಷ್ಮೆ ರಾಮನಗರಕ್ಕೇ ಬರಬೇಕಾಗುತ್ತದೆ. ಸುಮಾರು 700 ರಿಂದ 800 ಕಿಲೋಮೀಟರ್ ಒಬ್ಬ ರೈತ ಬರಬೇಕೆಂದರೆ ಕಷ್ಟವಾಗುತ್ತದೆ. ಅದಕ್ಕೋಸ್ಕರ ಉತ್ತರ ಕರ್ನಾಟಕದಲ್ಲಿ ಒಂದು ಮಾರುಕಟ್ಟೆಯನ್ನು ಮತ್ತೆ ಪ್ರಾರಂಭ ಮಾಡಬೇಕು. ಅದಕ್ಕೇ ನಾನು ಹೇಳಿದ್ದು, ಜೇವರ್ಗಿಯಲ್ಲಿ ಹೋಗಿ ನೀವು ನೋಡಬೇಕು. ಸುಮಾರು 5 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಖರ್ಚು ಮಾಡಿ ಕಟ್ಟಿದ ದೊಡ್ಡ ಕಟ್ಟಡ ಇವತ್ತು ಅಲ್ಲಿ ಹಾಳು ಬಿದ್ದಿದೆ. ನಮ್ಮಲ್ಲೂ ಹಾಳು ಬಿದ್ದಿದೆ. ಅದಕ್ಕೆ ನಾನು ಐಡಿಎಸ್‌ಪಿ ಪ್ರೋಗ್ರಾಮನ್ನು

ತೆಗೆದುಕೊಂಡು ಬನ್ನಿ ಎಂದು ಹೇಳಿದ್ದು. ಮತ್ತೆ ಅದರ ಜೊತೆಗೆ ಇನ್ನು ಹತ್ತಿ ಬೆಳೆಗಾರರ ಬಗ್ಗೆ ಹೇಳುತ್ತೇನೆ. ಮಾನ್ಯ ಎಸ್‌ಎಸ್ ಪಾಟೀಲರಿಗೆ ಗೊತ್ತಿದೆ, ಮತ್ತು ಸ್ವಾಮೀಜಿಗಳು ನಾವೆಲ್ಲಾ ಆ ಪ್ರದೇಶದಿಂದ ಹತ್ತಿ ಬೆಳೆ ಬೆಳೆಯುವಂಥ ಪ್ರದೇಶದಿಂದ ಬಂದಂಥವರು ಕಳೆದ ದಶಕದಲ್ಲಿ ಕರ್ನಾಟಕದಲ್ಲಿ ಎಷ್ಟು ಹತ್ತಿಯನ್ನು ಬೆಳೆಯುತ್ತಿದ್ದರು ? ಕಳೆದ ದಶಕದಲ್ಲಿ ನಮ್ಮ ರಾಜ್ಯದಲ್ಲಿ ಸುಮಾರು 45 ಲಕ್ಷ ಎಕರೆ ಹತ್ತಿಯನ್ನು ಬೆಳೆಯುತ್ತಿದ್ದೆವು. ಈಗ ಅದರ ರೆಡ್ಯೂಸ್ ಎಷ್ಟಾಗಿದೆ ಎಂದರೆ 15 ಲಕ್ಷ ಎಕರೆಗೆ ಬಂದಿದೆ. ಇದಕ್ಕೆ ಉದಾಹರಣೆ ಎಂದರೆ ನಮ್ಮ ರಾಯಚೂರು ಜಿಲ್ಲೆಯ ಎಡದಂಡೆ ಕಾಲುವೆ ಬಗ್ಗೆ ನಮ್ಮ ಮಾನ್ಯ ಹಂಪನಗೌಡ ಮತ್ತು ಭೋಸರಾಜು ಅವರಿಗೂ ಗೊತ್ತಿದೆ. ಈಗ ಯಾರೂ ಕೂಡ ರೈಟ್ ಬ್ಯಾಂಕ್ ಕೆನಾಲ್ ಆಫ್ ದಿ ತುಂಗಭದ್ರಾದಲ್ಲಿ ಕೂಡ ಹತ್ತಿಯನ್ನು ಬೆಳೆಯುವುದಿಲ್ಲ. ಸುಮಾರು ಆರು ಲಕ್ಷ ಎಕರೆ ನೀರಾವರಿ ಪ್ರದೇಶದಲ್ಲಿ ನಾಲ್ಕು ಲಕ್ಷಕ್ಕಿಂತ ಹೆಚ್ಚು ಎಕರೆ ಹತ್ತಿ ಬೆಳೆಯುತ್ತಿದ್ದರು. ಈಗ ಎಲ್ಲಾ ಅಲ್ಲಿ ಭತ್ತವನ್ನು ಬೆಳೆಯುತ್ತಾರೆ. ಇದಕ್ಕೆ ಕಾರಣ ಸರಿಯಾದ, ಮಾರುಕಟ್ಟೆ ಇಲ್ಲ, ಬೆಂಬಲ ಬೆಲೆ ಕೂಡ ಇಲ್ಲ. ಮತ್ತು ಹತ್ತಿಯ ತಳಿಯ ಉತ್ಪಾದನೆ ಸಲುವಾಗಿ ಇತ್ತೀಚಿನ ದಿನಮಾನಗಳಲ್ಲಿ ನಾವು ಸರಿಯಾಗಿ ಸರ್ಕಾರಗಳು ಪ್ರೋತ್ಸಾಹ ಕೊಡದೇ ಇರುವುದರಿಂದ ಇವತ್ತು ಹತ್ತಿಯ ಉತ್ಪಾದನೆ ಕಡಿಮೆಯಾಗಿದೆ. ಇವತ್ತು ಸೆರಿಕಲ್ಚರ್‌ಗಾಗಿ ಸೆರಿಕಲ್ಚರ್ ಬೋರ್ಡ್ ಇದೆ. ಆದರೆ ಹತ್ತಿ ಬೆಳೆಗಾರರಿಗೆ ಒಂದು ಬೋರ್ಡ್ ಇಲ್ಲ. ಹತ್ತಿಯ ಸಂಶೋಧನೆ ಸಲುವಾಗಿ ನಮ್ಮಲ್ಲಿ ಯಾವುದೇ ಕೇಂದ್ರಗಳು ಸ್ಥಾಪನೆಯಾಗಿಲ್ಲ. ಅದಕ್ಕೆ ಅದನ್ನು ಮಾಡಿದರೆ ಮಾತ್ರ ಜವಳಿ ಕ್ಷೇತ್ರ ಉದ್ಧಾರವಾಗುವುದಕ್ಕೆ ಸಾಧ್ಯವಾಗುತ್ತದೆ. ಆ ದಿಸೆಯಲ್ಲಿ ಮಾನ್ಯ ಧರ್ಮಸಿಂಗ್ ಸರ್ಕಾರ ಏನು ಮಾಡಿತು, ಎಂದರೆ ಮಾನ್ಯ ಸಿದ್ಧರಾಮಯ್ಯನವರೇ, ಏನು ಮಾಡಿದಿರಿ ನಿಮ್ಮ ಸರ್ಕಾರದಲ್ಲಿ, ಅದನ್ನು ನೀವು ಮುಂದುವರೆಸಿಕೊಂಡು ಹೋಗಬೇಕಾಗುತ್ತದೆ. ಇವತ್ತು ಹಾಸನದಲ್ಲಿ 2004–05 ನೇ ಸಾಲಿನಲ್ಲಿ ಕೇಂದ್ರಸರ್ಕಾರದ ಒಪ್ಪಿಗೆಯೊಂದಿಗೆ ಟೆಕ್ಸ್‌ಟೈಲ್ ಸ್ಪೆಷಲ್ ಎಕನಾಮಿಕ್ ಜೋನ್‌ನ್ನು ಮಂಜೂರು ಮಾಡಿಸಿದ್ದಾರೆ. ತಮ್ಮ ಅವಧಿಯಲ್ಲಿ 500 ಎಕರೆ ಜಮೀನಿನ ವಶೀಕರಣ ಕೂಡ ಆಗಿದೆ. ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳಾದ ಮಾನ್ಯ ಕುಮಾರಸ್ವಾಮಿಯವರು ನೀವು ಆ ಜಿಲ್ಲೆಯವರು, ಯುವಕರು. ದಯಮಾಡಿ ತ್ವರಿತವಾಗಿ ಈ ಕೆಲಸ ಪ್ರಾರಂಭವಾಗಬೇಕು. 500 ಎಕರೆ ವಶೀಕರಣ ಮಾಡಿಕೊಂಡಿದ್ದಾರೆ, ಕೇಂದ್ರಸರ್ಕಾರ 33 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. Special Economic zone only for textile in Hassan. It is the achievement of Dharamsingh Government. ಅದಕ್ಕಾಗಿ ತ್ವರಿತವಾಗಿ ಸ್ಪೆಷಲ್ ಎಕಾನಾಮಿಕ್ ಜೋನ್ ಗೆ ಏನು ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರ ಗುರುತಿಸಿದೆ, ಆ ಕೆಲಸವನ್ನು ಮುಂದುವರೆಸಿಕೊಂಡು ಹೋಗಿ ಅಲ್ಲಿ ಟೆಕ್ಸ್‌ಟೈಲ್ ಉದ್ದಿಮೆಗಳನ್ನು ಪ್ರೋತ್ಸಾಹ ಮಾಡಿ ಈ ಕೆಲಸ ಮಾಡುವಂತೆ ಈ ಸರ್ಕಾರದಿಂದ ಅದು ಆಗಬೇಕು. ಏಕೆಂದರೆ ಅದಕ್ಕೆ ಈಗಾಗಲೇ ಬುನಾದಿಯನ್ನು ಈ ಸರ್ಕಾರದವರು ಹಾಕಿದ್ದಾರೆ. ಅದನ್ನು ನೀವು ಮುಂದುವರೆಸಿಕೊಂಡು ಹೋಗಿ ಎನ್ನುವ ಸಲಹೆಯನ್ನು ನಾನು ಈ ಸಂದರ್ಭದಲ್ಲಿ ಕೊಡುತ್ತಿದ್ದೇನೆ. ಮತ್ತೆ ಅದರ ಜೊತೆಗೆ ಈಗ ವೇಳೆಯ ಅಭಾವ ಬಹಳ ಇದೆ. ನನಗೆ ಗೊತ್ತಿದೆ, ನೀವು ನಿಲ್ಲಿಸಿಬಿಡಿ ಎಂದು ನನಗೆ ಹೇಳುತ್ತೀರಿ. ವ್ಯಾಲಿಡ್ ಸಜೆಷನ್‌ಗಳನ್ನು ಕೆಲವುಗಳನ್ನು ಕೊಡುವುದಿದ್ದರೂ ಕೂಡ ನಾನು ಹೆಚ್ಚು ಸಮಯ ತೆಗೆದುಕೊಳ್ಳದೆ ಈ ಎರಡು ವಿಚಾರಗಳನ್ನು ಹೇಳಿ ಮುಗಿಸುತ್ತೇನೆ. ನಾನು ಗಾರ್ಮೆಂಟ್ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ.

ಇವತ್ತು ಕರ್ನಾಟಕದಲ್ಲಿ ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಸುಮಾರು ವರ್ಷಕ್ಕೆ ಸುಮಾರು ಆರು ಸಾವಿರ ಕೋಟಿ ರೂಪಾಯಿಗಳ ಗಾರ್ಮೆಂಟ್ಸ್ ವಸ್ತ್ರವಿನ್ಯಾಸ ಮತ್ತು ರಫ್ತು ಆಗುತ್ತಿದೆ. ಇದನ್ನು ಬೇರೆ ಬೇರೆ ಪ್ರದೇಶದಲ್ಲಿ ಕೂಡ ಪ್ರಾರಂಭ ಮಾಡುವುದಕ್ಕೂ ಅವಕಾಶ ಇದೆ. ಹುಬ್ಬಳ್ಳಿ ಮತ್ತು ಬಳ್ಳಾರಿಯಲ್ಲೂ ಕೂಡ ಇದಕ್ಕೆ ಸಾಕಷ್ಟು ಅವಕಾಶ ಇದೆ. ಅದಕ್ಕೆ ತಾವು ಪ್ರೋತ್ಸಾಹವನ್ನು ಕೊಡಬೇಕು. ಪ್ರೋತ್ಸಾಹ ಕೊಟ್ಟರೆ ಮಾತ್ರ ಇವತ್ತು ಕರ್ನಾಟಕದಲ್ಲಿ ಗಾರ್ಮೆಂಟ್ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಬಹಳ ವಿಪುಲವಾದ ಅವಕಾಶಗಳು ಇವೆ. ಏನು ರಾಷ್ಟ್ರಪತಿಗಳು ತಿರುಪೂರು ಜಲಂಧರ್ ಬಗ್ಗೆ ಹೇಳಿದಾರೆ, ಇಲ್ಲೂ ಕೂಡ ಮಾಡುವುದಕ್ಕೆ ಅವಕಾಶ ಇದೆ. ಗಾರ್ಮೆಂಟ್ ಎಕ್ಸ್‌ಪೋರ್ಟ್ಸ್‌ಗೆ ಬೇಕಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಬೇರೆ ಭಾಗದಲ್ಲೂ ಕೊಟ್ಟರೆ ಇದನ್ನು ಮಾಡುವುದಕ್ಕೆ ಸಾಧ್ಯ ಇದೆ. ಅದರ ಬಗ್ಗೆ ತಾವು ವಿಚಾರವನ್ನು ಮಾಡುತ್ತೀರಿ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮತ್ತು ಅದರ ಜೊತೆಗೆ ಇವತ್ತು ಕೈಮಗ್ಗದ ಬಗ್ಗೆ ನಾವು ಮಾತನಾಡಬೇಕಾಗುತ್ತದೆ. ಬಹುತೇಕ ಮಾನ್ಯ ಡಿ.ಆರ್. ಪಾಟೀಲರು ಅದರ ಬಗ್ಗೆ ಹೆಚ್ಚು ಮಹತ್ವವನ್ನು ಕೊಡಬಹುದು. ಏನು ಇವತ್ತು ನಮ್ಮ ರಾಜ್ಯದಲ್ಲಿ ನೇಕಾರರು ಇದ್ದಾರೆ, ನೇಕಾರರ ಸಲುವಾಗಿ ಒಂದು ವಿಶೇಷ ಪ್ಯಾಕೇಜನ್ನು ಹಿಂದಿನ ಸರ್ಕಾರ ಕೊಟ್ಟಿತ್ತು. ಬಡ್ಡಿಯನ್ನು ಮನ್ನಾ ಮಾಡಿದರು. ಮತ್ತು ಕೆಲವು ಸೌಲಭ್ಯಗಳನ್ನು ಉದಾಹರಣೆಗೆ ಅವರ ಜೀವನಕ್ಕಾಗಿ ಈ ವಸ್ತ್ರವಿನ್ಯಾಸವನ್ನು ಮಾಡಲಿಕ್ಕಾಗಿ ಈ ಶಾಲಾ ಮಕ್ಕಳಿಗೆ ಏನು ಈಗ ಬಟ್ಟೆಗಳನ್ನು ಕೊಡುತ್ತಾರೆ ಅಂಥ ಒಂದು ಕೆಲಸಗಳನ್ನು, ಕಾಮಗಾರಿಗಳನ್ನು ಕೊಟ್ಟು ಇವತ್ತು ನೇಕಾರರ ಸಲುವಾಗಿ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಇನ್ನೂ ಇಂಥ ನೇಕಾರರ ಹಲವು ಪ್ಯಾಕೇಜುಗಳನ್ನು ಕೊಡುವುದರ ಮೂಲಕ ನೇಕಾರರ ಜೀವನವನ್ನು ಉತ್ತಮ ಮಾಡುವುದಕ್ಕೆ ಸಾಧ್ಯ ಇದೆ. ಅದಕ್ಕಾಗಿ ನೇಕಾರರ ವಿಚಾರದಲ್ಲಿ ಸರ್ಕಾರ ಬಹಳ ಗಂಭೀರವಾಗಿ ಚಿಂತನೆಯನ್ನು ಮಾಡುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಅದರ ಜೊತೆಗೆ ಇವತ್ತು ನೇಕಾರರ ಸಲುವಾಗಿ ರಾಜ್ಯ ಸರ್ಕಾರ ಕೆಲವು ತರಬೇತಿ ಕೇಂದ್ರಗಳನ್ನು ಸ್ಥಾಪನೆ ಮಾಡಿದೆ. ಕೇವಲ ರಬಕವಿ ಮತ್ತು ಬನಹಟ್ಟಿಯಲ್ಲಿ ಮಾತ್ರ ಒಂದೇ ಒಂದು ಇದೆ. ಅದನ್ನು ನೀವು ನಮ್ಮ ಕೊಪ್ಪಳ ಜಿಲ್ಲೆಗೆ ವಿಸ್ತರಣೆ ಮಾಡಬೇಕಾಗುತ್ತದೆ. ನಮ್ಮಲ್ಲೂ ಬಹಳಷ್ಟು ನೇಕಾರರಿದ್ದಾರೆ. ಗದಗ–ಬೆಟಗೇರಿಯಲ್ಲಿ ಬಹಳಷ್ಟು ನೇಕಾರರಿದ್ದಾರೆ. ಅಂಥ ತರಬೇತಿ ಕೇಂದ್ರಗಳನ್ನು ನೇಕಾರರ ಸಲುವಾಗಿ ಈ ಸರ್ಕಾರ ಮಾಡಬೇಕು. ಇನ್ನೊಂದು ಮಹತ್ವದ ಕೆಲಸ ಮಾನ್ಯ ಧರ್ಮಸಿಂಗ್‌ರವರ ನೇತೃತ್ವದ ಸರ್ಕಾರದಲ್ಲಿ ಆಯಿತು. First time the Textile Policy has been brought by the Dharamsingh Government. - - ಇಲ್ಲಿಯವರೆಗೂ ಕೂಡ ಕರ್ನಾಟಕದಲ್ಲಿ ಟೆಕ್ಸ್‌ಟೈಲ್ಸ್ ಪಾಲಿಸಿ ಇರಲಿಲ್ಲ. First time the Textile Policy has been brought by the Dharamsingh and Siddaramaiah Government. ಲಾಸ್ಟ್ ಇಯರ್ ತಾವು ತಂದಿದ್ದೀರಿ. ಕೇಂದ್ರ ಸರ್ಕಾರದ ಸುಮಾರು 330 ಕೋಟಿ ರೂಪಾಯಿಗಳ ಟೆಕ್ಸ್‌ಟೈಲ್ ಪಾಲಿಸಿಯನ್ನು ಏನು ಹಿಂದಿನ ಸರ್ಕಾರ ತಂದಿತ್ತು, ಆ ಟೆಕ್ಸ್‌ಟೈಲ್ಸ್ ಪಾಲಿಸಿಯಲ್ಲಿ ಸುಮಾರು 350 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಏನೇನು ಮಾಡಬೇಕೆನ್ನುವ ಯೋಜನೆಯನ್ನು ಮಾನ್ಯ ಧರ್ಮಸಿಂಗ್ ನೇತೃತ್ವದ ಸರ್ಕಾರ ತಯಾರು ಮಾಡಿದೆ. ಇದರಲ್ಲಿ ಭಾರತ ಸರ್ಕಾರ 220 ಕೋಟಿ ರೂಪಾಯಿಗಳನ್ನು ಕೊಡಲಿಕ್ಕೆ ಇವತ್ತು ತಯಾರಾಗಿದೆ. ಆದರೆ ಈ ಮುಂದುವರೆದಂಥ ಸರ್ಕಾರ ಅದನ್ನು ಬಳಸಿಕೊಂಡು ಆ ಕೆಲಸವನ್ನು ಮಾಡುತ್ತದೆ

ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆಂದರೆ, first time the Textile Policy has been brought by the previous Government. - - ಅದನ್ನು ತಾವು ಮುಂದುವರೆಸಿಕೊಂಡು ಈ ಒಂದು ಜವಳಿ ಕ್ಷೇತ್ರವನ್ನು ಹೆಚ್ಚು ಅಭಿವೃದ್ಧಿ ಮಾಡುತ್ತೀರಿ ಎಂದು ಹೇಳಿ ನಾನು ತಿಳಿದುಕೊಳ್ಳುತ್ತೇನೆ. ಇಲ್ಲದಿದ್ದರೆ ಇದು ಸುಮ್ಮನೆ ಚರ್ಚೆಯಾಗುತ್ತದೆ. ಆ ವಿಚಾರದಲ್ಲಿ ಸ್ಪಷ್ಟವಾಗಿ ಈ ಸರ್ಕಾರದ ನೀತಿ ಏನು ಎನ್ನುವುದನ್ನು ತಾವು ಹೇಳಬೇಕಾಗುತ್ತದೆ.

ಅಧ್ಯಕ್ಷರು :– ಮುಗಿಸಿ. ಟೈಮ್ ಆಯಿತು. ಇನ್ನೂ ಬಹಳ ಜನ ಇದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ :– ಮುಗಿಸುತ್ತೇನೆ. ಇನ್ನು ಆಹಾರ ಸಂರಕ್ಷಣೆ ಬಗ್ಗೆ ಬರುತ್ತೇನೆ.

ಅಧ್ಯಕ್ಷರು :– ಸಮ್ ಅಪ್ ಮಾಡಿ. ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ :– ನಾನು ಇಲ್ಲವೆಂದು ಹೇಳುವುದಿಲ್ಲ. ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ಎರಡು ವಿಚಾರಗಳನ್ನು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಾನು ಇನ್ನೂ ಐಟಿ ಬಿಟಿ ಬಗ್ಗೆ ಮಾತನಾಡುವುದಿತ್ತು. ಆದರೆ ಟೈಮ್ ಇಲ್ಲ. ಇನ್ನೂ ತೋಟಗಾರಿಕೆ ಮತ್ತು ಕೃಷಿ ಸಂಸ್ಕರಣೆ ಸಲುವಾಗಿ ಹಿಂದಿನ ಸರ್ಕಾರ ಮತ್ತೊಂದು ಒಳ್ಳೆಯ ಕೆಲಸವನ್ನು ಮಾಡಿತ್ತು. Isreel technology has been brought to our India. - ಅದಕ್ಕೆ ತಾವು ಬಹಳ ಪ್ರೋತ್ಸಾಹವನ್ನು ಕೊಟ್ಟಿದ್ದೀರಿ. ಸುಮಾರು ಹತ್ತು ತಾಲ್ಲೂಕುಗಳನ್ನು ಇಸ್ರೇಲ್ ಟೆಕ್ನಾಲಜಿ ಮುಖಾಂತರ ಅದನ್ನು ಅಭಿವೃದ್ಧಿಪಡಿಸುತ್ತೇವೆಂದು ಹೇಳಿ ಹಿಂದಿನ ಸರ್ಕಾರ ಮಾಡಿತು. ಅದನ್ನು ನೀವು ಮುಂದುವರೆಸಿಕೊಂಡು ಹೋಗಬೇಕು. ಇಲ್ಲಿಯವರೆಗೂ ಕಾರ್ಯಕ್ರಮ ಪ್ರಾರಂಭವಾಗಿಲ್ಲ. ಅದಕ್ಕೆ ಬಜೆಟ್‌ನಲ್ಲಿ ಹಣ ಇದೆ Money has not been spent one rupee has not been spent. ಅದನ್ನು ಮುಂದುವರೆಸಿಕೊಂಡು ಹೋಗಬೇಕು. ಇನ್ನೂ ಹೆಚ್ಚಿನ ತಾಲ್ಲೂಕುಗಳಿಗೆ ವಿಸ್ತರಣೆ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎಂದು ನಾನು ಬಯಸುತ್ತೇನೆ. ಮತ್ತು ಅದರ ಜೊತೆಗೆ ಆಹಾರದ ಸಂಸ್ಕರಣೆ ಸಲುವಾಗಿ ಹಿಂದಿನ ಸರ್ಕಾರ ಏನೇನು ಮಾಡಿದೆ ? ಸುಮಾರು ಆರು ಕಡೆ ಫುಡ್ ಪ್ರೋಸೆಸಿಂಗ ಪಾರ್ಕ್‌ಗಳನ್ನು ತೆಗೆಯಿತು. ಅದರಲ್ಲಿ ಮಾಲೂರಿನಲ್ಲಿ, ಯುನೋವಾ ಅಗ್ರಿ ಲಿಮಿಟೆಡ್, 172 ಕೋಟಿ ರೂ.ಗಳನ್ನು ಇನ್‌ವೆಸ್ಟ್ ಮಾಡಿದೆ. ಹಿರಿಯೂರಿನಲ್ಲಿ ಅಕ್ಷಯ ಫುಡ್ 163 ಕೋಟಿ. ರೂ. ಬಾಗಲ ಕೋಟೆಯಲ್ಲಿ ಗ್ರೀನ್ ಫುಡ್ 185 ಕೋಟಿ. ರೂ ಮದ್ದೂರಿನಲ್ಲಿ ಗೋಲ್ಡನ್ ಹಾವೆಸ್ಟ್ ಮತ್ತು ಜೇವರ್ಗಿಯಲ್ಲಿ ಬಹಳ ದೊಡ್ಡ ಫುಡ್ ಪಾರ್ಕ್‌ಗಳಾಗಿವೆ.

ಅಧ್ಯಕ್ಷರು :– ಮದ್ದೂರಿನಲ್ಲಿ ಆಗಿದೆ ಎಂದು ಹೇಳಿದಿರಿ. ಅದೆಷ್ಟು ? ಇನ್ನೂ ಆರಂಭವೇ ಆಗಿಲ್ಲ. ಹೇಗೆ ಕೆಲಸ ಮಾಡುತ್ತಾರೆ ಎನ್ನುವುದಕ್ಕೆ ಹೇಳುತ್ತೇನೆ. ಈಗ ಮದ್ದೂರಿನಲ್ಲಿ ಏನು ಮಾಡಿದ್ದಾರೆ. ಗದ್ದೆ ಇರುವುದಕ್ಕೆ ಜಾಸ್ತಿ ಕೊಟಿದ್ದಾರೆ. ಅಲ್ಲಿ ಆರಂಭವೇ ಆಗಿಲ್ಲ. ಈ ರೀತಿ ನಮ್ಮ ಅಧಿಕಾರಿಗಳು ಕೆಲಸವನ್ನು ಮಾಡುವುದು. ಎಲ್ಲಾ ಕಾಗದದಲ್ಲಿ ಮಾತ್ರ ದೊಡ್ಡ ಯೋಜನೆಗಳು.

ಶ್ರೀ ಬಸವರಾಜ ರಾಯರೆಡ್ಡಿ :– ಅದನ್ನು ನಾವು ಮಾಡಬೇಕು. ಜವಾಬ್ದಾರಿ ನಿಮ್ಮ ಮೇಲೆ ಇದೆ.

ಅಧ್ಯಕ್ಷರು :– ಎಷ್ಟು ದಿವಸ ಆಯಿತು, ಅದನ್ನು ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ :– ನಾನೇನು ಮಾನ್ಯ ಕುಮಾರ ಸ್ವಾಮಿಯವರ ಸರ್ಕಾರದ ಮೇಲೆ ನೀವು ಮಾಡಲಿಲ್ಲ ಎಂದು ಹೇಳಲಿಲ್ಲ. ಜವಾಬ್ದಾರಿ ನಿಮ್ಮ ಮೇಲೆ ಇದೆ.

ಅಧ್ಯಕ್ಷರು :– ಈಗ ಅದನ್ನು ಮಾಡುತ್ತಿಲ್ಲ ಎಂದು ಹೇಳುತ್ತಿಲ್ಲ ಮಾನ್ಯ ರಾಯರೆಡ್ಡಿಯವರೇ ಈಗ ನಮ್ಮಲ್ಲಿ ನಮ್ಮ ಅಧಿಕಾರಿಗಳು ಏನು ಮಾಡುತ್ತಾರೆ ಅನ್ನುವುದನ್ನು ಹೇಳುತ್ತಿದ್ದೇನೆ. ಒಂದು ಲಕ್ಷ ಬಾಳುವುದು ನಾಲ್ಕು ಲಕ್ಷ ರೂಪಾಯಿ ಅಂದರೆ ಅವನು ಆಕ್ಚ್ಯುಯಲ್ ಆಗಿ ಆ ಜಮೀನು ಬೇಡ ಎಂದು ಹೇಳುತ್ತಿದ್ದಾನೆ

ಶ್ರೀ ಬಸವರಾಜ ರಾಯರೆಡ್ಡಿ :– ಆಯಿತು ಅಧ್ಯಕ್ಷರೆ, ಈ ಆಹಾರ ಸಂಸ್ಕರಣೆ ಯೂನಿಟ್‌ಗಳನ್ನು ಪ್ರಾರಂಭ ಮಾಡಲಿಕ್ಕೆ ಅನುಮತಿ ಏನು ಕೊಟ್ಟಿದ್ದಾರೆ, ಇದಕ್ಕೆ ಪ್ರೋತ್ಸಾಹ ಕೊಟ್ಟು ದಯವಿಟ್ಟು ಇದನ್ನು ಪ್ರಾರಂಭ ಮಾಡಿಸಿ. ಇನ್ನೊಂದು ಮುಖ್ಯವಾದ ವಿಚಾರ ಇದೆ. ನಾನು ಇಲ್ಲಿಗೇ ಬಿಡುತ್ತೇನೆ. ಏಕೆಂದರೆ ನೀವು ಕಟ್ ಮಾಡೋಣ ಎಂದು ಹೇಳುತ್ತಿದ್ದೀರಿ. ಅದಕ್ಕೆ ಎಲ್ಲವನ್ನೂ ಬಿಡುತ್ತೇನೆ. ಇನ್ನು ವಿದ್ಯುತ್ ಮತ್ತು ಇಂಧನ ವಿಚಾರದಲ್ಲಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇವತ್ತು ಏನಾಗಿದೆ ಎಂದರೆ ನಮ್ಮ ಕರ್ನಾಟಕದಲ್ಲಿ ವಿದ್ಯುತ್ತಿನ ಉತ್ಪಾದನೆ ಆಗಬೇಕಾಗಿದೆ ವಿದ್ಯುತ್ತಿನ ಉತ್ಪಾದನೆ ಆಗದೇ ಇದ್ದರೆ ಬಹಳ ಕಷ್ಟ ಇದೆ. ನಮಗೆ ಕಳೆದ ವರ್ಷ ಉದ್ದಿಮೆ ಮತ್ತು ವಿದ್ಯುತ್ ಬಳಕೆದಾರರು ಮತ್ತು ಕೃಷಿಗೆ ಸೇರಿಸಿ ಸುಮಾರು 7800 ಮೆಗಾವ್ಯಾಟಿನ ವಿದ್ಯುತ್ ಉತ್ಪಾದನೆ ಆಗಬೇಕಾಗಿತ್ತು. ಆದರೆ ನಮಗೆ ಇವತ್ತು ಲಭ್ಯ ಇರುವಂತಹ ವಿದ್ಯುತ್ ಕೇವಲ 5600 ಮೆಗಾವ್ಯಾಟ್ ಮಾತ್ರ ಅದಕ್ಕೆ ಮುಂದಿನ ದಿನಗಳಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇನ್ನೂ 3000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆಂದು ಹೇಳಿದರು. ಇದು ಸ್ವಾಗತಾರ್ಹ. 3000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯನ್ನು ಮುಂದಿನ ದಿನಗಳಲ್ಲಿ ಮಾಡುತ್ತೇವೆಂದು ಏನು ಹೇಳಿದ್ದಾರೆ ಇದು ಬಹಳ ಒಳ್ಳೆಯ ವಿಚಾರ. ಆದರೆ ಹೇಗೆ ಮಾಡುತ್ತೀರಿ ? ಏನು ಮಾಡುತ್ತಿರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಏಕೆಂದರೆ ಈಗಾಗಲೇ ವಿದ್ಯುತ್ತಿನ ಉತ್ಪಾದನೆ ಸಲುವಾಗಿ ಸುಮಾರು 500 ಮೆಗಾವ್ಯಾಟ್‌ನ ಹಿಂದೆ ಮಾನ್ಯ ಧರ್ಮಸಿಂಗ್ ಅವರ ಸರ್ಕಾರ ಇದ್ದಾಗ, ಬಳ್ಳಾರಿಯಲ್ಲಿ ಥರ್ಮಲ್ ಪವರ್ ಪ್ರಾಜೆಕ್ಟನ್ನು ಈಗಾಗಲೇ ಪ್ರಾರಂಭ ಮಾಡಿದ್ದರು. ಇನ್ನೊಂದು ವರ್ಷದಲ್ಲಿ ಸುಮಾರು 500 ಮೆಗಾವ್ಯಾಟ್ ವಿದ್ಯುತ್ತಿನ ಉತ್ಪಾದನೆ ಬಳ್ಳಾರಿಯಲ್ಲಿ ಆಗುತ್ತದೆ. ಮತ್ತು ಕಳೆದ ವರ್ಷ ಮಾನ್ಯ ಧರ್ಮಸಿಂಗ್ ಅವರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಮಾನ್ಯ ರೇವಣ್ಣನವರು ಇಂಧನ ಮಂತ್ರಿಗಳಾಗಿ ಇದ್ದರು. ಆಲಮಟ್ಟಿಯಲ್ಲಿ ಇವತ್ತು 300 ಮೆಗಾವ್ಯಾಟಿನ ಉತ್ಪಾದನೆ ಆಗಬೇಕಾಗಿತ್ತು. ಆದರೆ ಆಂಧ್ರ ಪ್ರದೇಶದ ವಿವಾದ ಇದ್ದುದರಿಂದ ಇನ್ನೂ ಕೂಡ ವಿದ್ಯುತ್ತಿನ ಉತ್ಪಾದನೆಗೆ ಬಹಳ ತೊಂದರೆ ಆಗಿದೆ. ಮತ್ತು ನಾರಾಯಣಪುರ ಕಾಸ್ಕೇಡ್‌ನಿಂದ ಒಂದು ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಸಲುವಾಗಿ ಹಿಂದಿನ ಸರ್ಕಾರಗಳು, ಮಾನ್ಯ ಜೆ.ಹೆಚ್. ಪಟೇಲ್ ಅವರ ಸರ್ಕಾರದಿಂದ ಹಿಡಿದು ಮಾನ್ಯ ಧರ್ಮಸಿಂಗ್ ಸರ್ಕಾರದವರೆಗೆ ಬಹಳಷ್ಟು ಶ್ರಮವನ್ನು ತೆಗೆದುಕೊಂಡಿದ್ದಾರೆ. ಆದರೆ ವಿದ್ಯುತ್ ಉತ್ಪಾದನೆ ಸಲುವಾಗಿ ಈಗಿನ ಮಾನ್ಯ ಮುಖ್ಯಮಂತ್ರಿಗಳು ಮಾತುಕತೆ ಮುಖಾಂತರ ಹೆಚ್ಚಿನ ಗಮನವನ್ನು ಕೊಡಬೇಕಾಗುತ್ತದೆ. ಇದರಿಂದ ಒಂದು ಸಾವಿರ ಮೆಗಾವ್ಯಾಟ್ ವಿದ್ಯುತ್ ಬರುತ್ತದೆ. ಮತ್ತು ಇನ್ನೂ ಒಂದು ವಿಚಾರವನ್ನು ಕೃಷ್ಣಾ ನದಿ ವಿಚಾರದಲ್ಲಿ

ಹೇಳುವುದಾದರೆ ಮಾನ್ಯ ಮುಖ್ಯಮಂತ್ರಿಗಳೇ, ಜುರಾಲಾ ಪ್ರಾಜೆಕ್ಟ್ ಇದೆ, ಅಂತ ಕೇಳಿದೆ ಅದು ಬಹಳ ಮಹತ್ವದ ವಿಚಾರ. ಜುರಾಲಾ ಪ್ರಾಜೆಕ್ಟ್ ಆಂಧ್ರ ಪ್ರದೇಶದ ಗಡಿ ಭಾಗದಲ್ಲಿದೆ. ದೇವರಾಜ ಅರಸು ಅವರು ಮುಖ್ಯಮಂತ್ರಿಗಳು ಆಗಿದ್ದಂತಹ ಸಂದರ್ಭದಲ್ಲಿ ಮಾಡಿಕೊಂಡಂತಹ ಒಪ್ಪಂದ ಇವತ್ತಿನವರೆಗೆ ಕೂಡ ಅನುಷ್ಠಾನ ಮಾಡಲಿಕ್ಕೆ ಆಗಲಿಲ್ಲ. 110 ಮೆಗಾವ್ಯಾಟ್ ವಿದ್ಯುತ್ ನಮಗೆ ಜುರಾಲಾ ಪ್ರಾಜೆಕ್ಟ್‌ನಿಂದ ಬರಬೇಕು. ಆಂಧ್ರ ಪ್ರದೇಶದ ಜೊತೆಗೆ ಬಹಳ ಸಿರಿಯಸ್ ಆಗಿ ತಾವು ಮಾತನಾಡಬೇಕಾಗುತ್ತದೆ. 110 ಮೆಗಾವ್ಯಾಟ್ ವಿದ್ಯುತ್ ಜುರಾಲಾ ಪ್ರಾಜೆಕ್ಟ್‌ನಿಂದ ಬರಬೇಕು. ದಯಮಾಡಿ ಅದರ ಬಗ್ಗೆ ಮಾತುಕತೆಯನ್ನು ಮಾಡಿ. 110 ಮೆಗಾವ್ಯಾಟ್ ವಿದ್ಯುತ್ತನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಈ ಜಲ ವಿದ್ಯುತ್ ವಿಚಾರದಲ್ಲಿ ಕೃಷ್ಣಾ ನದಿಯನ್ನು ಬಿಟ್ಟ ಮೇಲೆ ಕಾವೇರಿ ನದಿಯಲ್ಲಿ ಸಾಧ್ಯತೆ ಇದೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ವಿಚಾರ ಮಾಡಿರಿ. ಕಾವೇರಿ ನದಿಯಲ್ಲಿ ಹಲವಾರು ವರ್ಷಗಳಿಂದ ಶಿವನಸಮುದ್ರದಲ್ಲಿ 210 ಮೆಗಾವ್ಯಾಟ್ ವಿದ್ಯುತ್ತಿನ ಉತ್ಪಾದನೆ ಸಲುವಾಗಿ ಕೇಂದ್ರ ಸರ್ಕಾರದ ಮುಂದೆ ನಮ್ಮ ಸರ್ಕಾರಗಳು ಅನುಮತಿಯನ್ನು ಕೊಡಿ ಎಂದು ಮನವಿಯನ್ನು ಕೊಟ್ಟಿದೆ. ಆದರೆ ಇವತ್ತಿನವರೆಗೂ ಹಲವಾರು ಸರ್ಕಾರಗಳು ಬಂದು ಹೋಗಿದ್ದರೂ ಕೂಡ 210 ಮೆಗಾವ್ಯಾಟ್ ವಿದ್ಯುತ್ತನ್ನು ಶಿವನಸಮುದ್ರದಲ್ಲಿ ಉತ್ಪಾದನೆ ಮಾಡುವುದಕ್ಕೆ ನಮಗೆ ಪರವಾನಗಿ ಸಿಕ್ಕಿಲ್ಲ. ಅದಕ್ಕೆ ಕಾರಣ ನಮ್ಮ ಡಿ.ಪಿ. ಆರ್‌ನಲ್ಲಿ ಡೀಟೇಲ್ಡ್ ಪ್ರಾಜೆಕ್ಟ್ ರಿಪೋರ್ಟ್‌ನಲ್ಲಿ ರಿವರ್ಸಿಬಲ್ ಟರ್ಬೈನ್‌ನ್ನು ಹಾಕುತ್ತೇವೆ ಎನ್ನುವ ವಿಚಾರದಲ್ಲಿ ತಮಿಳುನಾಡು ನಮಗೆ ವಿರೋಧ ಮಾಡಿದೆ. ಅದರ ಬಗ್ಗೆ ಸ್ವಲ್ಪ ಗಮನವನ್ನು ಕೊಟ್ಟರೆ ನಿಮಗೆ 210 ಮೆಗಾವ್ಯಾಟ್ ವಿದ್ಯುತ್ ಬರುತ್ತದೆ. ಅದರ ಜೊತೆಗೆ ಇನ್ನೊಂದು ಬಹಳ ಮಹತ್ವಾದ ವಿಚಾರ ಇದೆ.

ಶ್ರೀ ಟಿ. ಗುರುಸಿದ್ಧನಗೌಡ :– ಮಾನ್ಯ ಅಧ್ಯಕ್ಷರೇ, ಸುಮಾರು ಸಮಯ ಆಯಿತು. ಮಾನ್ಯ ಸದಸ್ಯರಿಗೆ 10 ನಿಮಿಷ ಎಂದು ಹೇಳಿ 20 ನಿಮಿಷ ಕೊಟ್ಟಿದ್ದೀರಿ. ಮಾನ್ಯ ರಾಯರೆಡ್ಡಿಯವರು ಜಾಸ್ತಿ ಮಾತನಾಡುತ್ತಿದ್ದಾರೆ. ದಯವಿಟ್ಟು ಅವರ ಭಾಷಣವನ್ನು ಮೊಟಕು ಮಾಡಲು ಹೇಳಿ.

ಅಧ್ಯಕ್ಷರು :– ಮುಗಿಸುತ್ತಾರೆ, ಕುಳಿತುಕೊಳ್ಳಿ,

ಶ್ರೀ ಬಸವರಾಜ ರಾಯರೆಡ್ಡಿ :– ಅಧ್ಯಕ್ಷರೆ, ತಾವು ಮುಗಿಸಿ ಅಂದರೆ ನಾನು ಮುಗಿಸುತ್ತೇನೆ. ನಾನು ಕೆಲವೊಂದು ವಿಚಾರಗಳನ್ನು ಹೇಳುತ್ತಿದ್ದೇನೆ. ಬೇಡ ಎಂದರೆ ಕುಳಿತುಕೊಳ್ಳುತ್ತೇನೆ. ಬೇಡ ಎಂದರೆ ನನಗೇನೂ ಇಲ್ಲ.

ಅಧ್ಯಕ್ಷರು :– ಹಾಗೇನೂ ಇಲ್ಲ, ಎಲ್ಲರೂ ಮಾತನಾಡಬೇಕಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ :– ನಾನು ಜಲ ವಿದ್ಯುತ್ ವಿಚಾರ ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

ಅಧ್ಯಕ್ಷರು :– ಮಾನ್ಯ ರಾಯರೆಡ್ಡಿಯವರೇ, ಎಲ್ಲರೂ ಕೂಡ ಮಾತನಾಡಬೇಕೆಂದು ಅಪೇಕ್ಷೆ ಪಡುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ :– ನಾನು ಮುಗಿಸಿ ಬಿಡುತ್ತೇನೆ. ಏಕೆಂದರೆ ಡಿಸ್ಟರ್ಬ್ ಆಯಿತು.

ಅಧ್ಯಕ್ಷರು :– ಆಯಿತು, ಕುಳಿತುಕೊಂಡು ಬಿಡಿ. 'ಮುಗಿಸಿದ್ದೇನೆ' ಎಂದು ಹೇಳಿ ಕುಳಿತುಕೊಂಡರೆ ಆಯಿತು.

ಶ್ರೀ ಬಸವರಾಜ ರಾಯರೆಡ್ಡಿ :– ಅಧ್ಯಕ್ಷರೆ, ನನಗೆ ಈ ಡಿಸ್ಟರ್ಬ್‌ನಲ್ಲಿ ಏನು ಮಾತನಾಡಬೇಕು ಎಂದು ಗೊತ್ತಾಗಲಿಲ್ಲ. ನಾನು ಕೆಲವು ಸಲಹೆಗಳನ್ನು ಕೊಡುತ್ತಿದ್ದೇನೆ. ಬೇಡ ಎಂದರೆ ಬಿಡುತ್ತೇನೆ. ನನಗೇನೂ ಆಸರೆ, ಇಲ್ಲ, ನನಗೇನಾಗಬೇಕಾಗಿದೆ ?

ಅಧ್ಯಕ್ಷರು :– ಆಯಿತು ತಮ್ಮ ಸಲಹೆಗಳನ್ನು ಬರೆದು ಕೊಡಿ. ಕುಳಿತುಕೊಳ್ಳಿ

ಶ್ರೀ ಬಸವರಾಜ ರಾಯರೆಡ್ಡಿ :– ನಾನು ಇನ್ನೊಂದು ಮಾತನ್ನು ಹೇಳುತ್ತಿದ್ದೆ. ಕಾವೇರಿ ನದಿಯಲ್ಲಿ.......

ಶ್ರೀ ಸಿ.ಟಿ. ರವಿ :– ಇನ್ನೂ ಲೇಟಾಗುತ್ತದೆ.

ಅಧ್ಯಕ್ಷರು :– ಇರಲಿ. ಹಿರಿಯ ಸದಸ್ಯರು ಇನ್ನು ಎರಡು ನಿಮಿಷದಲ್ಲಿ ಮುಗಿಸಿ ಬಿಡುತ್ತಾರೆ. ಕುಳಿತುಕೊಳ್ಳಿ

ಶ್ರೀ ಬಸವರಾಜ ರಾಯರೆಡ್ಡಿ :– ಹಿಂದಿನ ಸರ್ಕಾರಗಳು 800 ಮೆಗಾವ್ಯಾಟ್ ವಿದ್ಯುತ್ತಿನ ಸಲುವಾಗಿ ಕೇಂದ್ರ ಸರ್ಕಾರಕ್ಕೆ ಪರ್ಮಿಷನ್‌ಗಾಗಿ ಅರ್ಜಿ ಹಾಕಿದ್ದಾರೆ, ಹೊಗೇನ್‌ಕಲ್ ಮತ್ತು ಮೇಕೆದಾಟಿನಲ್ಲಿ ವಿದ್ಯುತ್ತಿನ ಉತ್ಪಾದನೆ ಸಲುವಾಗಿ, ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ ತಮಿಳುನಾಡು ಇದಕ್ಕೆ ಅಬ್ಜೆಕ್ಷನ್ ಮಾಡಿದೆ. ಏಕೆಂದರೆ ರಸೀಮನಾಲ್ ಮತ್ತು ಹೊಗೇನ್‌ಕಲ್‌ನಲ್ಲಿ ಅವರೂ ಕೂಡ 800 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ಪ್ರಯತ್ನ ಮಾಡಿದ್ದಾರೆ. ಏಕೆಂದರೆ ಮೇಕೆದಾಟು ದಾಟಿದ ತಕ್ಷಣ ಎರಡೂ ರಾಜ್ಯಗಳ ಗಡಿ ಪ್ರಾರಂಭ ಆಗುತ್ತದೆ. ಒಂದು ದಡ ಕರ್ನಾಟಕ, ಇನ್ನೊಂದು ದಡ ತಮಿಳುನಾಡು. ಹೀಗಾಗಿ ಹಿಂದಿನ ಸರ್ಕಾರ ಮತ್ತು ಜೆ.ಹೆಚ್. ಪಟೇಲರು ಮತ್ತು ಎಸ್ ಎಂ ಕೃಷ್ಣ ಅವರು ಇದ್ದಂತಹ ಸಂದರ್ಭದಲ್ಲಿ ಸಹ ಇದರ ಮಾತುಕತೆಯನ್ನು ಮಾಡಿ ಎನ್‌ಹೆಚ್‌ಪಿಸಿ ಮುಖಾಂತರ ಅಂದರೆ, ನ್ಯಾಷನಲ್ ಹೈಡ್ರೋ ಪವರ್ ಕಾರ್ಪೋರೇಷನ್ ಮುಖಾಂತರ ವಿದ್ಯುತ್ ಉತ್ಪಾದನೆ ಮಾಡಿಕೊಳ್ಳಲಿಕ್ಕೆ ಒಪ್ಪಂದ ಆಗಿತ್ತು. ಆದರೆ ಅದರ ಬಗ್ಗೆ ಕೆಲಸ ಏನಾಯಿತು ಎಂಬುದನ್ನು ಈ ಸರ್ಕಾರ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ದಯವಿಟ್ಟು ಮಾನ್ಯ ನೂತನ ಮುಖ್ಯಮಂತ್ರಿಗಳು ಇದರ ಬಗ್ಗೆ ಕ್ರಮ ಕೈಗೊಳ್ಳುತ್ತಾರೆಂದು ತಿಳಿದುಕೊಂಡಿದ್ದೇನೆ. ಇನ್ನೂ ಕೆಲವು ವಿಚಾರಗಳು ಇವೆ. ಹೇಳಿ ಪ್ರಯೋಜನ ಇಲ್ಲ, ನನಗೆ ಗೊತ್ತಿದೆ. ನಾನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು :– ಮುಗಿಸಿ ಬಿಡಿ.

ಶ್ರೀ ಬಸವರಾಜ ರಾಯರೆಡ್ಡಿ :– ಇದರಲ್ಲಿ ಏನು ಇದೆ ? ಇದು ಸಂತೆಯಲ್ಲಿ ಪುರಾಣ ತರಹ ಇದೆ. ಅದಕ್ಕೆ ನಿಮಗೆ ನಮಸ್ಕಾರ, ವಂದನೆಗಳು.

ಅಧ್ಯಕ್ಷರು :– ಮಾನ್ಯ ರಾಜೇಂದ್ರನ್ ಅವರೇ, ಮಾನ್ಯ ವೈಜನಾಥ ಪಾಟೀಲ್ ಅವರು ಹಿಡಿಯ ಸದಸ್ಯರು ಇದ್ದಾರೆ. ಅವರು ಮಾತನಾಡಿದ ನಂತರ ತಾವು ಮಾತನಾಡಿ.

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) :– ಮಾನ್ಯ ಅಧ್ಯಕ್ಷರೆ, ಈ ಮಿಷನ್ ಫಾರ್ ಕರ್ನಾಟಕ ಪ್ರಾಸ್ಪರಿಟಿ ಭಾಷಣ 20 ನೇ ನವೆಂಬರ್ 2005 ಕ್ಕೆ ಮಾನ್ಯ ರಾಷ್ಟ್ರಪತಿಯವರಿಂದ ಆಯಿತು. ಅವತ್ತೂ ಕೂಡ ನಾನು ಇಲ್ಲಿ ಪ್ರತಿಭಟಿಸಿ ಹೊರಗಡೆ ಹೋಗಿದ್ದೆ ಏಕೆಂದರೆ ಐವತ್ತು ವರ್ಷ ಆಯಿತು. ಅದರ ಸಲುವಾಗಿ ಒಂದು ವರ್ಷದ ತನಕ ಸುವರ್ಣ ಕರ್ನಾಟಕ ಎಂದು ಆಚರಿಸುವ ಒಂದು

ನಿರ್ಣಯ ಮೊದಲಿನ ಸರ್ಕಾರದಲ್ಲಿ ಇತ್ತು. ಏತಕ್ಕಾಗಿ 'ಸುವರ್ಣ ಕರ್ನಾಟಕ' ಎಂದು ಇದೆಯೆಂದು ನನಗಂತೂ ಗೊತ್ತಿಲ್ಲ. ಫಸ್ಟ್ ನವೆಂಬರ್ 1956 ಕ್ಕೆ ಬಹಳಷ್ಟು ರಾಜ್ಯಗಳು ಉದಯ ಆಗಿವೆ. ಕೇರಳ ಆಗಿದೆ, ತಮಿಳುನಾಡು ಆಗಿದೆ, ಆಂಧ್ರ ಪ್ರದೇಶ ಆಗಿದೆ. ಎಲ್ಲೂ ಕೂಡ ಸುವರ್ಣ ಮಹೋತ್ಸವ ಇಲ್ಲಿ ತರಹ ಮಾಡುತ್ತಿಲ್ಲ. ಇದಕ್ಕಿಂತ ಒಳ್ಳೆಯ ಅಡ್ಮಿನಿಸ್ಟ್ರೇಷನ್ ಎಲ್ಲಿ ಕೊಟ್ಟಿದ್ದಾರೆ ಅಲ್ಲಿ ಯಾರೂ ಮಾಡುತ್ತಿಲ್ಲ. ಇವರದ್ದು ನಮ್ಮ ಸರ್ಕಾರದವರಿಗೆ ಏಕೆ ಆಯಿತೋ ಗೊತ್ತಿಲ್ಲ. ಸುವರ್ಣ ಕರ್ನಾಟಕ ಎಂದು ಹೊಸ ಕಾರ್ಯಕ್ರಮವನ್ನು ತಂದರು. ಅದರಲ್ಲಿ ಮಾನ್ಯ ರಾಷ್ಟ್ರಪತಿಯವರ ಭಾಷಣ. ಈ ಭಾಷಣದಲ್ಲಿ ಎಲ್ಲಿ ನೋಡಿದರೂ ಕರ್ನಾಟಕ ಅಂದರೆ ಮೈಸೂರು ಮಾತ್ರನೇ, ಅಷ್ಟೇ ಇದೆ. ಕರ್ನಾಟಕದಲ್ಲಿ 100 ವರ್ಷಗಳಿಂದ ಅಸೆಂಬ್ಲಿ ಇತ್ತು, ಕೌನ್ಸಿಲ್ ಇತ್ತು ಎಂದರೆ ಎಲ್ಲಿ ಇತ್ತು ? ನಮ್ಮಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ಇದ್ದಿಲ್ಲ. ಅದು ಇಲ್ಲಿ ಹಳೆಯ ಮೈಸೂರಿನಲ್ಲಿ ಇತ್ತು. 100 ವರ್ಷದ ಮೊದಲು ಯೂನಿವರ್ಸಿಟಿ ಇತ್ತು ಎಂದೆಲ್ಲಾ ಹೇಳಿದ್ದಾರೆ. ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಒಂದು ಕಾಲೇಜು ಸಹಿತ ಇದ್ದಿಲ್ಲ. ಯಾವುದೇ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್‌ನಲ್ಲಿ, ಡಿಗ್ರೀ ಕಾಲೇಜು ಗುಲ್ಬರ್ಗಾದಲ್ಲಿ ಇರಲಿಲ್ಲ. ಆದರೂ ಸಹ ಇವತ್ತು ಸಹ ಪರಿಸ್ಥಿತಿ ಅದೇ ಇದೆ. ಪ್ರೋಗ್ರೆಸ್ ಆಗಿರಬಹುದು, ಆದರೆ ಡಿಸ್ಪಾರಿಟೀಸ್ ಲೆವೆಲ್ ಹಾಗೆಯೇ ಇದೆ. ಆದರೂ ಕೂಡ ಟುರಿಸಂ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಕೂಡ ಹೈದರಾಬಾದ್ ಕರ್ನಾಟಕದ ಬಗ್ಗೆ ಎಲ್ಲೂ ಮೆನ್ಷನ್ ಇಲ್ಲ. ಏಕೆಂದರೆ ಟೂರಿಸಂ ಡೆವಲಪ್‌ಮೆಂಟಿನಲ್ಲಿ ಖರ್ಚೇ ಮಾಡುವುದಿಲ್ಲ. ಅಲ್ಲಿ ಟೂರಿಸ್ಟೇ ಬರುವ ಹಾಗಿಲ್ಲ. ಅಲ್ಲಿ ಟೂರಿಸ್ಟ್ ಬರಲಾರದ ಹಾಗೆ ವ್ಯವಸ್ಥೆ ಮಾಡುತ್ತಾರೆ. ಜಹಾಜ್‌ಗೆ ಯಾವುದೇ ರೈಲ್ವೆ ಲೈನೂ ಇಲ್ಲ. ಸರಿಯಾಗಿ ಇವತ್ತು ಬೀದರ್‌ಗೆ ಹೋಗಬೇಕಾದರೆ ಬರಾಬರ್ ರೈಲು ಇಲ್ಲ. ಉತ್ತರ ಕರ್ನಾಟಕದಿಂದ ಬೇರೆ ಕಡೆಗೆ ಹೈದರಾಬಾದ್–ಕರ್ನಾಟಕದಿಂದ, ಬಾಂಬೆ ಕರ್ನಾಟಕಕ್ಕೆ ಹೋಗಬೇಕಾದರೆ ರೈಲು ಇಲ್ಲ. ಗುಂತಕಲ್‌ಗೆ ಬಂದು ಹೋಗಬೇಕು ಅಥವಾ ಬೇರೆ ಎಲ್ಲಿಗಾದರೂ ಬಂದು ಹೋಗಬೇಕು, ಅಥವಾ ಬಸ್ಸಿನಲ್ಲಿ ಕುಳಿತು ಹೋಗಬೇಕು. ಆದ್ದರಿಂದ ಜನ ಹೋಗುವುದೇ ಇಲ್ಲ. ಆದ್ದರಿಂದ ಹೈಕೋರ್ಟ್ ಪೀಠವನ್ನು ಕೇಳಿದ್ದೇವೆ, ಅದು ಹುಬ್ಬಳ್ಳಿಯಲ್ಲಿ ಇರಲಿ ಎಂದರೆ ಬೇಡಪ್ಪ ಅದು ಬೆಂಗಳೂರು ಇರಲಿ ಎನ್ನುತ್ತಾರೆ. ಗುಲ್ಬರ್ಗಾಕ್ಕೆ ಆಗಲಿ, ಇಲ್ಲದಿದ್ದರೆ ಬೆಂಗಳೂರಿನಲ್ಲಿಯೇ ಇರಲಿ ಎನ್ನುತ್ತಾರೆ. ಅಂದರೆ ಹೀಗೆ ವ್ಯವಸ್ಥಿತವಾಗಿ ಇದನ್ನು ಇಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಅದಕ್ಕೆ ರಾಷ್ಟ್ರಪತಿಯವರ ಬಾಯಿನಲ್ಲಿ ಸುವರ್ಣ ಕರ್ನಾಟಕ, ಆ ಕರ್ನಾಟಕ, 'ಅಂದದ ನಾಡು, ಚೆಂದದ ನಾಡು' ಎಂದು ಕವಿತೆಗಳು ಹೇಳುವ ವಿಚಾರ ಬಂದಿದೆ ಅದು ಯಾವುದು ಅಂದದ ನಾಡೋ, ಚೆಂದದ ನಾಡೋ ಗೊತ್ತಿಲ್ಲ. ಹಿಂದೆ ಯಾವುದೋ ಕವಿಗಳು ಕವಿತೆ ಹೇಳಿದ್ದರು. ಆ ದೃಷ್ಟಿಯಿಂದ ಇವತ್ತು ಎಜುಕೇಷನ್ ದೃಷ್ಟಿಯಿಂದ ನೋಡಿ. ಸರ್ಕಾರದವರೇ ಒಂದು ಬುಕ್ ಪಬ್ಲಿಷ್ ಮಾಡಿದ್ದಾರೆ. ' ಹ್ಯೂಮನ್ ಡೆವಲಪ್‌ಮೆಂಟ್ ಇನ್ ಕರ್ನಾಟಕ 1999 ' ಎಂಬ ಪುಸ್ತಕವನ್ನು ಪಬ್ಲಿಷ್ ಮಾಡಿದ್ದಾರೆ. ಅದರ ಪ್ರಕಾರ ಆಫ್ರಿಕಾದ ಸಹಾರಾ ಪ್ರದೇಶಕ್ಕಿಂತ ಕಡಿಮೆ ಎಜ್ಯುಕೇಶನ್ ಪರ್ಸೆಂಟೇಜ್ ರಾಯಚೂರು ಜಿಲ್ಲೆಯಲ್ಲಿ ಇದೆ. ಇದು ಸರ್ಕಾರದ ರಿಪೋರ್ಟ್ ಇದೆ. ರಾಯಚೂರು ಜಿಲ್ಲೆಯಲ್ಲಿ ಹೆಣ್ಣುಮಕ್ಕಳ literate ಪರ್ಸೆಂಟೇಜ್ ಎಷ್ಟಿದೆಯೆಂದರೆ, ಆಫ್ರಿಕಾ ರಾಜ್ಯದ ಉಪ ಸಹರಾ ಪ್ರದೇಶಕ್ಕಿಂತಲೂ ಹಿಂದಿದೆ. ಇದರ ಬಗ್ಗೆ ರಿಪೋರ್ಟ್‌ನಲ್ಲಿ ತೋರಿಸಲಾಗಿದೆ ಇದೆಲ್ಲಾ ಇದ್ದರೂ ಇದು ಸುವರ್ಣ ಕರ್ನಾಟಕ। ಇದನ್ನು ಸುವರ್ಣ ಕರ್ನಾಟಕವೆಂದು ನಾವು ಹೇಗೆ ಒಪ್ಪಿಕೊಳ್ಳಬೇಕು ? ಇವೊತ್ತು education, employment, ಈ ರೀತಿ ಪ್ರತಿಯೊಂದೂ

ವಿಷಯದಲ್ಲೂ ಹಿಂದುಳಿದಿದೆ. ಅಲ್ಲದೆ, ಸರ್ಕಾರದ ವತಿಯಿಂದ ಸಿದ್ಧಪಡಿಸಲಾದ ಮತ್ತೊಂದು ರಿಪೋರ್ಟ್ ಇದೆ. ಅದನ್ನೂ ನೀವು ಒಪ್ಪಿಕೊಂಡಾಗಿದೆ. ಹೈದರಾಬಾದ್-ಕರ್ನಾಟಕ ಪ್ರದೇಶವು ಹಿಂದುಳಿದ ಪ್ರದೇಶವೆಂದು ಒಪ್ಪಿಕೊಂಡಿದ್ದಾರೆ. ಮತ್ತು State Reorganization Report ನಲ್ಲೂ ಇದೆ. ಅದಾದ ನಂತರ ಅನೇಕ ರಿಪೋರ್ಟ್‌ಗಳು ಬಂದವು. ನಾವು ಮಾನ್ಯ ಧರ್ಮಸಿಂಗ್ ಮತ್ತು ಅಧ್ಯಕ್ಷರನ್ನೊಳಗೊಂಡ ಒಂದು ಸಮಿತಿಯಲ್ಲಿದ್ದೆವು. ಅದರಲ್ಲೂ ಕೂಡ ಇದು ಹಿಂದುಳಿದ ಪ್ರದೇಶವೆಂದು ರಿಪೋರ್ಟ್ ಆಗಿದೆ. ಆದಕಾರಣ, ಬೇರೆ ಪ್ರದೇಶಗಳ ಜೊತೆಗೆ ಅದನ್ನು ಸರಿಸಮಾನಾಗಿ ತರುವುದಕ್ಕೆ ಯಾವುದೇ ಪ್ರಯತ್ನಗಳು ನಡೆದಿಲ್ಲ. ಆದರೂ ನೀವು 'ಸುವರ್ಣ ಕರ್ನಾಟಕ' ಆಚರಿಸಬೇಕೆಂದು ಹೇಳುತ್ತೀರಿ. ನಾವೇಕೆ ಸುವರ್ಣ ಕರ್ನಾಟಕ ಆಚರಿಸಬೇಕು ? ಇದು ಕೇಳಬೇಕಾದ ಪ್ರಶ್ನೆ. ಬೆಂಗಳೂರು ಸಲುವಾಗಿ ದಿನಾಲೂ ಜಗಳವಾಡುತ್ತಿರುತ್ತಾರೆ. ಮಾನ್ಯ ದೇವೇಗೌಡರು ಮೋನೋ ರೈಲು ಅಂತಾರೆ, ಮಾನ್ಯ ಧರ್ಮಸಿಂಗ್‌ರವರು ಮೆಟ್ರೋ ರೈಲು ಅಂತಾರೆ. ಮೋನೋ, ಮೆಟ್ರೋ ಎರಡೂ ತರಿಸುತ್ತೇವೆ, ಜಗಳವಾಡಬೇಡಿರೆಂದು ಈಗಿನ ಹೊಸ ಮುಖ್ಯಮಂತ್ರಿಗಳು ಹೇಳುತ್ತಾರೆ. ಎಲ್ಲವೂ ಬೆಂಗಳೂರು ಸಲುವಾಗಿ. ಅಲಿ ಬೀದರ್‌ನಿಂದ ಗುಲ್ಬರ್ಗಾಗೆ ಬರುವುದಕ್ಕೆ ಒಂದು ಲೈನ್ ಇಲ್ಲ. ಡೈರೆಕ್ಟ್ ಬೆಂಗಳೂರಿಗೆ ಬರುವುದಕ್ಕೆ ಒಂದು ರೈಲು ಇಲ್ಲ. ಅಲ್ಲಿ ಬಿಜಾಪುರದಿಂದ ಗದಗವರೆಗೆ ಬ್ರಾಡ್‌ಗೇಜ್ ಮಾಡಿದರೆ ಉತ್ತರ ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಹೋಗಬಹುದು. ಆದರೆ, ಅಲ್ಲಿಲ್ಲ ಇದು ನೂರಾರು ಕೋಟಿ ರೂಪಾಯಿಗಳ ಪ್ರಶ್ನೆ ಇದೆ. ಇಲ್ಲಿ ಮೆಟ್ರೋ, ಮೋನೋ ಅಂತಾದರೆ ಇನ್ನು ಮದ್ರಾಸ್‌ಗೆ ಹೋಗುವ ಸಲುವಾಗಿ ಬುಲೆಟ್ ಟ್ರೇನ್. 15 ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿ ಬುಲೆಟ್ ಟ್ರೇನ್‌ನಲ್ಲಿ ಎರಡು ಗಂಟೆಗಳಲ್ಲಿ ಮದ್ರಾಸ್ ಗೆ ಹೋಗಬೇಕಂತೆ. ಯಾರ ಸಲುವಾಗಿ ? ತಮಿಳರು ಇಲ್ಲಿಗೆ ಬಂದು ಎಲ್ಲಾ ನೌಕರಿಗಳನ್ನು ಗಿಟ್ಟಿಸಿಕೊಳ್ಳುತ್ತಿದ್ದಾರಲ್ಲ, ಅವರ ಸಲುವಾಗಿ ಇದನ್ನು ತರುವುದು. ನಮ್ಮ ಸರ್ಕಾರದಲ್ಲಿ ಅಡ್ವೈಸರ್ಸ್ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಪ್ರತಿಯೊಂದರಲ್ಲೂ ಸರ್ಕಾರದ ಆರ್ಡರ್ ಆಗುತ್ತದೆ, ಡಿಸಿಷನ್ ಆಗುತ್ತದೆ. ಆದರೆ, ಇಂಪ್ಲಿಮೆಂಟ್ ಆಗುವುದಿಲ್ಲ. ಆ ದೃಷ್ಟಿಯಿಂದ ಅಲ್ಲಿ ಆಂಧ್ರದವರು. ಪ್ರಯತ್ನ ಮಾಡುತ್ತಾರೆ ಏಕೆಂದರೆ, ನಮ್ಮದು ಒಂದು ಇತಿಹಾಸವಿದೆ. ಹೈದರಾಬಾದ್ ಎಲ್ಲದಕ್ಕಿಂತಲೂ ಹಿಂದುಳಿದ ಪ್ರದೇಶವಾದರೆ, ಮೈಸೂರು ಎಲ್ಲಕ್ಕಿಂತಲೂ ಮುಂದುವರೆದ ಪ್ರದೇಶವಾಗಿದೆ. ಇದು ನಾನು ಹೇಳುವುದಲ್ಲ, ಇದನ್ನು 13 ನೇ ಅಕ್ಟೋಬರ್, 1949 Constituent Assembly ಯಲ್ಲಿ ನಮ್ಮ ಸಂವಿಧಾನದ ಬಗ್ಗೆ ಡಿಬೇಟ್ ಆಯಿತು. ಆ ಡಿಬೇಟ್‌ನಲ್ಲಿ ಚರ್ಚೆಯಾಗಿದ್ದನ್ನು ಹೇಳಿದ್ದಾರೆ. ಅದು ಹೀಗಿದೆ In view of that, it would not be proper and desirable to bring a State like Mysore under the provision of a Article 306(b). 306(b) ಎಂದರೆ, ಡ್ರಾಫ್ಟ್‌ನಲ್ಲಿ ಅದು ಇವೊತ್ತಿನ ೩೭೧ ಕಾಲಂ ಇಡೀ ದೇಶದಲ್ಲಿ ಎಲ್ಲಕ್ಕಿಂತಲೂ ಮುಂದುವರೆದ ಪ್ರದೇಶಕ್ಕೆ ಅದರ ಲಾಭ ಕೊಡಬಾರದು. ಬೇರೆ ಯಾವುದೇ ರಾಜ್ಯಕ್ಕೆ ಕೊಡಿ. ಒಂದು ಮೈಸೂರು, ಮತ್ತೊಂದು ಟ್ರಾವಂಕೂರ್ ಕೊಚ್ಚಿನ್ ಇವೆರಡೂ ರಾಜ್ಯಗಳಿಗೆ ಬೇಡ ಎಂದು Constituent Assembly ಯಲ್ಲಿ ಡಿಬೇಟ್ ಆಗಿ ನಿರ್ಣಯ ಆಗಿದೆ. ಆದರೆ, ಈಗ ಅವರ ಕೈಗೆ ಬಂದು ಹೈದರಾಬಾದ್ ರಾಜ್ಯದ ಜಿಲ್ಲೆಗಳಿಗೆ ಕೊಟ್ಟಿದ್ದಾರೆ. ಅದಕ್ಕೆ ರಾಜ್ಯ ಸರ್ಕಾರದ recommendations ಬರುತ್ತದೆ, ಇಂಪ್ಲಿಮೆಂಟ್ ಆಗುವುದಿಲ್ಲ. Judgement interpretation ಕೂಡ wrong ಆಗುತ್ತದೆ. ಸುಪ್ರಿಂಕೋರ್ಟ್‌ನಲ್ಲಿ ಒಂದು ಜಡ್ಜ್‌ಮೆಂಟ್ ಆಗಿದೆ. Employment Offices...

ಅಧ್ಯಕ್ಷರು : ರಾಷ್ಟ್ರಪತಿಗಳು ಮಾಡಿರುವ ಭಾಷಣದ ಮೇಲೆ ಏನಾದರೂ ಸಲಹೆ, ಸೂಚನೆಗಳಿದ್ದರೆ ಕೊಡಿ ಸ್ವಾಮಿ.

ಶ್ರೀ ಡಿ.ಕೆ. ಶಿವಕುಮಾರ್: ರಾಷ್ಟ್ರಪತಿಗಳು ಭಾಷಣ ಮಾಡುವಾಗ ಅವರು ಎದ್ದು ಹೊರಟು ಹೋದರಲ್ಲಾ

ಶ್ರೀ ವೈಜನಾಥ ಪಾಟೀಲ್ : ನಾವು ಪ್ರೊಟೆಸ್ಟ್ ಮಾಡಿ ಹೋಗಿದ್ದೆವು.

ಅಧ್ಯಕ್ಷರು : ನಮ್ಮ ರಾಜ್ಯವನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಘನತೆವೆತ್ತ ರಾಷ್ಟ್ರಪತಿಗಳು ನಿಗದಿತ ಅವಧಿಯಲ್ಲಿ ಜಾರಿಗೊಳಿಸಬಹುದಾದ ಕೆಲವು ಕಾರ್ಯಕ್ರಮಗಳನ್ನು ಏನು ಕೊಟ್ಟಿದ್ದಾರೆ, ಅದರ ಬಗ್ಗೆ ಏನಾದರೂ ಸಲಹೆಗಳಿದ್ದರೆ, ಕೊಡಿ. ನಿಮ್ಮ ಭಾಗಕ್ಕೆ ಸಂಬಂಧಿಸಿದ ವಿಚಾರಗಳ ಬಗ್ಗೆ ಬೇರೆ ಸಮಯದಲ್ಲಿ ಮಾತನಾಡಬಹುದು.

ಶ್ರೀ ವೈಜನಾಥ ಪಾಟೀಲ್: ಆರ್ಟಿಕಲ್ ೩೭೧ ಕ್ಕೆ ಅಮೆಂಡ್‌ಮೆಂಟ್ ಮಾಡುವ ಬಗ್ಗೆ ಕೂಡ ಇದರಲ್ಲಿ ತಿಳಿಸಿಲ್ಲ. ಈ ಸರ್ಕಾರ ಎರಡೆರಡು ಸಲ ನವದೆಹಲಿಗೆ ಡೆಲಿಗೇಶನ್ ಹೋಯಿತು. ಇಮ್ಮೆ ಮಾನ್ಯ ಎಸ್.ಎಂ. ಕೃಷ್ಣರವರ ನೇತೃತ್ವದಲ್ಲಿ all party delegation ಕೇಂದ್ರ ಸರ್ಕಾರಕ್ಕೆ ಹೋಯಿತು. ಅನಂತರ, ಹಿಂದಿನ ಮುಖ್ಯಮಂತ್ರಿ ಸನ್ಮಾನ್ಯ ಧರ್ಮಸಿಂಗ್‌ರವರ ನೇತೃತ್ವದಲ್ಲೂ ಹೋಯಿತು. ಆದರೆ ಡೆಲಿಗೇಶನ್ ಹೋದರೂ ಈಗ ರಿಜೆಕ್ಟ್ ಮಾಡಿ ಕಳುಹಿಸಿದ್ದಾರೆ ನಾವು ಡೆಲಿಗೇಶನ್ ಹೋದಾಗ ಅಲ್ಲಿನ ಅಶೋಕಾ ಹೋಟೆಲ್‌ನಲ್ಲಿ ಇಳಿದುಕೊಂಡು ವಾಪಸ್ಸು ಹೊರಟು ಬಂದೆವು. ನಾವು ಏನು ಮಾಡಿದೆವೆಂಬುದು ಗೊತ್ತಿದೆ. ಅಲ್ಲಿಗೆ ಹೋಗುವುದು, ಮೆಮೊರ್‍ಯಾಂಡಮ್ ಕೊಡುವುದು, ಹೊರಟು ಬರುವುದು. ಬೇರೆ ಏನೂ ಮಾಡಿಲ್ಲ. ಇವೊತ್ತು ಕೇಂದ್ರ ಸರ್ಕಾರ ಅದನ್ನು ರಿಜೆಕ್ಟ್ ಮಾಡಿದೆ. ಏಕೆ ಮಾಡಿದ್ದಾರೆಂಬುದು ಗೊತ್ತಿಲ್ಲ. It is not feasible ಅಂತಲೋ, ಏನೋ ಹೇಳಿದ್ದಾರೆ. But, unofficially ತಿಳಿದುಕೊಂಡಾಗ ಗೊತ್ತಾಯಿತು. ಹೀಗೆ ಕೊಟ್ಟೆವು ಎಂದರೆ, ಎಲ್ಲೋ ಒಂದು ಪ್ರದೇಶಕ್ಕೆ ಕೊಟ್ಟರೆ, ಮತ್ತೆ ದೇಶದಲ್ಲಿರುವ ಬೇರೆಯವರೆಲ್ಲರೂ ಕೇಳಬಹುದೆಂದು ಖಾಸಗಿ ವ್ಯಕ್ತಿಗಳಲ್ಲೊಬ್ಬರಾದ, ಮಂತ್ರಿಗಳಾದ ನಮ್ಮ ಮಿತ್ರರೊಬ್ಬರು ಹೇಳಿದರು. ಆಗ ನಾನು, XX ಏಕೆಂದರೆ, ಹಿಂದೂಸ್ತಾನಕ್ಕೆ ಸ್ವಾತಂತ್ರ್ಯ ಕೊಟ್ಟೆವೆಂದರೆ ಬೇರೆಯವರೂ ಕೇಳುತ್ತಾರೆ. ಆದರೆ, ಯಾರಿಗೂ ಸ್ವಾತಂತ್ರ್ಯ ಕೊಡಬೇಡಿರೆಂದರೆ ? ಸ್ವಾತಂತ್ರ್ಯ ಕೊಡಬೇಕಾಗುತ್ತದೆ. ಯಾವಾಗ ಸ್ವಾತಂತ್ರ್ಯದ ಅವಶ್ಯಕತೆ ಇರುತ್ತದೋ, ಆಗ ಕೊಡಬೇಕಾಗುತ್ತದೆ. ಜನರು ಕೇಳುತ್ತಾರೆಂದರೆ ಕೊಡಬೇಕಾಗುತ್ತದೆ. ಆದರೆ, ನಮ್ಮ ಪರಿಸ್ಥಿತಿ ಬೇರೆಯೇ ಇದೆ. ಅದರ ಬಗ್ಗೆ ತಿಳಿದುಕೊಳ್ಳಲು ಅವರು ತಯಾರಿಲ್ಲ. ಹೈದರಾಬಾದ್ ರಾಜ್ಯ ಒಂದೇ. ಇದರ ಬಗ್ಗೆ ಸುಪ್ರೀಂಕೋರ್ಟ್‌ನಿಂದ ಜಡ್ಜ್‌ಮೆಂಟ್ ಆಗಿದೆ. ಇಡೀ ಹಿಂದೂಸ್ತಾನದಲ್ಲಿ ಹೈದರಾಬಾದ್ ರಾಜ್ಯ most isolated State in Indian Princely States. ಎಲ್ಲದಕ್ಕಿಂತಲೂ isolate. ಎಲ್ಲಿ ಮಾತೃಭಾಷೆ ಕನ್ನಡವಾಗಿ 90% people language was kannada ಇತ್ತೋ, ಅಲ್ಲಿ ಉರ್ದು ರಾಜ್ಯದ್ದೇ ಕಾರುಬಾರು ನಡೆಯುತ್ತಿತ್ತು. ಉರ್ದುವಿನಲ್ಲೇ ಎಜ್ಯುಕೇಶನ್ ನಡೆಯುತ್ತಿತ್ತು. 90% people in Telugu speaking area. ಅವರ ಮಾತೃಭಾಷೆ ತೆಲುಗು. ಆದರೆ, ರಾಜ್ಯದ ಕಾರುಬಾರು, ಆಡಳಿತ, ಶಿಕ್ಷಣ ಎಲ್ಲವೂ ಉರ್ದುವಿನಲ್ಲೇ ನಡೆಯುತ್ತಿತ್ತು. ಅದೇ ಪರಿಸ್ಥಿತಿ Marati speaking area 'ಮರಾಠವಾಡ' ಎಂದು ಹೈದರಾಬಾದ್ ರಾಜ್ಯದಲ್ಲೇ ಇತ್ತು. ಐದು Marati speaking ಜಿಲ್ಲೆಗಳಿದ್ದವು. ಆದ್ದರಿಂದ, ಅವುಗಳನ್ನು ಮರಾಠವಾಡ ಎಂದು ಕರೆಯುತ್ತಿದ್ದರು. ೮

XX ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಜಿಲ್ಲೆಗಳು ಆಂಧ್ರಪ್ರದೇಶಕ್ಕೆ ಹೋದವು. ಅದಕ್ಕೆ ಇವೊತ್ತು ತೆಲಂಗಾಣ ಅನ್ನುತ್ತಾರೆ. ಹಾಗೆಯೇ, ನಮ್ಮ ಮೂರು ಜಿಲ್ಲೆಗಳು ಇದ್ದುದು ಇವೊತ್ತು ನಾಲ್ಕು ಜಿಲ್ಲೆಗಳಾಗಿವೆ. ಅದಕ್ಕೆ ನಾವು ಹೈದರಾಬಾದ್-ಕರ್ನಾಟಕವೆಂತಲೂ ಹೇಳುತ್ತಾ ಹೊರಟಿದ್ದೇವೆ. ಇತಿಹಾಸ ಇದ್ದುದು ಹೀಗೆ

ಅಧ್ಯಕ್ಷರು : ಆಯಿತು, ದಯಮಾಡಿ ಮುಗಿಸಿ, ಆಗಲೇ ೧೫ ನಿಮಿಷವಾಯಿತು.

ಶ್ರೀ ವೈಜನಾಥ ಪಾಟೀಲ್ : ಇಲ್ಲ, ನಾನು ಇವೊತ್ತು ಒಂದು ತಾಸು ಮಾತನಾಡುತ್ತೇನೆ. ಈ ಆಧಾರದಲ್ಲಿ ಸುಪ್ರಿಂಕೋರ್ಟ್ ಜಡ್ಜ್‌ಮೆಂಟ್ ಆಯಿತು. About 80 years back, ಹೈದರಾಬಾದ್ ರಾಜ್ಯದಲ್ಲಿ ಒಂದು ರೂಲ್ ಇತ್ತು. ಅಲ್ಲಿ ಉರ್ದು ಮಾತನಾಡುವವರು ಲಕ್ನೋದಿಂದ ಹೈದರಾಬಾದ್‌ಗೆ ಬಂದು, ' ಅರೆ ತುಮಾರಾ ಅಚ್ಛಾ ನಹಿ ಉರ್ದು, ಹಮ್ ಆತೇ' ಎಂದು ಹೇಳುವ ಮೂಲಕ ಇಲ್ಲೆಲ್ಲಾ ಸರ್ಕಾರಿ ಹುದ್ದೆಗಳನ್ನು ಗಿಟ್ಟಿಸಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದರು. ಆಗ ಹೈದರಾಬಾದ್ ರಾಜ್ಯದಲ್ಲಿ ನಿಜಾಂ ಕಾಲದಲ್ಲಿ ಪ್ರೊಟೆಸ್ಟ್ ಆಯಿತು. ಪ್ರೊಟೆಸ್ಟ್ ಆದರು ಆತ ಆಟೋಕ್ರಾಟ್ ಇದ್ದರೂ ಮನ್ನಣೆ ಕೊಟ್ಟು, ಒಂದು ರೂಲ್ ಆರ್ಡರ್ ಮಾಡಿದ. ಅದು ಮುಲ್ಕಿ ರೂಲ್, ನಿಜಾಂ ಕಾಲದ್ದು. ಮುಲ್ಕಿ ರೂಲ್ ಎಂದರೆ, ಲೋಕಲ್ ಕಾನೂನು. ಲೋಕಲ್‌ನಲ್ಲಿರುವವರಿಗೆ ನೌಕರಿಗಳನ್ನು ಕೊಡಬೇಕು. ಯಾರಾದರೂ ಸರ್ಕಾರಿ ಹುದ್ದೆಗಳನ್ನು ಪಡೆದುಕೊಳ್ಳಬೇಕಿದ್ದಲ್ಲಿ, ಮುಲ್ಕಿ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾಗಿತ್ತು. ಅಂತಹ ಒಂದು ಕಾನೂನು ಅಲ್ಲಿತ್ತು. ಆ ಕಾನೂನು ಸ್ವಾತಂತ್ರ್ಯಕ್ಕಿಂತಲೂ ಮೊದಲೂ ಇತ್ತು. ಸ್ವಾತಂತ್ರ್ಯ ಬಂದ ನಂತರವೂ ಇತ್ತು. ೧೯೫೦ ರಲ್ಲಿ ಏನು ಸಂವಿಧಾನ ಜಾರಿಗೆ ಬಂತು, ಆಗಲೂ ಅದು ನಡೆಯುತ್ತಲೇ ಇತ್ತು. ಭಾಷಾವಾರು ಪ್ರಾಂತ್ಯ ರಚನೆಯಾಗಿ ನಾವು ಈ ಕಡೆ ಕರ್ನಾಟಕಕ್ಕೆ ಬಂದೆವು. ಮರಾಠವಾಡ ಮಹಾರಾಷ್ಟ್ರಕ್ಕೆ ಹೋಯಿತು. ಉಳಿದ ಎಂಟು ಜಿಲ್ಲೆಗಳಿಗೆ ಅನ್ವಯಿಸುವಂತೆ ಮುಲ್ಕಿ ರೂಲ್ ಜಾರಿ ಆಯಿತು. ಅದಕ್ಕೆ ಅಲ್ಲಿ challenge ಮಾಡಿದರು. Coastal Andhra Pradesh ನ ರಾಯಲ ಸೀಮಾದಿಂದ ಬಂದ ಕೆಲವು Government servants ಅದನ್ನು ಹೈಕೋರ್ಟ್‌ನಲ್ಲಿ challenge ಮಾಡಿದರು, ಮುಲ್ಕಿ ರೂಲ್ ಕಾನ್ಸಿಟಿಟ್ಯೂಷನ್ ಜಾರಿಯಲ್ಲಿ ಬಂದ ನಂತರ no mulki rules ಅಂತ, ಆಂಧ್ರಪ್ರದೇಶ ಹೈಕೋರ್ಟ್ ಅದನ್ನು upheld ಮಾಡಿತು. ಕೊನೆಗೆ Government of Andhra Pradesh, though it was influenced by Andhra people, ಅವರು Supreme Court ಗೆ appeal ಮಾಡಿದರು in the interest of the intergrity of the state. Supreme Court ದವರು judgement ಕೊಟ್ಟರು. ಅವರು ಏನು ಜಡ್ಜ್‌ಮೆಂಟ್ ಕೊಟ್ಟರು ಎಂದರೆ, ಆ Constitution ಏನೇ ಹೇಳಲಿ, ಆದರೆ ಹಳೆಯ Hyderbad ರಾಜ್ಯದ ಮಾತೃಭಾಷೆ ಒಂದು, ಎಲ್ಲಾ ಆಡಳಿತ ನಡೆಯುವುದು ಮತ್ತೊಂದು ಭಾಷೆಯಾದ ಉರ್ದುವಿನಲ್ಲಿ. ಈಗ ಹಳೆಯ ಮದ್ರಾಸ್ ರಾಜ್ಯದಿಂದ ಏನು ಕಡಪಾ ಮುಂತಾದ ಕಡೆಗಳಿಂದ ಕೆಲವರು ಈ ಭಾಗದವರು ಬಂದಿದ್ದರೋ, ನೂರಾರು ವರ್ಷಗಳಿಂದ ಇವರ ಮಾತೃಭಾಷೆಯೇ ತೆಲುಗು, ಇವರ ಆಡಳಿತವೂ ತೆಲುಗು, ವ್ಯವಹಾರವೂ ತೆಲುಗು, ಆ ದೃಷ್ಟಿಯಿಂದ ತೆಲಂಗಾಣ ಪ್ರದೇಶದವರು Urdu speaking Telugu ಪ್ರದೇಶದಿಂದ ಬಂದವರು, ಅವರು compete ಮಾಡಲಿಕ್ಕೆ ಸಾಧ್ಯವಿಲ್ಲ. ಅದರ ಸಲುವಾಗಿ mulki rules are upheld ಎಂದು Supreme Court ನವರು judgement ಕೊಟ್ಟರು. ಯಾವುದರ ಸಲುವಾಗಿ, ಅಂದರೆ ತೆಲಂಗಾಣ ಸಲುವಾಗಿ, ಅದು ಕೊಟ್ಟ

ನಂತರ, ಈ ಕಡೆಗೆ ಮದ್ರಾಸಿ ಆಂಧ್ರದವರು ಏನು ಹೋಗಿದ್ದರು, counter agitation ಶುರು ಮಾಡಿದರು, ನಮಗೆ separate ಆಂಧ್ರವೇ ಬೇಕು ಎಂದು. ನಮ್ಮ ಮಕ್ಕಳು ಹೈದರಾಬಾದ್‌ನಲ್ಲಿ ಓದುವುದು ಹೇಗೆ ? ಏಕೆಂದರೆ ಅಲ್ಲಿ, ಮುಲ್ಕಿ ರೂಲ್ಸ್ ಅಂದರೆ 100% ನೌಕರಿ ಹೈದರಾಬಾದ್‌ನಲ್ಲಿ ತೆಲಂಗಾಣದ ಎಂಟು ಜಿಲ್ಲೆಗಳವರಿಗೆ. ನಮ್ಮ ಮಕ್ಕಳು ಹೇಗೆ ಸ್ಪರ್ಧಿಸುವುದು ಎಂದು counter agitation ಮಾಡಿದಾಗ, ಆಗ ಒಂದು ಜಂಟಲ್‌ಮೆನ್ಸ್ ಅಗ್ರಿಮೆಂಟ್ ಆಯಿತು. ಆಗ ೩೭೧ should be extended to whole of Andhra Pradesh, ಇಡೀ ಆಂಧ್ರ ಪ್ರದೇಶಕ್ಕೆ ಮೀಸಲಾತಿ , district level employment ನಲ್ಲಿ ಕೊಡಿ ಎಂದಾಯಿತು. ಕೆಲವು ದೊಡ್ಡ ಪೋಸ್ಟ್‌ಗಳಿಗೆ, gazetted postಗಳಿಗೆ divisional level ನಲ್ಲಿ ತೆಗೆದುಕೊಂಡ ನಂತರ divisional level recruitment ಮಾಡಿರಿ, ಕೆಲವು ಸಣ್ಣ ಪೋಸ್ಟ್‌ಗಳಿಗೆ, teachers and peons ಇಂತಹ post ಗಳಿಗೆ ಅದಕ್ಕೆ ಬೇಕಾದರೆ district level ಮಾಡಿರಿ ಎಂದು ಒಂದು ಅಗ್ರಿಮೆಂಟ್ ಆದ ನಂತರ, ಆ ಅಗ್ರಿಮೆಂಟ್ ಪ್ರಕಾರ ಇವತ್ತು ಆ ಮುಲ್ಕಿ ರೂಲ್ಸ್ ಹೆಸರಿನಲ್ಲಿ ಇಲ್ಲ. But ಅಲ್ಲಿಯ appointment ಮತ್ತು Selection ಹೊಸ ಪದ್ಧತಿಯಲ್ಲಿ ನಡೆದಿದೆ. Locals ನವರಿಗೆ 80% ಆದರೆ, 20% from outside Local ಆಗಿ ಆ zone ನಲ್ಲಿ ಇರುವವರಿಗೆ 60% local ನವರು, 40% ಹೊರಗಿನವರು. ಇಂತಹ ಒಂದು ವ್ಯವಸ್ಥೆ ಅಲ್ಲಿ ಆಯಿತು. ಇದು ಯಾವುದರ ಸಲುವಾಗಿ ಆಯಿತು ? ರಾಜ್ಯ ಒಡೆಯಬಾರದು ಎಂದು ಇದು ಆಯಿತು. ಹಾಗೆಯೇ ನಾವು ಇವತ್ತು ೩೭೧ ಅನ್ನು ಕೇಳುತ್ತಿರುವುದು ಬರೀ ಹೈದರಾಬಾದ್-ಕರ್ನಾಟಕದ ಸಲುವಾಗಿ ಅಲ್ಲ. Unfortunately ನಮ್ಮನ್ನು ಹೋಗಿ ಅಲ್ಲಿ represent ಮಾಡುವವರೂ ಅದೇ ರೀತಿಯಲ್ಲಿ ಅವರೂ ಇದನ್ನು ತಿಳಿಸಲಿಕ್ಕೆ ತಯಾರಿಲ್ಲ. ನಾವು ಇಡೀ ಎಲ್ಲ ಜಿಲ್ಲೆಗಳಿಗೆ ಇಡೀ ರಾಜ್ಯಕ್ಕೆ ಕೇಳುತ್ತಿದ್ದೇವೆ. ಮೈಸೂರಿನಲ್ಲಿ ಇರುವವರು 90%,80%...., ಎಲ್ಲಿ ಸಹಿತ ಬೇಕಾದರೂ ತಾವು ನಿರ್ಣಯ ಮಾಡಿರಿ, ಅಲ್ಲಿಯರವರೇ ಇರಲಿ. ಮಂಗಳೂರಿನವರು ಅಲ್ಲಿಯವರೇ ಇರಲಿ, ಮಂಡ್ಯದವರು ಅಲ್ಲಿಯವರೇ ಇರಲಿ . . . . . .

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ವೈಜನಾಥ ಪಾಟೀಲ್‌ರವರೇ, ಒಂದು ನಿಮಿಷ. ಈಗ ಆಂಧ್ರ ಪ್ರದೇಶ ಸ್ಟೇಟ್‌ನಲ್ಲಿ ಇರತಕ್ಕಂಥ ತೆಲಂಗಾಣ ೩೭೧ particular reason ಕೊಟ್ಟು applicable ಆಗಿದೆ. ಅಲ್ಲಿ ಇಡೀ ರಾಜ್ಯಕ್ಕೆ ಎಲ್ಲಾ ಡಿಸ್ಟ್ರಿಕ್ಟ್‌ಗಳನ್ನು ಐಡೆಂಟಿಫೈ ಮಾಡಿಲ್ಲ ಅಥವಾ ತಾಲ್ಲೂಕುಗಳನ್ನು ಐಡೆಂಟಿಫೈ ಮಾಡಿಲ್ಲ. ಇಲ್ಲಿ plead ಮಾಡುವಾಗ ನೀವು ಇಡೀ ಮೈಸೂರಿಗೂ ಮಾಡಿರಿ, ಬೆಂಗಳೂರಿಗೂ ಮಾಡಿರಿ ಎಂದು ಕೇಳುತ್ತೀರಿ. ನೀವು ಮತ್ತು ಹಿಂದಿನ ಮುಖ್ಯಮಂತ್ರಿಗಳು ಹಾಗೂ ಇಂದಿನ ವಿರೋಧ ಪಕ್ಷದ ನಾಯಕರು ಇಬ್ಬರೂ ಸೇರಿ ಪ್ರಧಾನ ಮಂತ್ರಿಗಳ ಬಳಿಗೆ ಹೋಗಿ ಏನು represent ಮಾಡಿದ್ದಿರಿ ?

ಶ್ರೀ ವೈಜನಾಥ್ ಪಾಟೀಲ್ :– ಆ ಸಂದರ್ಭದಲ್ಲಿ ತಾವೂ ಇದ್ದಿರಿ. ಆಂಧ್ರ ಪ್ರದೇಶದಲ್ಲಿ ಇಡೀ ಸ್ಟೇಟ್‌ಗೆ ೩೭೧ apply ಆಯಿತು. ಅದನ್ನೇ ನಮ್ಮ ಜೊತೆಗೆ ಬಂದಾಗ ನೀವೇ ಯಾರಾದರೂ ಹೇಳುತ್ತೀರಿ ಎಂದು ಭಾವಿಸಿದ್ದೆ. . ..

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಆಗ ನೀವೂ ಜೊತೆಯಲ್ಲೇ ಇದ್ದಿರಿ. ನೀವೇ ಹೇಳಬಹುದಾಗಿತ್ತಲ್ಲವೇ ? ...

ಶ್ರೀ ವೈಜನಾಥ್ ಪಾಟೀಲ್ :– ಈ ವಿಷಯ ನೀವೇ ತಿಳಿದುಕೊಂಡಿಲ್ಲ. ಇಡೀ ಆಂಧ್ರ ಪ್ರದೇಶದಲ್ಲಿ zone ಗಳನ್ನು ಮಾಡಿದ್ದಾರೆ, district level recruitment ಮಾಡಿದ್ದಾರೆ, not for Telangana it is for whole Andhra Pradesh..........

(ಗೊಂದಲ)

ಅಧ್ಯಕ್ಷರು :– ತಾವು ಈ ವಿಷಯವನ್ನು ಬೇರೆ ಸಂದರ್ಭದಲ್ಲಿ ಮಾತನಾಡಿ, ದಯಮಾಡಿ ಈಗ ನಿಲ್ಲಿಸಿ. ಇನ್ನೂ ಬಹಳ ಜನ ಮಾತನಾಡಬೇಕಾಗಿದೆ

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :– ಒಗ್ಗಟ್ಟಿನ ಕೊರತೆಯಿಂದ ಇವರು ಹಿಂದುಳಿದಿದ್ದಾರೆ ....

(ಗೊಂದಲ)

ಅಧ್ಯಕ್ಷರು :– ಇದನ್ನೆಲ್ಲಾ ಬಜೆಟ್ ಮೇಲೆ ಮಾತನಾಡುವಿರಂತೆ. ದಯಮಾಡಿ ಈಗ ನಿಲ್ಲಿಸಿ.

(ಗೊಂದಲ)

ಶ್ರೀ ವೈಜನಾಥ ಪಾಟೀಲ್ :– ಅದೇ ಸಲುವಾಗಿ ಹೈದರಾಬಾದ್ ರಾಜ್ಯದಿಂದ ಬಂದಂತಹ ಹೈದರಾಬಾದ್ ಕರ್ನಾಟಕದವರಿಗೆ ಕೊಡಿ ಎಂದು ನಾವು ಕೇಳುತ್ತಿದ್ದೇವೆ ಕಾನೂನು ಲಾಗೂ ಆಯಿತು ಅಲ್ಲಿ. ಆ ಬಗ್ಗೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಇದೆ. ಅವರಿಗಷ್ಟೇ ಅಲ್ಲ ಇಡೀ ರಾಜ್ಯಕ್ಕೆ ಆಯಿತು. Can you extend it throughout the State ? ಆಗ ಜಗಳವೇ ಇಲ್ಲ, ಇತ್ತೀಚೆಗೆ ಏಕೆ ಇದು problem ಆಗಿದೆ ಎಂದರೆ, ಮೊದಲು district employment office ಗಳು ಇದ್ದವು. ಈಗ ಅವು ನಾಮಕಾವಸ್ಥೆಗೆ ಇವೆ, ಅವುಗಳನ್ನೆಲ್ಲಾ ಈಗ ಖಲಾಸ್ ಮಾಡುತ್ತಿದ್ದಾರೆ. District employment officeನಲ್ಲಿ local candidates ಹೋಗಿ register ಮಾಡುತ್ತಿದ್ದರು. ಆ ಪದ್ಧತಿಯನ್ನು ಈಗ ನಿಲ್ಲಿಸಿದ್ದಾರೆ.

ಅಧ್ಯಕ್ಷರು :– ಮಾನ್ಯ ಸಿದ್ದರಾಮಯ್ಯನವರೆ, ಸ್ವಲ್ಪ ನಿಮ್ಮ ಸ್ನೇಹಿತರಿಗೆ ಹೇಳಿ.

ಶ್ರೀ ವೈಜನಾಥ ಪಾಟೀಲ್ :– ಒಂದು ಮಾತನ್ನು ದಯಮಾಡಿ ತಿಳಿದುಕೊಳ್ಳಿ, ಆ ಪದ್ಧತಿ ..

ಶ್ರೀ ಸಿದ್ದರಾಮಯ್ಯ :– ಅವರು full of materials ಇಟ್ಟುಕೊಂಡು ಮಾತನಾಡುತ್ತಿದ್ದಾರೆ.

ಅಧ್ಯಕ್ಷರು :– ಅವರ ಹತ್ತಿರ materials ಇರುವುದು ನಿಜ. ಬಜೆಟ್ ಅಧಿವೇಶನದಲ್ಲೂ ಸಹ ಅವರು ಮಾತನಾಡಬಹುದು, ಆಗ ಅವರಿಗೆ ನಾನು ಅವಕಾಶ ಕೊಡುತ್ತೇನೆ. ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ. Materials ಇದೆ, I admit, ಆದರೆ ಅವಕಾಶ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಅವರು full of materials ತಂದೂ ಮಾನ್ಯ ಸಿದ್ದರಾಮಯ್ಯನವರನ್ನು convince ಮಾಡಿ ಅವರನ್ನು ಆ ಕಡೆಗೆ ತೆಗೆದುಕೊಂಡರು. ಈಗ ನೀವು ಮಾನ್ಯ ಕುಮಾರ ಸ್ವಾಮಿಯವರಿಗೆ convince ಮಾಡಬೇಕು. ಅವರಿಗೆ convince

ಆದರೆ ಅವರು ನಿಮ್ಮ ಕಡೆಗೆ ಬಂದೇ ಬಿಡುತ್ತಾರಲ್ಲಾ ? ಇವರಿಗೆ ನೀವು convince ಮಾಡಿದರೆ ಏನಾದರೂ ಆಗುತ್ತದೆ.

ಶ್ರೀ ಸಿ.ಟಿ. ರವಿ :– ಅವರು ಗುಲ್ಬರ್ಗಾದವರನ್ನೇ convince ಮಾಡಲಿಕ್ಕಾಗಲಿಲ್ಲ. ಗುಲ್ಬರ್ಗಾದವರೇ ಮುಖ್ಯಮಂತ್ರಿಗಳಾಗಿದ್ದಾಗ convince ಮಾಡಲಿಕ್ಕಾಗಲಿಲ್ಲ, ಇನ್ನಾರನ್ನು ಅವರು convince ಮಾಡುತ್ತಾರೆ ?

ಶ್ರೀ ವೈಜನಾಥ ಪಾಟೀಲ್ :– ಗುಲ್ಬರ್ಗಾದವರು ಒಂದೇ ಸಲ ಮುಖ್ಯಮಂತ್ರಿಗಳಾಗಿಲ್ಲ. ಗುಲ್ಬರ್ಗಾದವರು ಮೂರು–ಮೂರು ಸಲ ಮುಖ್ಯಮಂತ್ರಿಗಳಾಗಿದ್ದಾರೆ. ಆದರೂ ಅವರು ಕನ್‌ವಿನ್ಸ್ ಆಗಿಲ್ಲ, ಅವರು ಬೇರೆ ರೀತಿ ತಿಳಿದುಕೊಂಡಿದ್ದಾರೆ. . . . . .

ಶ್ರೀ ಸಿ.ಟಿ. ರವಿ :– ಮಾನ್ಯ ವೈಜನಾಥ ಪಾಟೀಲ್‌ರವರೆ, ಆ ಗುಲ್ಬರ್ಗಾದವರೇ ನಿಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡಿಲ್ಲ. ಇನ್ನು ನೀವು ಮಾತನಾಡಿ ಏನು ಪ್ರಯೋಜನ ? ನೀವು ಸುಮ್ಮನೆ ಕುಳಿತುಕೊಳ್ಳುವುದು ಒಳ್ಳೆಯದಲ್ಲವೇ ? . . . .

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಹೈದರಾಬಾದ್ ಕರ್ನಾಟಕದ ಪರವಾಗಿ ಯಾರಾದರೂ ಪ್ರಾಮಾಣಿಕವಾಗಿ ಮಾತನಾಡುವವರಿದ್ದರೆ, ಅದು ವೈಜನಾಥ ಪಾಟೀಲ್‌ರವರು ಮಾತ್ರ ಆದ್ದರಿಂದ ದಯಮಾಡಿ ತಾವು ಅವರಿಗೆ ಎಲ್ಲಾ ರೀತಿಯ ಹೆಚ್ಚಿನ ಕಾಲಾವಕಾಶ ಕೊಡಬೇಕು. ನಾವು ಮತ್ತು ಅವರು ಬಹಳ ಸ್ನೇಹಿತರು. ಅವರು ಅತ್ಯಂತ ಹೆಚ್ಚಿನ ರೀತಿಯಲ್ಲಿ ಜವಾಬ್ದಾರಿಯಿಂದ ಮಾತನಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೂ ಅದನ್ನು ಗಹನವಾಗಿ ಕೇಳುತ್ತಿದ್ದಾರೆ . . . . .

(ಗೊಂದಲ)

ಅಧ್ಯಕ್ಷರು :– ಅವರು ಬಹಳ ಜವಾಬ್ದಾರಿಯಿಂದ ಮಾತನಾಡುತ್ತಿದ್ದಾರೆ ನಿಜ. ಆದರೆ ಬೇರೆ ಸದಸ್ಯರೂ ಕೂಡ ಮಾತನಾಡಬೇಕಲ್ಲವೇ ?

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್ :– ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇವತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಅವರಿಗೆ ಹೆಚ್ಚು ಸಮಯ ಕೊಡಿ ಎಂದು ಹೇಳಿದರು. ಆದರೆ ಅವರು ಅವರ ಸಮಯವನ್ನು ಉಪಯೋಗ ಮಾಡಿಕೊಳ್ಳದೆ, ಅವರಿಗೆ ಕೊಡಿ ಎಂದು ಹೇಳಿದ್ದರೆ ನಾನು ತುಂಬಾ ಸಂತೋಷ ಪಡುತ್ತಿದ್ದೆ. ಮಾನ್ಯ ಸಿದ್ದರಾಮಯ್ಯನವರು ನನ್ನ ಸಮಯವನ್ನೂ ಸಹಿತ ಅವರಿಗೇ ಕೊಟ್ಟಿದ್ದೇನೆ ಎಂದು ಹೇಳುತ್ತಿದ್ದರೆ. ಅದು ಸರಿಯಾದಂತಹ ವಿಚಾರ. ಆದರೆ ಅವರು ಏಕೆ ಈ ತರಹ ಹೇಳುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಇತರ ಸದಸ್ಯರು ಮಾತನಾಡುವುದು ಬೇಡವೇ ?

ಶ್ರೀ ಸಿ.ಟಿ. ರವಿ :– ಅವರು ಇಡೀ ಸದನದ ಸಮಯವನ್ನು ತೆಗೆದುಕೊಂಡಿರುವುದರಿಂದ.....

(ಗೊಂದಲ)

ಅಧ್ಯಕ್ಷರು :– ಮಾನ್ಯ ವೈಜನಾಥರವರೇ, ಬಜೆಟ್ ಮೇಲೆ ಮಾತನಾಡುವಿರಂತೆ. ದಯಮಾಡಿ ಇವತ್ತು ಕುಳಿತುಕೊಳ್ಳಿ. ಮುಂದೆ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುವಿರಂತೆ.

ಶ್ರೀ ವೈಜನಾಥ ಪಾಟೀಲ್ :– ೧೯೯೮ ರಲ್ಲಿ ಹೈಕೋರ್ಟ್‌ನದ್ದು ಒಂದು ಜಡ್ಜ್‌ಮೆಂಟ್ ಬಂತು....

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೆ, ನನ್ನ ಸಮಯವನ್ನೂ ಸಹ ಅವರಿಗೇ ಕೊಡಿ.

ಅಧ್ಯಕ್ಷರು :– ಆ ತರಹ ನನ್ನ ಸಮಯ, ನಿನ್ನ ಸಮಯ ಎಂದು ಕೊಡುವುದಕ್ಕಾಗುವುದಿಲ್ಲ.

ಶ್ರೀ ವೈಜನಾಥ ಪಾಟೀಲ್ :– ೧೯೯೮ ರಲ್ಲಿ ಕರ್ನಾಟಕ ಹೈಕೋರ್ಟ್‌ನಲ್ಲಿ ಒಂದು ಜಡ್ಜ್‌ಮೆಂಟ್ ಆಯಿತು ಏನು ಜಡ್ಜ್‌ಮೆಂಟ್ ಆಯಿತು. ಎಂದರೆ, employment office ನಲ್ಲಿ ಯಾರೂ register ಮಾಡಿಸಬೇಕಾದಂತಹ ಅವಶ್ಯಕತೆ ಇಲ್ಲ. Direct recruitment ಅಂದಾಗ, ಗುಲ್ಬರ್ಗಾದಲ್ಲಿ ಇರಲಿ, ಬೀದರ್‌ನಲ್ಲಿ ಇರಲಿ, ರಾಯಚೂರಿನಲ್ಲಿ ಇರಲಿ, ಬೇರೆ ಕಡೆಯಿಂದ ಹೆಚ್ಚು marks ತೆಗೆದುಕೊಂಡ ಹುಡುಗರೆಲ್ಲಾ ಬಂದು ಅಲ್ಲಿ ನೌಕರಿ ಗಿಟ್ಟಿಸಿಕೊಳ್ಳುವುದಕ್ಕೆ ಶುರು ಮಾಡಿದರು. ಅದರ ವಿರುದ್ಧ ನಾವು ಚಳವಳಿ ಎಬ್ಬಿಸಬೇಕಾಯಿತು. ಕೊನೆಗೆ ಹೀಗಾದರೆ ನಾವು ಬೇರೆ ರಾಜ್ಯ ಕೇಳುತ್ತೇವೆ ಎಂದು ಹೈದರಾಬಾದ್–ಕರ್ನಾಟಕ ಹೋರಾಟ ಸಮಿತಿಯವರು ಚಳವಳಿ ಶುರು ಮಾಡಿದೆವು. ಆಗ ನಮ್ಮ ಅಂದಿನ PWD ಮಂತ್ರಿಗಳು, ಮಾನ್ಯ ಖರ್ಗೆಯವರು, ಮಾನ್ಯ ಎಸ್.ಎಂ. ಕೃಷ್ಣರವರು, ೩೭೧ ಗೆ amendment ಮಾಡಬೇಕಾಗುತ್ತದೆ, district-wise ಮಾಡಲಿಕ್ಕೆ ಬರುವುದಿಲ್ಲ, division-wise ಮಾಡಲಿಕ್ಕೆ ಬರುವುದಿಲ್ಲ, amendment ಮಾಡಬೇಕು ಎಂದರು. ಆಗ ನಾವು amendment ಮಾಡಿರಿ ಎಂದೆವು. ಮಾನ್ಯ ಎಸ್.ಎಂ. ಕೃಷ್ಣರವರು ನೇತೃತ್ವದಲ್ಲಿ ಒಂದು All party delegation ಹೋಯಿತು. ಇವರ ಕಾಲಕ್ಕೂ ಸಹಿತ ಒಂದು ಡೆಲಿಗೇಷನ್ ಹೋಯಿತು. ಮಾನ್ಯ ಧರ್ಮಸಿಂಗ್‌ರವರಿಗೆ ಬಹಳ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕೆಂಬ ಇಚ್ಛೆ ಇತ್ತು. ಅದಕ್ಕೆಂದೇ ಅವರು first day, ಇನ್ನೂ oath ತೆಗೆದುಕೊಂಡಿಲ್ಲ, Legislature Party Leader ಆದ ಕೂಡಲೆ, ಮೊದಲು ಅವರು ಅದನ್ನೇ ಹೇಳಿದರು. ೩೭೧ ಕ್ಕೆ ತಿದ್ದುಪಡಿ ಮಾಡಲು ಒತ್ತಾಯಿಸುತ್ತೇವೆ ಎಂದು ಅವರು ಹೇಳಿದರು.

ಶ್ರೀ ವಾಟಾಳ್ ನಾಗರಾಜ್ :– ಆಗ ಮಾನ್ಯ ಖರ್ಗೆಯವರು ತಮಗೆ ಬೆಂಬಲ ಕೊಟ್ಟರೇ ಎಂಬುದನ್ನು ಹೇಳಬೇಕು. ಆಗ ಅವರು ಏನು ಮಾಡಿದರು ಎಂಬುದನ್ನು ಹೇಳಿ.

(ಗೊಂದಲ)

ಅಧ್ಯಕ್ಷರು :– ಈಗ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಮಾತನಾಡುತ್ತಾರೆ, ಕೇಳಿ.

ಶ್ರೀ ವೈಜನಾಥ ಪಾಟೀಲ್ : ಇಲ್ಲ, ಅವರ ಪಾಲಿಸಿಯನ್ನು ಮುಖ್ಯಮಂತ್ರಿಗಳೇ ಹೇಳಬೇಕಲ್ಲಾ. ಮುಖ್ಯಮಂತ್ರಿಗಳು oath ತೆಗೆದುಕೊಳ್ಳುವುದಕ್ಕಿಂತ ಮುಂಚೆ ಹೇಳಿದರು.

ಡಾಃ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :– ಒಂದು ನಿಮಿಷ ಈಲ್ಡ್ ಆದರೆ ನಾನು ನಿಮ್ಮ ಪರವಾಗಿಯೇ ಮಾತನಾಡುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ೩೭೧ ನೇ ವಿಧಿ ಪ್ರಕಾರ ಕೆಲವು ವಿಶೇಷ ಅವಕಾಶಗಳನ್ನು ಉಪಯೋಗಿಸಿಕೊಂಡು ರಾಜ್ಯದ ಹಿಂದುಳಿದ ಅವರ ಭಾಗದ ಪ್ರದೇಶವಾದ ಹೈದರಾಬಾದ್–ಕರ್ನಾಟಕದ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ಬಹಳ ಚೆನ್ನಾಗಿ ವಾದ ಮಾಡುತ್ತಿದ್ದಾರೆ. ಈ ಸದನದಲ್ಲಿ ಆ ವಿಷಯದಲ್ಲಿ ಯಾರೂ ಅವರ ವಿರುದ್ಧ ಇರಲಿಕ್ಕಿಲ್ಲ. ಆದರೆ, ವಸ್ತುಸ್ಥಿತಿಯನ್ನು ನಾವು ಸ್ವಲ್ಪ

ತಿಳಿದುಕೊಳ್ಳಬೇಕು. ೧೯೫೬ ರಲ್ಲಿ ಮಹಾರಾಷ್ಟ್ರ ಮತ್ತು ಗುಜರಾತ್ ಬಗ್ಗೆ ೩೭೧ ನೇ ವಿಧಿಯ ಅವಕಾಶವನ್ನು ಪ್ರಥಮ ಬಾರಿಗೆ ಉಪಯೋಗಿಸಲಾಯಿತು. ಆನಂತರ, ಇಲ್ಲಿಯವರೆಗೆ ಒಟ್ಟು ೯ ಸಲ ತಿದ್ದುಪಡಿಗಳನ್ನು ಮಾಡಿ ೧೦ ರಾಜ್ಯಗಳಿಗೆ ೧೯೮೭ ರವರೆಗೆ ಅದರ ಉಪಯೋಗವನ್ನು ಮಾಡಿಕೊಟ್ಟರು. ಕಳೆದ ೨೮ ವರ್ಷಗಳಲ್ಲಿ ೩೭೧ ನೇ ವಿಧಿಯ ಉಪಯೋಗವನ್ನು ಮತ್ತು ಯಾವ ರಾಜ್ಯಕ್ಕೂ ಸಂವಿಧಾನ ತಿದ್ದುಪಡಿ ಮಾಡಿ ಮಾಡಲಿಲ್ಲವೆಂಬ ದೃಷ್ಟಿಯಿಂದ ನಾನು ಕೇಳುತ್ತೇನೆ. ಇದರ ಬಗ್ಗೆ ನಾವು ನಿಮ್ಮ ಒಟ್ಟಿಗಿದ್ದೇವೆ ಆದರೆ, ಇದು ರಾಷ್ಟ್ರೀಯ ಅಭಿವೃದ್ಧಿ ಮಂಡಳಿ (National Development Council) ಯಲ್ಲಿ ಸರಿಯಾಗಿ ಹೇಳಲಿಲ್ಲ. ೧೯೮೭ ರ ನಂತರ ಏಕೆ ಇದನ್ನು invoke ಮಾಡಲಿಲ್ಲ ? ಸಂವಿಧಾನಕ್ಕೆ ತಂದ ೭ನೇ ತಿದ್ದುಪಡಿ ಪ್ರಥಮ ಬಾರಿಗೆ ಮಹಾರಾಷ್ಟ್ರ ಮತ್ತು ಗುಜರಾತ್‌ಗೆ ಅನ್ವಯವಾದರೆ ೫೬ ನೇ ತಿದ್ದುಪಡಿ ಗೋವಾಗೆ ೧೯೮೭ ರಲ್ಲಿ ಆಯಿತು. ೧೯೮೭ ರ ನಂತರ ಒಂದು ಕಡೆಯೂ ಆಗಲಿಲ್ಲವೆಂದರೆ, ಕೇಂದ್ರ ಸರ್ಕಾರದ ಮನಸ್ಸಿನಲ್ಲಿ ಏನಿದೆ? ಈಗ ನಮ್ಮ ಸಮ್ಮಿಶ್ರ ಸರ್ಕಾರ ಅಲ್ಲಿ ಆರು ವರ್ಷಗಳ ಕಾಲ ಇತ್ತು, ಆಗಲೂ ಈ ಪ್ರಶ್ನೆ ಬಂದಿತ್ತು. ಇವೊತ್ತು ನಾವು ಇಲ್ಲಿ ಯಥಾರ್ಥ ಜ್ಞಾನವನ್ನು ಇಟ್ಟುಕೊಳ್ಳಬೇಕು. We must have updated information. ಅಷ್ಟೋಕ್ಕೋಸ್ಕರ, ನಾನು ಈ information ಹೇಳುತ್ತಿದ್ದೇನೆ. ಐದು constituents ಸೇರಿ ಕರ್ನಾಟಕ ರಾಜ್ಯ ಆದಾಗ ೧೯೫೬ ರಲ್ಲಿ ಅಂತಹ ಒಂದು ಭರವಸೆಯನ್ನು ತಮಗೆ ಕೊಟ್ಟಿದ್ದರು. ಅದೇ ರೀತಿ ಹೈದರಾಬಾದ್-ತೆಲಂಗಾಣ ಪ್ರದೇಶಕ್ಕೂ ಅವೊತ್ತು ಕೊಟ್ಟಿದ್ದರು. ಆಂಧ್ರದ ಬಗ್ಗೆ ಆಗಿತ್ತು. ೧೯೭೩ ರಲ್ಲಿ ೩೨ ನೇ ಸಲ ಸಂವಿಧಾನಕ್ಕೆ ಆದ ತಿದ್ದುಪಡಿ ಪ್ರಕಾರ ಅದು ಆಗಿತ್ತು. ಆಗ ನಮಗೇಕೆ ಆಗಲಿಲ್ಲಾ? ಅವರದ್ದೇ ಒಂದು ತುಂಡು ನಮಗೆ ಬಂದರೂ, ಅಲ್ಲಿನ ಹಿಂದುಳಿದಿರುವಿಕೆ ಹಾಗೂ ಇತರ ಎಲ್ಲಾ ಮಾಪನಗಳನ್ನೂ ಪರಿಗಣನೆಗೆ ತೆಗೆದುಕೊಂಡು ಇವರೇಕೆ ಮಾಡಲಿಲ್ಲವೆಂದು ನಾವು ಪ್ರಶ್ನೆಯನ್ನು ಕೇಳಲಿಕ್ಕೆ ಸೂಕ್ತ ವೇದಿಕೆ National Development Council ಆಗಿದೆ. ಅಲ್ಲಿ ಇದರ ಬಗ್ಗೆ ನಾವು ಮನದಟ್ಟು ಮಾಡಬಹುದು. ದಯವಿಟ್ಟು ತಾವು ಇತರ ವಿಚಾರಗಳ ಬಗ್ಗೆ ಮಾನ್ಯ ರಾಷ್ಟ್ರಪತಿಯವರು ಮಾಡಿರುವ ಭಾಷಣದ ಬಗ್ಗೆ ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾಹಿತಿ ತಪ್ಪು ಇದೆ, ತಿದ್ದಿಕೊಳ್ಳಿ. ೧೯೭೩ ರಲ್ಲಿ Telangana agitation ಡಾ: ಚೆನ್ನಾರೆಡ್ಡಿಯವರ ನೇತೃತ್ವದಲ್ಲಿ ಆದಾಗ ಅವರು ತೆಲಂಗಾಣವನ್ನು ಸಪರೇಟ್ ಮಾಡಿ ಇಟ್ಟರು. ನಾನು ಹೇಳುವುದನ್ನು ಸ್ವಲ್ಪ ಕೇಳಿ. ನೀವು ಮೂರು ತಿದ್ದುಪಡಿಗಳಾಗಿವೆಯೆಂದು ಹೇಳಿದಿರಲ್ಲಾ. ಬೇಕಿದ್ದರೆ, ಸಂವಿಧಾನವನ್ನು ತೆಗೆದುಕೊಂಡು ನೋಡಿ. More than 9 States have amended including Gujarat. ಅದಕ್ಕೆ . . . .

ಡಾ: ವಿ.ಎಸ್. ಆಚಾರ್ಯ: ೯ ಭಾರಿ ಸಂವಿಧಾನವನ್ನು ತಿದ್ದುಪಡಿ ಮಾಡಿ ೧೦ ರಾಜ್ಯಗಳಿಗೆ ಆ ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ, ಕೊನೆಯ ಬಾರಿ ಗೋವಾಕ್ಕೆ ೧೯೮೭ ರಲ್ಲಿ ೩೭೧ ರಲ್ಲಿ ತಿದ್ದುಪಡಿಗೆ ಅವಕಾಶ ಮಾಡಿಕೊಟ್ಟ ನಂತರ, ಕಳೆದ 28 ವರ್ಷಗಳಲ್ಲಿ ಯಾವುದೇ ರಾಜ್ಯದಿಂದಲೂ ಆ ಕುರಿತಂತೆ ಬೇಡಿಕೆ ಹೋದಾಗ ಅದನ್ನು entertain ಮಾಡಿಲ್ಲ. ಅದರ ಬಗ್ಗೆ ಗಂಭೀರವಾಗಿ ಆ ವೇದಿಕೆಯಲ್ಲೇ ಇದನ್ನು ಎತ್ತಬೇಕೆಂದು ನಿಮ್ಮ ವಾದವನ್ನೇ ನಾನು ಬಲಯುತಗೊಳಿಸಿದ್ದೇನೆ. ಆದರೆ, ನಾವು ಪದೇ ಪದೇ ಇಲ್ಲಿ ಅದರ ಬಗ್ಗೆ ಹೇಳುವುದಾದರೆ, this is not the forum, we cannot amend the Constitution.

ಶ್ರೀ ವೈಜನಾಥ ಪಾಟೀಲ್ : ಸ್ಟೇಟ್ ಅನ್ನು ರೆಪ್ರಸೆಂಟ್ ಮಾಡುವಂಥ ಹೈಯಸ್ಟ್ ಬಾಡಿ ಇದಾಗಿರುವುದರಿಂದ ನಾವು ಇದರ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಪ್ರೆಷರ್ ಹಾಕಬೇಕಾಗುತ್ತದೆ. ಕೇಂದ್ರ ಸರ್ಕಾರವೆಂದರೆ ಆಕಾಶದಿಂದ ಬಿದ್ದಿದ್ದಲ್ಲ. ನಮ್ಮ ಭಾಗದಿಂದ ಸಂಸದರನ್ನು ಜನರು ಆಯ್ಕೆ ಮಾಡಿ ಸಂಸತ್‌ಗೆ ಕಳುಹಿಸಿದ್ದಾರೆ. ಆಗ ೧೯೭೩ ರಲ್ಲಿ ಏಕೆ ಆಗಲಿಲ್ಲವೆಂದರೆ, ಆಗ ಯಾರೂ ಕೇಳಲಿಲ್ಲ. ಆಗ ಬಹುಶಃ ಕರ್ನಾಟಕದಿಂದ ಸಂಸತ್‌ಗೆ ಆರಿಸಿ ಹೋಗಿದ್ದರೆ, ಜನರಿಗೆ ಅಷ್ಟೇ ಸಾಕಾಗಿತ್ತು ಅಥವಾ ಆ ಕಾಲಕ್ಕೆ ಯಾರಿಗೂ ಇದರ ಬಗ್ಗೆ ಗೊತ್ತಿರಲಿಲ್ಲ. ಅವರು ಬಿಟ್ಟಿದ್ದಾರೆಂದರೆ, ಇದನ್ನು ಪರ್ಮನೆಂಟ್ ಆಗಿ ಬಿಟ್ಟು ಬಿಡಬೇಕೇ ? ಇವೊತ್ತು ನಮಗೆ ಆ ವಿಷಯಗಳು ಗೊತ್ತಾಗಿದೆ. ಅದರ ಬಗ್ಗೆ ಇವೊತ್ತು ನಮಗೆ knowledge ಬಂದಿದೆ. ಮತ್ತು ಇವೊತ್ತು ಕೂಡ ಪರಿಸ್ಥಿತಿ ಬದಲಾವಣೆಯಾಗಿಲ್ಲ. ಒಂದು ವೇಳೆ ಪರಿಸ್ಥಿತಿ ಬದಲಾವಣೆಯಾಗಿ ಆ ಭಾಗ ಬಹಳಷ್ಟು ಡೆವಲಪ್‌ಮೆಂಟ್ ಆಗುತ್ತಿತ್ತು ಎಂದರೆ, ನಾವು ಕೇಳುತ್ತಿರಲಿಲ್ಲ. ಆರ್ಟಿಕಲ್ ೩೭೧ ರ ಪ್ರಾವಿಜನ್ ಪರ್ಮನೆಂಟಾಗಿ ಕೊಡುವುದು ಅಲ್ಲಿಲ್ಲ. ಮೊದಲು Constitution ಹತ್ತು ವರ್ಷಗಳ ಸಲುವಾಗಿ ಇತ್ತು ಆದರೆ, ತೆಲಂಗಾಣವನ್ನು ಮಾಡಿದ ಮೇಲೆ ಇವೊತ್ತು ಮಿಜೋರಾಂ, ಅಸ್ಸಾಂ ಹೀಗೆ ಬಹಳಷ್ಟು ರಾಜ್ಯಗಳಿಗೆ ಕೊಟ್ಟಿದ್ದಾರೆ. ಆದರೆ, ಬೇರೆ ಕಾರಣಗಳಿಗಾಗಿ ಕೊಟ್ಟಿದ್ದು ಇದೆ.

ಅಧ್ಯಕ್ಷರು : ವೈಜನಾಥ್ ಪಾಟೀಲ್‌ರವರೆ, ದಯಮಾಡಿ ಮುಗಿಸಿ. ತಾವು ಈ ವಿಷಯವನ್ನು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಪ್ರಸ್ತಾಪಿಸಬೇಕೆಂದು ಸಚಿವರು ಹೇಳಿದ್ದಾರೆ. ನೀವು ಮತ್ತೆ ಮತ್ತೆ ಪ್ರಸ್ತಾಪಿಸುತ್ತಿದ್ದರೆ, ಹೇಗೆ ? ಇನ್ನು ಬೇರೆ ಸದಸ್ಯರುಗಳು ಮಾತನಾಡುವವರಿದ್ದಾರೆ. ನೀವೇ ಹೀಗೆ ಮಾಡಿದರೆ ಹೇಗೆ ? ಇದರ ಬಗ್ಗೆ ಗಂಟೆಗಟ್ಟಳೆ ಮಾತನಾಡಬಹುದು ಮತ್ತು ನಿಮ್ಮ ಹತ್ತಿರ ಮೆಟೀರಿಯಲ್ಸ್ ಇರಬಹುದು. ಆದರೆ, ಬೇರೆ ಸದಸ್ಯರು ಮಾತನಾಡಬೇಕಲ್ಲ. ಹಿರಿಯ ಸದಸ್ಯರಾದ ತಾವು ಈ ರೀತಿ ಮಾತನಾಡಬಾರದು. ನಿಮಗೆ ಎಷ್ಟು ಹೇಳಿದರೂ ಕೇಳುವುದಿಲ್ಲ. ಸುಮ್ಮನೆ ಮಾತನಾಡುತ್ತಾ ನಿಂತುಬಿಟ್ಟರೆ. . . No, No, ಹೀಗಾದರೆ ನಾವೇನು ಮಾಡುವುದು ?

ಶ್ರೀ ವೈಜನಾಥ ಪಾಟೀಲ್ : ಒಂದು ಭಾಗಕ್ಕೆ ಒಂದು ಕಾನೂನಾದರೆ, ಮತ್ತೊಂದು ಭಾಗಕ್ಕೆ ಮತ್ತೊಂದು ಕಾನೂನೇ ?

(**ಗೊಂದಲ**)

ಅಧ್ಯಕ್ಷರು :- ಎಷ್ಟು ಹೇಳಿದರೂ ಅವರು ಕೇಳುತ್ತಿಲ್ಲವಲ್ಲಾ ?

ಶ್ರೀ ವೈಜನಾಥ ಪಾಟೀಲ್:.... ಆ ದೃಷ್ಟಿಯಿಂದ ನಾಗಲ್ಯಾಂಡ್ ಅನ್ನು ೩೭೧ನೇ ಅನುಚ್ಛೇದದ ಅಡಿಯಲ್ಲಿ ತೆಗೆದುಕೊಂಡಿದ್ದಾರೆ. ಏಕೆ ತೆಗೆದುಕೊಂಡಿದ್ದಾರೆಂದರೆ, ಅಲ್ಲಿ ಪ್ರತಿಯೊಂದು tribesನ ನಡೆ-ನುಡಿಗಳು ಬೇರೆ ರೀತಿಯಾಗಿವೆ. ಇಡೀ ರಾಜ್ಯಕ್ಕೆ ಒಂದೇ ಕಾನೂನು ಮಾಡುವುದೆಂದರೆ interfere ಆಗುತ್ತದೆಂಬ ದೃಷ್ಟಿಯಿಂದ ಅಲ್ಲಿ ಬೇರೆ ಬೇರೆ tribal area ಗಳಿದ್ದು ಬೇರೆ ಬೇರೆ traditions ಇದ್ದ ಸಲುವಾಗಿ ಆ ಅವಕಾಶವನ್ನು ನಾಗಲ್ಯಾಂಡ್‌ಗೆ ಕೊಟ್ಟರು. ೩೭೧ ರಲ್ಲಿ ತೆಗೆದುಕೊಂಡಿದ್ದು ಮಹಾರಾಷ್ಟ್ರದಲ್ಲಿ ಡೆವಲಪ್‌ಮೆಂಟ್ ಬೋರ್ಡ್ಸ್ ಮಾಡುವ ಸಲುವಾಗಿ ಏನು ಅಮೆಂಡ್‌ಮೆಂಟ್ ತೆಗೆದುಕೊಂಡಿದ್ದರು, ಆಂಧ್ರದಲ್ಲಿ ಹಿಂದುಳಿದಂತಹವರಿಗೆ employment and admissions to professional courses ಗೆ ಪ್ರೊಟೆಕ್ಷನ್ ಸಿಗಬೇಕೆಂಬ ಸಲುವಾಗಿ

ತೆಗೆದುಕೊಂಡಂತಾದ್ದು. ೩೭೧ ಎಂದರೆ, protection from the interference by these Courts. ಕೋರ್ಟ್ ಇಂಟರ್‌ಫಿಯರ್ ಮಾಡಬಾರದು. ಯಾವ ರಾಜ್ಯವನ್ನು ೩೭೧ ರಲ್ಲಿ ತೆಗೆದುಕೊಳ್ಳುತ್ತಾರೋ, ಆ ರಾಜ್ಯಗಳಿಗೆ ಕಾನೂನುಗಳನ್ನು ಮಾಡಿ ಕೋರ್ಟ್‌ಗಳು ಇಂಟರ್‌ಫಿಯರ್ ಮಾಡಬಾರದೆಂದು ಮಾಡಿತ್ತು. ಅವೊತ್ತು ಆಂಧ್ರದಲ್ಲಿ Telangana Movement ಆದಾಗ ಸುಪ್ರಿಂಕೋರ್ಟ್ ಜಡ್ಜ್‌ಮೆಂಟ್ ಆಯಿತು. ಆ ಜಡ್ಜ್‌ಮೆಂಟ್ ಲಾಗೂ ಆಗುವ ಸಲುವಾಗಿ, ಇಂಪ್ಲಿಮೆಂಟ್ ಮಾಡುವ ಸಲುವಾಗಿ ೩೭೧ ಅನ್ನು ತೆಗೆದುಕೊಂಡರು. ಒಂದು ಕಡೆ separate Telengana Movement ನಡೆದಿದ್ದರೆ, ಮತ್ತೊಂದು ಕಡೆ ಸುಪ್ರಿಂಕೋರ್ಟ್ ಜಡ್ಜ್‌ಮೆಂಟ್ ಇತ್ತು. ಅದು ಆರ್ಟಿಕಲ್ ೧೪ ಅಥವಾ ೩೨ ಅದ್ಯಾವುದೂ ಕನ್ಸಿಡರೇಶನ್‌ನಲ್ಲಿ ಇರಲಿಲ್ಲ. Mulki rules are valid ಎಂದು ಸುಪ್ರಿಂಕೋರ್ಟ್ ಜಡ್ಜ್‌ಮೆಂಟ್ ಕೊಟ್ಟ ನಂತರ ಅಮೆಂಡ್‌ಮೆಂಟ್ಸ್ ಆಗಿ ಆ ರಾಜ್ಯಕ್ಕೆ ೩೭೧ ರಲ್ಲಿ.

ಅಧ್ಯಕ್ಷರು: ಸ್ವಾಮಿ, ನಿಲ್ಲಿಸಿ. ಬೇರೆ ಸದಸ್ಯರುಗಳಿಗೆ ಮಾತನಾಡಲು ಅವಕಾಶ ಮಾಡಿಕೊಡಿ.

ಶ್ರೀ ವೈಜನಾಥ ಪಾಟೀಲ್ : ಒಂದು ನಿಮಿಷ ಕೇಲಿ. ಇವೊತ್ತು ಈ ಬೇಡಿಕೆ ಏಕೆ ಇದೆಯೆಂದು ಹೇಳಿ ಐದು ನಿಮಿಷದಲ್ಲಿ ಮುಗಿಸುತ್ತೇನೆ. ೧೯೯೮ ರಲ್ಲಿ ಕರ್ನಾಟಕದ ಉಚ್ಚ ನ್ಯಾಯಾಲಯದಿಂದ ಒಂದು ಜಡ್ಜ್‌ಮೆಂಟ್ ಆಯಿತು. ಆ ಜಡ್ಜ್‌ಮೆಂಟ್ ಪ್ರಕಾರ ಏನು ಇದೆಯೆಂದರೆ, ಅದರ interpretation ತಪ್ಪು ಎಂದು ಹೇಳಿ ಸುಪ್ರಿಂಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ರೆಫರ್ ಮಾಡಿ ಹೈಕೋರ್ಟ್‌ನಲ್ಲಿ ಜಡ್ಜ್‌ಮೆಂಟ್ ಕೊಟ್ಟರು. ಅದರ interpretation wrong ಎಂದು ಎಲ್ಲಾ ಕಡೆಗಳಿಗೂ ಆರ್ಡರ್ ಕಳುಹಿಸಿದರು. ಮುಂದೆ Employment Office ಗೆ ಯಾರೂ ಹೋಗುವ ಅವಶ್ಯಕತೆಯಿಲ್ಲ, ಯಾವುದೇ ಸರ್ಕಾರಿ ನೌಕರಿಗಳಿಗೆ direct recruitment ಮೂಲಕ ಅಪ್ಲಿಕೇಶನ್ಸ್ ಹಾಕಬಹುದೆಂದು ಪತ್ರಿಕೆಗಳಲ್ಲಿ advertisement ಕೊಟ್ಟರು. ಕರ್ನಾಟಕ ಸರ್ಕಾರದಿಂದ ಒಂದು ಹೊಸ ಸರ್ಕ್ಯುಲರ್ ಬಂತು. ಅದು ಬಂದ ನಂತರ ಎಲ್ಲಾ ಕಡೆಗಳಿಂದಲೂ ಅಲ್ಲಿ flop ಆಗುತ್ತದೆ. ನಮ್ಮಲ್ಲಿಗೆ ಟೀಚರ್ಸ್ ಬೇರೆ ಕಡೆಯಿಂದ ಬರುತ್ತಾರೆ, ಅಲ್ಲಿ ಯಾರೂ ಇರುವುದಿಲ್ಲ. ಅವರು ಅಲ್ಲಿ ಇದ್ದರೆ ಪರವಾಗಿಲ್ಲ. ಆದರೆ, ಟ್ರಾನ್ಸ್‌ಫರ್ ಮಾಡಿಸಿಕೊಂಡು ಹೋಗುತ್ತಾರೆ. ಶಾಲೆಗಳಲ್ಲಿ ಅಧ್ಯಾಪಕರಿಲ್ಲದೆ ಖಾಲಿ ಬೀಳುತ್ತಿರುತ್ತವೆ. ಹೈಸ್ಕೂಲು ಮತ್ತು ಜ್ಯೂನಿಯರ್ ಕಾಲೇಜುಗಳಲ್ಲಿ ಪ್ರಿನ್ಸಿಪಾಲ್‌ಗಳು ಇರುವುದಿಲ್ಲ. ನಮ್ಮ ಭಾಗದಲ್ಲಿ ಅದಕ್ಕೆ ವಿಶೇಷವಾಗಿ physics, mathematics ಇಂತಹ subjects ಗೆ ಯಾರೂ ಬರುವುದಿಲ್ಲ. ಏಕೆಂದರೆ, State Level Merit ಮೇಲೆ selection ಆಗಿ ಆ ಕಡೆ ಬರುವವರು ಟ್ರಾನ್ಸ್‌ಫರ್ ಮಾಡಿಸಿಕೊಂಡು ವಾಪಸ್ಸು ಹೋಗುತ್ತಾರೆ. ಈ ರೀತಿ ಎಜ್ಯುಕೇಶನ್‌ನಲ್ಲಿ ಹಿಂದಿರುವಾಗ ಇನ್ನು ಹೇಗೆ ಮುಂದೆ ಬರುತ್ತದೆ ? ಲೋಕಲ್‌ನವರಿಗೆ ಅವಕಾಶ ಕೊಡದಿದ್ದರೆ, ಮತ್ತೆ ಬೇರೆ ಕಡೆಗಳಿಂದ ಬರುತ್ತಾರೆ. ಹೈಕೋರ್ಟ್ ಜಡ್ಜ್‌ಮೆಂಟ್ ಏನಿದೆ, ಅದನ್ನು ತಪ್ಪು interpretation ಮಾಡಿ ಸರ್ಕ್ಯುಲರ್ ಕೊಟ್ಟಿದ್ದಾರೆಂದು ನಾನು ಮುಖ್ಯಮಂತ್ರಿಯವರಿಗೆ ಹೇಳಿದೆ. ಇಂಟರ್‌ಪ್ರಿಟೇಶನ್ ತಪ್ಪಾಗಿದೆ, ಒಂದು ಸಲ ಮೀಟಿಂಗ್ ಕರೆಯಿರಿ ಎಂದು ಹೇಳಿದೆ. ಸುಪ್ರಿಂಕೋರ್ಟ್ ಹಾಗೆ ಜಡ್ಜ್‌ಮೆಂಟ್ ಕೊಟ್ಟಿಲ್ಲ. ಸುಪ್ರಿಂಕೋರ್ಟ್ Employment Officer ಅನ್ನು ಮ್ಯಾಂಡೇಟರಿ ಎಂದು ಹೇಳಿದೆ. ಇವೊತ್ತು ಮಹಾರಾಷ್ಟ್ರದಲ್ಲಿ Employment Officer ಇದೆ District Employment Office ಇದೆ. ಡಾಃ ಸರೋಜಿನಿ ಮಹಿಷಿ

ವರದಿಯಲ್ಲೂ ಸಹ ತಾಲ್ಲೂಕು ಮಟ್ಟದಲ್ಲಿ Employment Office ಗಳನ್ನು ತೆರೆಯಬೇಕೆಂದು ಹೇಳಿದ್ದಾರೆ. ಲೋಕಲ್‌ನವರಿಗೆ ಏನು ಮಾಡುತ್ತೀರಿ ? ಆದರೆ ದುರ್ದೈವದಿಂದ ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಆಫೀಸ್ ತೆಗೆದು ಎಲ್ಲಾ ಕಡೆ ಬಂದ್ ಮಾಡಿ, ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡಿ, ಅದರಲ್ಲಿ ಯಾರು ಹೋಗುತ್ತಾರೆ. ಎಂದರೆ ಸಫಾಯಿ ಕಾಮಗಾರಿಗೆ ಕಾಶ್ಮೀರದವರು ಮತ್ತು ಬಿಹಾರದವರು ಎಲ್ಲಾ ಹೊರಟಿದ್ದಾರೆ. ಒಂದು ಪೇಪರ್‌ನಲ್ಲಿ ಅಡ್ವರ್ಟೈಸ್‌ಮೆಂಟ್ ಕೊಡುತ್ತಾರೆ, ಯಾವ ಯಾವ ಆಫೀಸ್ ಬಿಹಾರದಲ್ಲಿ ಇವೆ ಆ ಆಫೀಸ್‌ಗಳಿಗೆ ಬಿಹಾರದವರಿಗೆ ತುಂಬುತ್ತಾರೆ. ರಾಜಸ್ಥಾನದವರು ಅವರಿಗೆ ತಂದು ತುಂಬುತ್ತಾರೆ. ಮದ್ರಾಸ್‌ನವರಂತೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ ವಿಧಾನ ಸಭೆ ನೌಕರಿಯಲ್ಲಿ ನಮ್ಮ ಜಿಲ್ಲೆಯವರಿಗೆ ಸೆಲೆಕ್ಷನ್ ಆದರೆ ಅದನ್ನು ಕ್ಯಾನ್ಸಲ್ ಮಾಡುತ್ತಾರೆ. ಅದಕ್ಕೆ ಏನೋ ಒಂದು ಕಾರಣಕೊಡುತ್ತಾರೆ. ಆರ್ಟಿಕಲ್ ೩೭೧ ಎಂದರೆ ಬರೀ ಹೈದರಾಬಾದ್ ಕರ್ನಾಟಕ ಅಲ್ಲ. ಇದು ಇಡೀ ಕರ್ನಾಟಕಕ್ಕೆ ಅನ್ವಯವಾಗುತ್ತದೆ. ನೀವು ಡಿಸ್ಟ್ರಿಕ್ಟ್‌ವೈಸ್ ಸೆಲೆಕ್ಷನ್ ಪ್ರಾರಂಭ ಮಾಡಿದರೆ ಹೊರಗಿನಿಂದ ಬರುವವರು ಕಡಿಮೆ ಆಗುತ್ತಾರೆ. ವಿಶೇಷವಾಗಿ ತಮಿಳುನಾಡು ಮತ್ತು ಆಂಧ್ರಪ್ರದೇಶದವರು. ಅದನ್ನು ಚೆಕ್ ಮಾಡಬೇಕಾಗುತ್ತದೆ. ಬರೀ ಹೈದರಾಬಾದ್ ಕರ್ನಾಟಕದವರು ಅಲ್ಲ, ಹೊರಗಿನವರು ಬಹಳ ಜನ ಬರುತ್ತಾರೆ. ಲೋಕಲ್ ಅಪಾಯಿಂಟ್‌ಮೆಂಟ್ಸ್ ಆದ ನಂತರ ಐಡೆಂಟಿಫೈ ಮಾಡಬಹುದು. ಇವನದ್ದು ಯಾರು ಊರು, ಅವನದ್ದು ಯಾವ ಊರು ಎಂದು ಹೇಳಬಹುದು. ಇವತ್ತು ಅದು ಏನೂ ಇಲ್ಲ. ಯಾರೀ ಇಲ್ಲಿ ಒಬ್ಬ ಕಾರ್ಪೊರೇಟರ್‌ಗೆ ಹಿಡಿದು ಒಂದು ಸರ್ಟಿಫಿಕೇಟ್ ತೆಗೆದುಕೊಂಡು ಬಂದು ಅಪ್ಲಿಕೇಷನ್ ಹಾಕುವುದು. ಹೊರಗಿನವರು ಮದ್ರಾಸ್‌ನವರು ಬಹಳ ಜನ ಬರುತ್ತಾರೆ. ಬೆಂಗಳೂರನ್ನು ಉಳಿಸಬೇಕಾದರೆ ಆರ್ಟಿಕಲ್ ೩೭೧ ಹಿಂದೆ ನೀವು ಉಳಿಸಬಹುದು. ಹೊರಗಿನವರು ಬಹಳ ಜನ ಇದ್ದಾರೆ. ನಾನು ಇದನ್ನು ಹೈದರಾಬಾದ್ ಕರ್ನಾಟಕದ ಸಲುವಾಗಿ ಕೇಳುತ್ತಿಲ್ಲ ಇಡೀ ರಾಜ್ಯದ ಸಲುವಾಗಿ ಕೇಳುತ್ತಿದ್ದೇನೆ. ೧೯೯೫ ರಲ್ಲಿ ಐಎಎಸ್ ಆಫೀಸರ್ಸ್ ಏನು ಸರ್ಕ್ಯುಲರ್ ಹೊರಡಿಸಿದರು ಅದರಿಂದ ರಾಂಗ್ ಇಂಟರ್‌ಪ್ರಿಟೇಷನ್ ಮಾಡಿ, ಒಂದು ವಿಪನ್ ಫ್ಲಡ್ ಗೇಟ್ ಓಪನ್ ಮಾಡಿದ್ದಾರೆ ಆ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದು ನಿಮ್ಮ ಕಮಿಷನರ್‌ಗೆ ಪತ್ರ ಬರೆದಿದ್ದೆ. ಆದರೆ ಅವರಿಗೆ ಅಡ್ವೈಸರ್ಸ್ ಎಲ್ಲಾ ಇದ್ದಾರೆ. ಏನು ಮಾಡುವುದು ? ಆ ದೃಷ್ಟಿಯಿಂದ...

ಅಧ್ಯಕ್ಷರು : ಇನ್ನೂ ಅನೇಕ ಜನ ಮಾತನಾಡುವವರು ಇದ್ದಾರೆ ವೈಜನಾಥ್ ಪಾಟೀಲರೆ, ಬೇಗ ಮುಗಿಸಿ. ದಯಮಾಡಿ ಸಹಕರಿಸಿ.

ಶ್ರೀ ವೈಜನಾಥ್ ಪಾಟೀಲ್ : ಆದ್ದರಿಂದ ಇಂಟರ್‌ಪ್ರಿಟೇಷನ್ ಆಗಿರುವುದಕ್ಕೆ ಹೊಸ ಸರ್ಕ್ಯುಲರ್ ತರಬೇಕು. ಅದನ್ನಾದರೂ ಮಾಡಬೇಕು. ೩೭೧ ಆಂಧ್ರದವರಿಗೆ ಕೊಟ್ಟಿರಿ. ಏಕೆಂದರೆ, ಮಾನ್ಯ ರಾಷ್ಟ್ರಪತಿ ಭಾಷಣದಲ್ಲಿ ಆರ್ಟಿಕಲ್ ೩೭೧ ರ ಬಗ್ಗೆ ಒಂದು ಶಬ್ದ ಇಲ್ಲ. ಇದೆಂತಹ ಸುವರ್ಣ ಕರ್ನಾಟಕ ಇದು ಸುವರ್ಣ ಕರ್ನಾಟಕ ಅಲ್ಲ, ಇದು ಕಪ್ಪು ಕರ್ನಾಟಕ. ಎಲ್ಲಾ ಹೊರಗಿನವರು ಬಂದು ಸೇರಿಕೊಳ್ಳುತ್ತಾರೆ. ಐಎಎಸ್ ಅಧಿಕಾರಿಗಳು ಹೊರಗಿನವರು ಕರ್ನಾಟಕದಲ್ಲಿ ಎಷ್ಟಿದ್ದಾರೆ ಅಷ್ಟು ಬೇರೆ ಎಲ್ಲಿಯೂ ಇಲ್ಲ. ಅವರು ಬರುವ ಸಮಯದಲ್ಲಿ ಅವರ ಕಡೆಯವರನ್ನೇ ತೆಗೆದುಕೊಂಡು ಬರುತ್ತಾರೆ. ನಮ್ಮ ಕರ್ನಾಟಕದ ಬೆಂಗಳೂರಿನವರಿಗೆ ಕೆಲಸ ಸಿಗುವುದಿಲ್ಲ, ಹಾಸನದವರಿಗೆ ಸಿಗುವುದಿಲ್ಲ, ಮತ್ತು ಮಂಡ್ಯದವರಿಗೂ ಸಿಗುವುದಿಲ್ಲ, ಇದು ಅರ್ಥವಾಗುತ್ತಿಲ್ಲ. ವಿಶೇಷವಾಗಿ ಬೆಂಗಳೂರಿಗೆ

ಹೊರಗಿನವರು ಬಹಳ ಬರುತ್ತಿದ್ದಾರೆ. ಇದಕ್ಕೆ ಅಮೆಂಡ್‌ಮೆಂಟ್ ಮಾಡಿ ಲೋಕಲ್ ಸೆಲೆಕ್ಷನ್, ಲೋಕಲ್ ಅಪಾಯಿಂಟ್‌ಮೆಂಟ್ಸ್ ಆದಾಗ ಅವರಿಗೆ ಚೆಕ್ ಮಾಡಬಹುದು. ಅದನ್ನು ಚೆಕ್ ಮಾಡುವುದಕ್ಕೆ ಯಾವುದೇ ಸರ್ಕಾರ ತಯಾರಿಲ್ಲ. ಕಾನೂನು ಕಾರ್ಯದರ್ಶಿಯವರಿಗೆ ಕರೆದು ಒಂದು ಮೀಟಿಂಗ್ ಮಾಡಿ ಎಂದರೆ ನಮ್ಮ ಹಿಂದಿನ ಮುಖ್ಯ ಮಂತ್ರಿಗಳು ಕರೆಯಲಿಲ್ಲ. ಕೇಂದ್ರ ಸರ್ಕಾರದವರು ಈಗ ಏನೂ ಮಾತನಾಡುತ್ತಿಲ್ಲ. ಅವರು ಈಗ ಬಾಯಿ ಬಂದ್ ಮಾಡಿದ್ದಾರೆ.

ಶ್ರೀ ಸಿ.ಟಿ. ರವಿ : ಯಾವುದಾದರೂ ಒಂದು ವಿಶೇಷ ಸಂದರ್ಭದಲ್ಲಿ ಅವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಿ. ನೀವು ಇಡೀ ಸದನದ ಸಮಯವನ್ನು ಈ ರೀತಿ ಹಾಳು ಮಾಡಿದರೆ ಹೇಗೆ ? ಯಾವುದಾದರೂ ಒಂದು ವಿಶೇಷ ಅಧಿಕಾರ ಬಳಸಿ ಯಾವುದಾದರೂ ಒಂದು ಕೊಠಡಿಯಲ್ಲಿ ಮಾತನಾಡುವುದಕ್ಕೆ ಅವರಿಗೆ ಒಂದು ಅವಕಾಶ ಮಾಡಿ ಕೊಡಿ.

ಶ್ರೀ ವೈಜನಾಥ್ ಪಾಟೀಲ್ : ಮಲತಾಯಿ ಧೋರಣೆ ಬಗ್ಗೆ ನಮ್ಮ ಮೇಲೆ ಅನ್ಯಾಯವಾದಾಗ ಕೆಲವು ಸಾರಿ ನಾವು ಧ್ವನಿ ಎತ್ತ ಬೇಕಾಗುತ್ತದೆ, ಪ್ರೊಟೆಸ್ಟ್ ಮಾಡಬೇಕಾಗುತ್ತದೆ. ಪ್ರತ್ಯೇಕ ರಾಜ್ಯ ಕೇಳಬೇಕಾಗುತ್ತದೆ. ಯಾವ ಕಾರಣಕ್ಕೆ ಇಷ್ಟೆಲ್ಲಾ ಅನ್ಯಾಯವಾದರೂ ಸುಮ್ಮನೆ ಕೂರಿ ಅಂದರೆ ನಾವೇನು ಗುಲಾಮರಾ? ಹೋಮ್ ಮಿನಿಸ್ಟರ್ ಶಿವರಾಜ್ ಪಾಟೀಲರು ಹೇಳಿದರು ಎಂದು ಅವರ ಹೋಮ್ ಸೆಕ್ರೆಟರಿ ಬರೆಯುತ್ತಾರೆ, ಹೋಮ್ ಸೆಕ್ರೆಟರಿಯವರು ಹೀಗಾಯಿತು ಎಂದು ಹೇಳಿದ್ದಕ್ಕೆ ಏನೋ ಒಪೀನಿಯನ್ ಹೇಳಿದ್ದಾರೆ. ನಮಗೆ ಜನ ಆರಿಸಿ ಕಳುಹಿಸಿರುವುದು ಹೋಮ್ ಸೆಕ್ರೆಟರಿ ಮಾತು ಕೇಳುವುದಕ್ಕೆ ಅಲ್ಲ. ಜನರ ಕೆಲಸ ಮಾಡುವುದಕ್ಕೆ ಆರಿಸಿ ಕಳುಹಿಸಿದ್ದಾರೆ. ಬರೇ ಐಎಎಸ್ ಆಫೀಸರ್ಸ್ ಮಾತು ಪಾಲನೆ ಮಾಡುವುದಕ್ಕೆ ನಮಗೆ ಆರಿಸಿ ಕಳುಹಿಸಿಲ್ಲ. ಹೊಮ್ ಸೆಕ್ರೆಟರಿ ಹೇಳಿದಂತೆ ಶಿವರಾಜ್ ಪಾಟೀಲರು ಲೆಟರ್ ಬರೆದರು. ಪ್ರತಿಯೊಂದರಲ್ಲಿಯೂ, ನೀರಾವರಿ ಯೋಜನೆ ಬಗ್ಗೆಯೂ ಹೇಳಿದ್ದಾರೆ ನಮ್ಮ ಭಾಷಾವಾರು ಪ್ರಾಂತ್ಯ ರಚನೆ ಆಗುವ ಕಾಲಕ್ಕೆ ಸ್ಟೇಟ್ ರೀ ಆರ್ಗನೈಸೇಷನ್ ಕಮಿಷನ್‌ನಲ್ಲಿಲ್ಲ ಸ್ಪಷ್ಟವಾಗಿ ಹೇಳಲಾಗಿದೆ. ತುಂಗಭದ್ರೆಯ ಉತ್ತರದಲ್ಲಿರುವ ಎಲ್ಲಾ ನೀರಾವರಿ ಯೋಜನೆಗಳು ಆದ್ಯತೆ ಮೇರೆಗೆ ಪೂರ್ಣಗೊಳಿಸಬೇಕು ಎಂದು. ಆದರೆ ಅದು ಪೂರ್ಣ ಆಗಲಿಲ್ಲ. ಅಲ್ಲಿದ್ದದ್ದು ಪ್ಲಾನ್ಡ್ ಬಜೆಟ್ ಅಲ್ಲ. ಎಲ್ಲಾ ಯಾರೋ ಅಂತಿಂಥ ಆಫೀಸರ್ ಅಲ್ಲ ಎಲ್ಲಾ ಬೆಂಗಳೂರಿನಲ್ಲಿ ಕೂತಿರುವವರೇ ಇಂಜಿನಿಯರ್ಸ್ ಇರುತ್ತಾರೆ. ಯು.ಕೆ.ಪಿ. ಯಲ್ಲಿಯಂತೂ ಯಾರೂ ಇಲ್ಲ. ಬರೀ ಫಸ್ಟ್‌ಗೆ ಸಂಬಳ ತೆಗೆದುಕೊಳ್ಳುವುದಕ್ಕೆ ಬರುತ್ತಾರೆ, ಇಲ್ಲ ಕಮಿಷನ್ ತೆಗೆದುಕೊಳ್ಳುವುದಕ್ಕೆ ಬರುತ್ತಾರೆ. ಇನ್ನು ಯಾರೂ ಇರುವುದಿಲ್ಲ. ಎಲ್ಲಾ ಇಲ್ಲಿಯೇ ಬೆಂಗಳೂರಿನಲ್ಲಿ ಇರುತ್ತಾರೆ. ಅವರು ಬಂದು ಹೋಗಿ ಬಿಡುತ್ತಾರೆ. ಇನ್ನು ಆ ನೀರಾವರಿ ಯೋಜನೆಗಳು ಹೇಗೆ ಕಂಪ್ಲೀಟ್ ಆಗಬೇಕು ? ಉಳಿದ ಬಜೆಟ್ ಏನು ಇರುತ್ತದೆ ಮಾರ್ಚ್‌ನಲ್ಲಿ ನಾನ್ ಪ್ಲಾನ್‌ನಲ್ಲಿ ಮಾಡೋಣ ಎಂದು ಇರುತ್ತಾರೆ. ಹಾರಂಗಿ ಹೇಮಾವತಿಗೆ ತಂದು ಹಾಕುತ್ತಾರೆ. ಹೀಗಾಗಿ ಅವರ ವರ್ಕ್ ಕಂಪ್ಲೀಟ್ ಆಗಿದೆ, ನಮ್ಮ ವರ್ಕ್ ಕಂಪ್ಲೀಟ್ ಆಗಿಲ್ಲ. ಪ್ಲಾನ್‌ನಲ್ಲಿ ಹಾಕಿ ಕೊಡುವುದಿಲ್ಲ, ನಾನ್ ಪ್ಲಾನ್‌ನಲ್ಲಿ ಅದು ಉಳಿದು ಬಿದ್ದಿತ್ತು ಮಾಡಿದೆವು ಎಂದು ಹೇಳುತ್ತಾರೆ. ಇದು ರೆಕಾರ್ಡ್ ಇದೆ. ಹೀಗಾಗಿ ನಮ್ಮ ಮೇಲೆ ಅನ್ಯಾಯವಾಗಿದೆ. ಕಾವೇರಿ ಟ್ರಿಬ್ಯುನಲ್‌ನವರು ಏನೋ ಒಂದು ಇಂಟರೀಮ್ ಆರ್ಡರ್ ಕೊಟ್ಟರು. ಆ ಇಂಟರೀಮ್ ಆರ್ಡರ್ ಕೊಟ್ಟರೆ ಬಂಗಾರಪ್ಪನವರ ಕಾಲದಲ್ಲಿ ಇಡೀ ಕರ್ನಾಟಕ ಬಂದ್ ಮಾಡಿದರು ನಾವೆಲ್ಲಾ ಆ ಬಂದ್‌ನಲ್ಲಿ ಭಾಗವಹಿಸಿದ್ದೆವು. ಅವರದ್ದೇ ಸರ್ಕಾರದ ಪ್ರಧಾನ ಮಂತ್ರಿ ಮಾನ್ಯ

ನರಸಿಂಹರಾವ್ ರವರು ಇದ್ದರು. ಅದಕ್ಕೆ ಒಂದು ಆರ್ಡಿನೆನ್ಸ್ ತೆಗೆದರು. ಅದರಲ್ಲಿ ನಾವು ಷರೀಕ್ ಆದೆವು. ಏಕೆಂದರೆ, ಕಾವೇರಿ ನಮ್ಮದೇ, ಕೃಷ್ಣ ನಮ್ಮದೇ ಎಂದು ನಾವು ಆಗ ವಾದ ಮಾಡಿದೆವು. ಆದರೆ ಕೃಷ್ಣ ಟ್ರಿಬ್ಯುನಲ್‌ನವರು ಅನ್ಯಾಯ ಮಾಡಿದಾಗ ಅಥವಾ ಆಲಮಟ್ಟಿಯಲ್ಲಿ ನಮಗೆ ಅನ್ಯಾಯವಾದಾಗ, ಕೋರ್ಟ್‌ಗೆ ಹೋದೆವು.

ಡಾ: ಎಂ.ಸಿ. ಸುಧಾಕರ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಬರೀ ಕಾವೇರಿ ಕೃಷ್ಣಾ ಬಿಟ್ಟರೆ ಬೇರೆ ವಿಷಯ ಇಲ್ಲವಾ ? ನಾವು ಕೋಲಾರ ಜಿಲ್ಲೆಯವರು ನಮ್ಮನ್ನು ನೀವೆಲ್ಲರೂ ಮರೆತೇ ಬಿಟ್ಟಿದ್ದೀರಿ. ಬೆಳಗಾಂನವರ ತರಹ ನಾವೂ ಈಗ ಒಂದು ಗಡಿ ಸಮಸ್ಯೆಯನ್ನು ಪ್ರಾರಂಭ ಮಾಡಬೇಕು, ನಾವೂ ಸರ್ಕಾರದ ಗಮನವನ್ನು ಆ ಕಡೆಗೆ ಸೆಳೆಯಬೇಕು. ಇದೇನಿದು ಪ್ರತಿ ಬಾರಿಯೂ ಇದೇ ಚರ್ಚೆ ಆಗುತ್ತಿದೆ.

ಅಧ್ಯಕ್ಷರು : ಮಾನ್ಯ ವೈಜನಾಥ್‌ರವರೇ, ನೀವು ಹಿರಿಯ ಸದಸ್ಯರು. ಎಷ್ಟು ಹೇಳಿದರೂ ನೀವು ಹೀಗೆ ಮಾಡಿದರೆ ಹೇಗೆ ? ಮಕ್ಕಳು ರಚ್ಚೆ ಹಿಡಿಯುತ್ತಾರಲ್ಲಾ ಆ ರೀತಿಯಲ್ಲಿ ರಚ್ಚೆ ಹಿಡಿದು ಮಾತನಾಡಿದರೆ ಹೇಗೆ ? ಇದು ಸರಿಯಲ್ಲ. ಬಹಳ ಜನ ಇನ್ನು ಮಾತನಾಡಬೇಕಾಗಿದೆ. ಈಗಾಗಲೇ ಸಮಯ 6.45 ಮೇಲೆ ಆಗಿದೆ. ಮಕ್ಕಳು ರಚ್ಚೆ ಹಿಡಿಯುವ ರೀತಿಯಲ್ಲಿ ಎಷ್ಟು ಹೇಳಿದರೂ ನೀವು ಮಾತನಾಡುತ್ತಿದ್ದರೆ ಹೇಗೆ ? ಹತ್ತು ನಿಮಿಷದಲ್ಲಿ ಮುಗಿಸಿ ಎಂದು ಹೇಳಿದೆ ನೀವು ಹಾಗೆ ಮಾಡಲಿಲ್ಲ. ಇದು ಸರಿ ಇಲ್ಲ. ನೀವೆಲ್ಲಾ ಸಹಕಾರ ಕೊಡದೇ ಇದ್ದರೆ ಹೇಗೆ ನಾವು ಸದನವನ್ನೂ ನಡೆಸುವುದು ?

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ತಾವೇ ಹೇಳಿದ್ದೀರಿ, ಗಂಭೀರವಾಗಿ ಆಗಬೇಕು, ಸುದೀರ್ಘವಾಗಿ ಚರ್ಚೆ ಆಗಬೇಕೆಂದು.

ಅಧ್ಯಕ್ಷರು : ಆಯಿತು, ಸುಮ್ಮನೆ ಕುಳಿತುಕೊಳ್ಳಿ ವಾಟಾಳ್ ನಾಗರಾಜ್‌ರವರೇ, ಇಲ್ಲಿ ಏನಾಗಿದೆ ನಮ್ಮ ಕಷ್ಟ ನಮಗೆ, ನಿಮಗೆ ತಮಾಷೆ ಆಗಿದೆ. ದಯಮಾಡಿ ಕುಳಿತುಕೊಳ್ಳಿ ಸ್ವಾಮಿ, ದಯಮಾಡಿ ತಾವು ಕುಳಿತುಕೊಳ್ಳಬೇಕು. ಇದು ಸರಿಯಲ್ಲ ನೀವು ಉಳಿದ ವಿಚಾರಗಳನ್ನು ಬಜೆಟ್ ಅಧಿವೇಶನದಲ್ಲಿ ಮಾತನಾಡಿ. ಅನೇಕ ಜನ ಮಾತನಾಡುವವರು ಇದ್ದಾರೆ, ದಯಮಾಡಿ ಅರ್ಥ ಮಾಡಿಕೊಳ್ಳಿ, ಇನ್ನು ಎರಡು ನಿಮಿಷದಲ್ಲಿ ಕನ್‌ಕ್ಲೂಡ್ ಮಾಡಿ. ಇಲ್ಲದಿದ್ದರೆ ಬೇರೆಯವರಿಗೆ ನಾನು ಕರೆಯುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ : ಇದರ ಬಗ್ಗೆ ಚರ್ಚೆ ಮಾಡಬೇಕು, ಕೇಂದ್ರ ಸರ್ಕಾರಕ್ಕೆ ಸೀರಿಯಸ್‌ನೆಸ್ ಇಲ್ಲ, ರಾಜ್ಯ ಸರ್ಕಾರಕ್ಕೂ ಸೀರಿಯಸ್‌ನೆಸ್ ಇಲ್ಲ ಹೀಗಾಗಿ ದೇಶದ ಡಿಸ್‌ಇಂಟಿಗ್ರೇಷನ್ ಹೇಗೆ ಆಗುತ್ತದೆ ಎಂದರೆ, ಹೀಗೆಯೇ ಆಗುತ್ತದೆ, ಇದನ್ನು ಡಿಸ್‌ಇಂಟಿಗ್ರೇಟ್ ಮಾಡಲಿಕ್ಕೆ ತಾವೇನು ಅವಕಾಶ ಮಾಡಿ ಕೊಡುತ್ತಿದ್ದೀರಿ, ಹಾಗೆ ಬಿಡಬೇಡಿ. XXX ಆದ ಮೇಲೆ ನಮಗಂತೂ ಬಹಳಷ್ಟು ತೊಂದರೆಯಾಗಿದೆ. ಅಸ್ಸಾಂ ಮತ್ತು ಪೂರ್ವಾಂಚಲದಲ್ಲಿ ಅಂತೂ ಬಹಳ ತೊಂದರಯಾಗಿದೆ. ದೇಶದಲ್ಲೆಲ್ಲಾ ಇವರು ನಕ್ಸಲೈಟ್ ತಯಾರು ಮಾಡುತ್ತಾರೆ.

ಅಧ್ಯಕ್ಷರು : ನೀವು ದಯಮಾಡಿ ಕುಳಿತುಕೊಳ್ಳಿ, ಮಾನ್ಯ ಶಿಕ್ಷಣ ಸಚಿವರು ಏನೋ ಪ್ರಕಟಣೆ ಮಾಡಬೇಕೆಂದು ಹೇಳಿದಿರಿ. ವೈಜನಾಥ್ ಪಾಟೀಲರೆ. ಕುಳಿತುಕೊಳ್ಳಿ ನಾನು ಈಗ ಮಾನ್ಯ ಶಿಕ್ಷಣ ಸಚಿವರನ್ನು ಕರೆದಿದ್ದೇನೆ. ಈಗೊಂದು ಪ್ರಕಟಣೆ ಇದೆ.

XXX ಈ ಪದಗಳನ್ನು ಮಾನ್ಯ ಸಭಾಧ್ಯಕ್ಷರವರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.